ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜುಲೈ 03, 2013 ಪುಟ 20 ರೂ. 14/-



ಕವಿಯತ್ರಿ ಮುಕ್ತಾಯಕ್ಕ ಸಂದರ್ಶನ

KAS ಹಗರಣ





ಮಂಗಳಾ ಶ್ರೀಧರ್ ಸುಳ್ಳು ಜಾತಿಪತ್ರ

ಗೋನಾಳ್ ಭೀಮಪ್ಪ ಜೈಲಿಗೆ?

ಗ್ರಾಮಪಂಚಾಯತಿ ನೌಕರರ ಸಂಕಷ್ಟಗಳು



ಗಾಳಕ್ಕೆ ಬಿದ್ದ ಪಾತಕಿ ನಿಖಿಲ್ ಶೆಟ್ಟಿ

ಅಮ್ಮನ ಲ್ಯಾಂಡ್ ಮಾಫಿಯಾ



ಂಗಳೂರು: ಗಂಗಭೈರಯ್ಯನ ಪುತ್ರನ ಪ್ರೇಮಪ್ರಕರಣ

ಅಂಚಿನಿಂದ



ಶಿಕ್ಷಣ ನೀತಿ: ಬಿಜೆಪಿಗೂ ಕಾಂಗ್ರೆಸ್‌ಗೂ ವ್ಯತ್ಯಾಸವಿದೆಯಾ?

ವಿಧಾನಸಭಾ ಚುನಾವಣೆಯ ತನ್ನ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷವು ಶಿಕ್ಷಣದ ಕುರಿತಾಗಿ ಹೇಳಿದ್ದುದರಲ್ಲಿ 'ಶಿಕ್ಷಣ ಸಾಮರಸ್ಯ ವಿದ್ಯಾಕೇಂದ್ರ'ದ ಹೊರತಾಗಿ ಬಹಳ ಹೊಸದೇನಿರಲಿಲ್ಲ, ಆದರೆ 11 ಅಂಶಗಳಲ್ಲಿ ಏನನ್ನು ಹೇಳಲಾಗಿತ್ತೋ ಅವು ಶಿಕ್ಷಣ ಕ್ಷೇತ್ರವನ್ನು ಬಲಪಡಿಸುವ ದೃಷ್ಟಿಯಿಂದ ಸಕಾರಾತ್ಮಕವೇ ಆಗಿದ್ದವು.

ಅವುಗಳಲ್ಲಿ ಈಗ ಗಮನಿಸಬೇಕಿರುವ ನಾಲ್ಕು ಅಂಶಗಳು ಹೀಗಿವೆ.

1. ಗ್ರಾಮಾಂತರ ಪ್ರದೇಶದಲ್ಲಿ ಇರುವ ಎಲ್ಲಾ ಸರ್ಕಾರಿ ಶಾಲೆಗಳನ್ನು ಶಿಕ್ಷಣ ಸಾಮರಸ್ಯ ವಿದ್ಯಾಕೇಂದ್ರಗಳನ್ನಾಗಿ ರೂಪಿಸಲು ಕ್ರಮ ಕೈಗೊಳ್ಳುವುದು. ಈ ನಿಟ್ಟಿನಲ್ಲಿ ಅಧ್ಯಾಪಕರಿಗೆ ವಸತಿಗೃಹಗಳು, ಕ್ರೀಡಾ ಸೌಲಭ್ಯ, ಉದ್ಯಾನವನ ಮತ್ತು ಕಂಪ್ಯೂಟರ್ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವುದು ಮತ್ತು ಸರ್ಕಾರಿ ಶಾಲೆಗಳನ್ನು ಯಾವುದೇ ಕಾರಣದಿಂದ ಮುಚ್ಚದಿರುವಂತೆ ಪರ್ಯಾಯ ಕ್ರಮ ಕೈಗೊಳ್ಳುವುದು.

2. ಎಲ್ಲಾ ಹಂತಗಳಲ್ಲಿರುವ ಶಿಕ್ಷಕರ ಖಾಲಿ ಸ್ಥಾನಗಳನ್ನು ತುಂಬಿಸುವುದು ಮತ್ತು ಈಗ ಅಲ್ಲಿ ಪಾಠ ಮಾಡುತ್ತಿರುವ ಅತಿಥಿ ಉಪನ್ಯಾಸಕರಿಗೆ ಆದ್ಯತೆ ನೀಡುವುದು.

3. ಶಿಕ್ಷಣ ಹಕ್ಕು ಕಾಯ್ದೆಯನ್ವಯ ಸರ್ಕಾರ ನಿಗದಿಪಡಿಸಿರುವ ಮೂರು ಲಕ್ಷಗಳ ಆದಾಯ ಮಿತಿಯನ್ನು 1.5 ಲಕ್ಷ ರೂ.ಗಳಿಗೆ ಇಳಿಸುವುದು.

4. ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕ ಮೌಲ್ಯಗಳು, ವ್ಯಕ್ತಿತ್ವ ವಿಕಸನ, ವೈಜ್ಞಾನಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುಗುಣವಾಗುವಂತೆ ರೂಪಿಸುವುದು.

ಇದಲ್ಲದೇ 'ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟದಲ್ಲಿ ಪೌಷ್ಟಿಕಾಂಶವನ್ನು ಹೆಚ್ಚಿಸುವುದು' ಇತ್ಯಾದಿಗಳೂ ಇದ್ದವು. ಈಗಾಗಲೇ ಮಕ್ಕಳಿಗೆ ಮಧ್ಯಾಹ್ನದ ಊಟದ ಜೊತೆಗೆ ನಂದಿನಿ ಹಾಲನ್ನು ನೀಡುವ ಕುರಿತು ಸರ್ಕಾರ ಪ್ರಕಟಿಸಿದೆ. ಹಸಿವಿನ ಸೂಚ್ಯಂಕದ ವಿಚಾರದಲ್ಲಿ ಕರ್ನಾಟಕವು ಈ ದೇಶದಲ್ಲಿ 11ನೇ ಸ್ಥಾನದಲ್ಲಿದ್ದು ಶೇ.38ರಷ್ಟು ಐದು ವರ್ಷದೊಳಗಿನ ಮಕ್ಕಳ ತೂಕ ಹಾಗೂ ಬೆಳವಣಿಗೆಯು ಕುಂಠಿತಗೊಂಡಿದೆಯೆಂದು ಸರ್ಕಾರೀ ವರದಿಗಳು ಹೇಳುತ್ತವೆ. ರುವಾಂಡ ಮತ್ತು ಕಾಂಬೋಡಿಯಾದಂತಹ ಹಿಂದುಳಿದ ದೇಶಗಳ ಪರಿಸ್ಥಿತಿಯ ಜೊತೆಗೆ ಇದು ಹೋಲುತ್ತದೆ. ಹಾಗಾಗಿ ಶಾಲಾಮಕ್ಕಳಿಗೆ ನೀಡಬೇಕಾದ ಪೌಷ್ಟಿಕ ಆಹಾರದ ಕಾರ್ಯಕ್ರಮವು ನಂದಿನಿ ಹಾಲಿಗಿಂತ ಇನ್ನೂ ಮುಂದಕ್ಕೆ ಹೋಗಬೇಕಿದೆ. ಅದೇನೇ ಇದ್ದರೂ, ಹಾಲು ನೀಡುವ ಕಾರ್ಯಕ್ರಮವನ್ನು ಎಲ್ಲರೂ ಸ್ವಾಗತಿಸಬೇಕು.

ಇದನ್ನು ಬಿಟ್ಟರೆ ಸದ್ಯಕ್ಕೆ ಶಿಕ್ಷಣ ಕ್ಷೇತ್ರದ ಕುರಿತಾಗಿ ಹೊಸ ಸರ್ಕಾರವು ಪ್ರಣಾಳಿಕೆಯ ಆಶ್ವಾಸನೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಇನ್ನೇನೂ ಮಾಡಿಲ್ಲ ಎನ್ನುವುದು ವಾಸ್ತವ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ್ ಅವರಿಗಾಗಲೀ ಅಥವಾ ಹೊಸ ಸರ್ಕಾರಕ್ಕಾಗಲೀ ಕೆಲಸ ಮಾಡಲು ಒಂದಷ್ಟು ಸಮಯವನ್ನು ನೀಡಬೇಕೆಂದು ಹಲವು ಆಶಾವಾದಿಗಳು ಫರ್ಮಾನು ಹೊರಡಿಸಿದ್ದಾರೆ. ಹಾಗಾಗಿ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಇರುವ ಇತರ ಆರು ಅಂಶಗಳನ್ನು ಈ ಬಜೆಟ್‌ನಲ್ಲೋ ಅಥವಾ ನಂತರದ ಬಜೆಟ್‌ನಲ್ಲೋ ಈಡೇರಿಸುತ್ತದೆಂದು ಭಾವಿಸೋಣ. ಪ್ರಣಾಳಿಕೆಯಲ್ಲಿ ಇರದಿದ್ದ, ಆದರೆ ಈ ನಾಡಿನ ಪ್ರಜಾತಂತ್ರ ಹಾಗೂ ಸಿದ್ದರಾಮಯ್ಯನವರು ಬಸವಣ್ಣನವರ ಸಾಕ್ಷಿಯಾಗಿ ಹೇಳುತ್ತಿರುವ ಸಮಾನತೆಯ ಕಾರಣಕ್ಕೆ, ಅತ್ಯಗತ್ಯವಾಗಿ ತರಲೇಬೇಕಾದ ಮತ್ತಷ್ಟು ಬದಲಾವಣೆಗಳನ್ನು ತರಲೂ ಇನ್ನೊಂದಷ್ಟು ಸಮಯವನ್ನು ಕೊಡೋಣ.


ಆದರೆ ತನ್ನದೇ ಪ್ರಣಾಳಿಕೆಯಲ್ಲಿ ಹೇಳಿಕೊಂಡಿದ್ದ (ಲೇಖನದ ಆರಂಭದಲ್ಲಿ ಹೇಳಲಾದ) ನಾಲ್ಕು ಅಂಶಗಳಿಗೆ ವಿರುದ್ಧವಾದ ನಡೆಗಳನ್ನು ಸರ್ಕಾರವು ಈಗಾಗಲೇ ಕೈಗೊಂಡಿದೆ. ಹಾಗೂ ಆ ನಡೆಗಳು ಪ್ರಜಾತಂತ್ರ ಮತ್ತು ಸಮಾನತೆಯ ಆಶಯಕ್ಕೂ ವಿರುದ್ಧವಾದ್ದರಿಂದ ಸಂಬಂಧಪಟ್ಟವರ ಗಮನ ಸೆಳೆಯುವುದು ಅತ್ಯಂತ ಅಗತ್ಯವಿದೆ.

1. ಖಾಲಿ ಇರುವ 12,000 ಶಿಕ್ಷಕರ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು ಎಂದು ಸ್ವತಃ ಕಿಮ್ಮನೆ ರತ್ನಾಕರ್ ಅವರೇ ಘೋಷಿಸಿದ್ದಾರೆ.

2. ಅತಿಥಿ ಉಪನ್ಯಾಸಕರನ್ನು ಕಾಯಂ ಮಾಡಿಕೊಳ್ಳುವಂತಹ ಯಾವ ಪ್ರಸ್ತಾಪವನ್ನೂ ಸರ್ಕಾರ ಹೊರಡಿಸಿಲ್ಲ; ಬದಲಿಗೆ, ಕಾಮರ್ಸ್ ವಿಭಾಗದಲ್ಲಿ ಪಾಠ ಮಾಡುತ್ತಿದ್ದ ಸಾವಿರಾರು ಅರ್ಥಶಾಸ್ತ್ರದ ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಅದೇರೀತಿ ಭಾಷಾ ಬೋಧನೆ ಮಾಡುತ್ತಿದ್ದವರೂ ಸಹ. ಏಕೆಂದರೆ ಕಾಮರ್ಸ್ ಪದವಿ ಕೋರ್ಸ್‌ನಲ್ಲಿ ಇನ್ನು ಮುಂದೆ ಹಳೆಯ ರೀತಿಯ ಎಕನಾಮಿಕ್ಸ್ ಇರದು; ಕಾಮರ್ಸ್ ಉಪನ್ಯಾಸಕರೇ ಬೋಧಿಸಬಲ್ಲ ಪಠ್ಯ ಮಾತ್ರ ಇರುತ್ತದೆ. ಬಿಎ, ಬಿಕಾಂ ಮತ್ತು ಬಿಎಸ್ಸಿ ಪದವಿ ಕೋರ್ಸ್‌ಗಳಲ್ಲಿ ಭಾಷಾ ಪಠ್ಯ ಇನ್ನು ಮುಂದೆ ಒಂದೇ ಆಗಿರುತ್ತದೆ.

3. ಬಿಸಿಯೂಟ ತಯಾರಿಕೆಯ ಸಹಾಯಕರನ್ನು ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಸ್ವಯಂಸೇವಾ ಸಂಸ್ಥೆಗಳಿಗೆ ನೀಡಲಾಗುತ್ತದೆ.

4. ಪಠ್ಯಪುಸ್ತಕಗಳನ್ನು ಹಾಳುಗೆಡವಿರುವ ಕೋಮುವಾದಿ, ಜಾತಿವಾದಿ, ಭ್ರಷ್ಟ ಬಿಜೆಪಿ ಸರ್ಕಾರದ ಕ್ರಮವನ್ನು




ಸರಿಮಾಡಲು ಈ ವರ್ಷ ಯಾವುದೇ ಕ್ರಮವಿರುವುದಿಲ್ಲ.

ಐದನೆಯ ಅಂಶವು ಇನ್ನೂ ಗಾಬರಿಗೊಳಿಸುವಂತಿದೆ. ಇದುವರೆಗೂ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶುಲ್ಕ ನಿಗದಿ ಮಾಡಲು ಒಂದು ಮುಖ್ಯವಾದ ಸೂತ್ರವನ್ನು 'ಕರ್ನಾಟಕ ಶಿಕ್ಷಣ ಕಾಯ್ದೆ'ಯು ಹೊಂದಿತ್ತು. ಅದು ಯಾವ ಕಾರಣಕ್ಕೂ ಶಿಕ್ಷಣವು ವ್ಯಾಪಾರವಾಗದಿರುವಂತೆ ನೋಡಿಕೊಳ್ಳುವ ಸೂತ್ರವಾಗಿತ್ತು. (ಇದನ್ನು ಸರಿಯಾಗಿ ಪಾಲಿಸುತ್ತಿರಲಿಲ್ಲ ಎಂಬುದು ಬೇರೆ ಮಾತು.) ಇದರಿಂದ ತಪ್ಪಿಸಿಕೊಳ್ಳಲು ಎಲ್ಲಾ ಶಿಕ್ಷಣ ಸಂಸ್ಥೆಗಳು ಹೆಚ್ಚುವರಿ ಹಣವನ್ನು ವಿದ್ಯಾರ್ಥಿ/ನಿಯ ತಂದೆಯ ಹೆಸರಿನಲ್ಲಿ, ಶಾಲಾಭಿವೃದ್ಧಿ ದೇಣಿಗೆಯ ರೂಪದಲ್ಲಿ ಪಡೆಯುವ ಅಡ್ಡಮಾರ್ಗ ಹಿಡಿದಿದ್ದವು. ಇದನ್ನು ಪರಿಷ್ಕರಿಸಿ, ಕಾನೂನುಬದ್ಧವಾಗಿಯೇ ಲಾಭದ ಶುಲ್ಕ ಪಡೆಯಲು ಸಾಧ್ಯವಾಗುವಂತೆ ಒಂದು ಹುನ್ನಾರ ನಡೆಯುತ್ತಿದೆ. ಇರುವ ನೀತಿಯನ್ನೇ ಜಾರಿಗೊಳಿಸಲು ಆಗ್ರಹಿಸಿ ಹೈಕೋರ್ಟ್‌ನಲ್ಲಿ ಸಲ್ಲಿಸಲಾದ ಮೊಕದ್ದಮೆಯೊಂದರಲ್ಲಿ ನ್ಯಾಯಮೂರ್ತಿಗಳು ಸರ್ಕಾರದ ನಿಲುವನ್ನು ಸ್ಪಷ್ಟಪಡಿಸುವಂತೆ ಸೂಚಿಸಿದ್ದರು. ಆದಕ್ಕಾಗಿ 'ಸಂಬಂಧಪಟ್ಟವರೆಲ್ಲರ' ಅಭಿಪ್ರಾಯವನ್ನು ಕೇಳಬೇಕಿದ್ದ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಖಾಸಗಿ ಸಂಸ್ಥೆಗಳ ಮಾಲೀಕರನ್ನು ಮಾತ್ರ ಕರೆದು, ಅವರಿಗೆ ಪೂರಕವಾಗಿ ನೀತಿಯನ್ನು ಬದಲಾಯಿಸುವ ತಂತ್ರ ರೂಪಿಸಿದರು. ಇಡೀ ಪ್ರಕ್ರಿಯೆಯೇ ಒಂದು ಮ್ಯಾಚ್ ಫಿಕ್ಸಿಂಗ್‌ನಂತೆ ಕಾಣುತ್ತಿತ್ತು, ಇದು ಹೊಸ ಸರ್ಕಾರ ಬಂದಮೇಲೆ ನಡೆದದ್ದು. ಇದರಲ್ಲಿ ಮಧ್ಯೆ ಪ್ರವೇಶಿಸಿ, ಅಧಿಕಾರಿಗಳ ಜನವಿರೋಧಿ ಉದ್ಧಟತನಕ್ಕೆ ಕಡಿವಾಣ ಹಾಕಲು ಸಂಬಂಧಪಟ್ಟ ಮಂತ್ರಿಗಳು ನಿರಾಕರಿಸಿದರು.

ಒಂದೆಡೆ ಪ್ರಣಾಳಿಕೆಯಲ್ಲಿ ಶಿಕ್ಷಕರಿಗೆ ವಸತಿಗೃಹಗಳನ್ನೂ ನಿರ್ಮಿಸುವ, ಅತಿಥಿ ಉಪನ್ಯಾಸಕರನ್ನು ಕಾಯಂ ಮಾಡಿಕೊಳ್ಳುವಂತಹ ಆಶ್ವಾಸನೆ; ಇನ್ನೊಂದೆಡೆ ಇರುವ ಉಪನ್ಯಾಸಕರನ್ನೂ ಅಭದ್ರಗೊಳಿಸುವ ಮತ್ತು ಹೊಸದಾಗಿ ಅಭದ್ರ ನೌಕರರನ್ನು ನೇಮಕ ಮಾಡಿಕೊಳ್ಳುವ ಪ್ರಯತ್ನ. ಒಂದೆಡೆ ಶಿಕ್ಷಣ ಹಕ್ಕು ಕಾಯ್ದೆಯ ಒಂದು ನಿಯಮವನ್ನು ಕಡಿಮೆ ಆದಾಯವಿರುವವರ ಪರವಾಗಿ ಬದಲಾಯಿಸುವ ಭರವಸೆ; ಇನ್ನೊಂದೆಡೆ ಶಿಕ್ಷಣ ಸಂಸ್ಥೆಗಳನ್ನು ಲಾಭಕೋರ ಸಂಸ್ಥೆಗಳನ್ನಾಗಿ ಮಾಡಲು ಕಾನೂನಿನ ಮಾನ್ಯತೆ ನೀಡುವ ಪ್ರಯತ್ನ. ಕರ್ನಾಟಕ ಶಿಕ್ಷಣ ಕಾಯ್ದೆಯ ನಿಯಮವನ್ನು ತಿರುಚುವ ಈ ಪ್ರಯತ್ನದ ದೂರಗಾಮಿ ಪರಿಣಾಮಗಳು ಬಹಳ ಗಂಭೀರವಾದುದಾಗಿದೆ. ಇದಕ್ಕೆ 'ಶಿಕ್ಷಣ ಹಕ್ಕು ಕಾಯ್ದೆ 2009' ಸಹ ಅವಕಾಶ ನೀಡುವುದರಿಂದ ಕರ್ನಾಟಕದಲ್ಲಿ ಇದುವರೆಗೆ ಅಸ್ತಿತ್ವದಲ್ಲಿದ್ದ ಒಂದು ಜನಪರವಾದ, ಖಾಸಗಿ ಲಾಬಿಯ ವಿರುದ್ಧವಿದ್ದ ನಿಯಮವನ್ನು ದರೋಡೆಕೋರರ ಪರವಾಗಿ ಬದಲಾಯಿಸಿದ ಕೀರ್ತಿ ಈ ಸರ್ಕಾರಕ್ಕೆ ಸಿಗುತ್ತದೆ. ಇದು ಹೈಕೋರ್ಟ್‌ನಲ್ಲೂ ಮಾನ್ಯಗೊಳ್ಳುವುದರಿಂದ ಮತ್ತೆ ಬದಲಾಯಿಸುವುದು ಕಷ್ಟ. ಆದರೆ, ಶಿಕ್ಷಣ ಸಚಿವರಿಗೆ ಇದರ ಬಗ್ಗೆ ಮನವಿ ಪತ್ರವನ್ನು ನೀಡಿದರೂ ಪ್ರಯೋಜನವಾಗಲಿಲ್ಲ. ಹಾಗಾದರೆ ಹೊಸ ಸರ್ಕಾರದ ಉದ್ದೇಶವೇನು? ಯಾವ ಬದ್ಧತೆಯನ್ನು ಇವರು ಪ್ರಜಾತಂತ್ರಕ್ಕೆ, ಜನರಿಗೆ, ತಮ್ಮದೇ ಪ್ರಣಾಳಿಕೆಗೆ ಪ್ರದರ್ಶಿಸುತ್ತಾರೆ ಎಂಬ ಪ್ರಶ್ನೆ ಏಳುತ್ತದೆ.

ಹಾಗೆಯೇ ಎನ್‌ಜಿಓಗಳೆಂಬ ದುಷ್ಟಕೂಟವು ಬೇರೆ ಬೇರೆ ರೀತಿಯಲ್ಲಿ ಶಿಕ್ಷಣ ಕ್ಷೇತ್ರದೊಳಗೆ ನುಸುಳಲು ಪ್ರಯತ್ನಪಡುತ್ತಿದೆ. ಇಸ್ಕಾನ್ ಹೆಸರಿನಲ್ಲಿ, ಅದಮ್ಯ ಚೇತನದ ಹೆಸರಿನಲ್ಲಿ, ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಹೆಸರಿನಲ್ಲಿ ಹತ್ತು ಹಲವು ಆಕರ್ಷಕ ಕಾರ್ಯಕ್ರಮಗಳ ರೂಪದಲ್ಲಿ. ಅವುಗಳಿಗೆ ಕಡಿವಾಣ ಹಾಕುವ ವಿಚಾರ ಪರಿಶೀಲಿಸುತ್ತೇವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ 'ಲಂಕೇಶ್'ಗೆ ನೀಡಿದ ಸಂದರ್ಶನದಲ್ಲಿ ಹೇಳುತ್ತಾರೆ. ಆದರೆ ಇಂತಹುದೇ ಎನ್‌ಜಿಓಗಳಿಗೆ ಅಡುಗೆ ಸಹಾಯಕರನ್ನು ನೇಮಕ ಮಾಡಿಕೊಳ್ಳುವ ಅಧಿಕಾರ ನೀಡುತ್ತೇವೆ ಎಂದು ಶಿಕ್ಷಣ ಸಚಿವರು ನುಡಿಯುತ್ತಾರೆ.

ಇನ್ನು ಪಠ್ಯಪುಸ್ತಕಗಳ ವಿಚಾರವೂ ಗಂಭೀರವಾದುದಾಗಿತ್ತು. ಪಠ್ಯಪುಸ್ತಕಗಳ ಕೇಸರೀಕರಣಕ್ಕೆ ಸಂಘಪರಿವಾರದ ವಟುಗಳು ಸಜ್ಜಾದಾಗ, ಒಂದು ವಿಚಾರ ಸಂಕಿರಣದಲ್ಲಿ (ಮಲ್ಲೇಶ್ವರದ ಟಾಟಾ ಇನ್‌ಸ್ಟಿಟ್ಯೂಟ್‌ನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ) ಮುಖ್ಯಮಂತ್ರಿ ಯಡಿಯೂರಪ್ಪ ಮಾರ್ಗದರ್ಶನ ಮಾಡಿದ್ದು ಹೀಗೆ: "ಏನನ್ನು ಮಾಡಬೇಕೋ ಅದನ್ನು ಮಾಡಿ; ಅದನ್ನು ಬಹಿರಂಗವಾಗಿ ಹೇಳಲು ಹೋಗಬೇಡಿ. ಸುಮ್ಮನೇ ಕೆಲವರು ವಿವಾದ ಮಾಡುತ್ತಾರೆ." ಸ್ಪಷ್ಟವಾದ ಹಿಡನ್ ಅಜೆಂಡಾ ಹೊಂದಿದ್ದ ಬಿಜೆಪಿಯವರು ಅಲ್ಲಿಂದ ಮುಂದಕ್ಕೆ ತಾವೇನು ಮಾಡಬೇಕೆಂದು ಉದ್ದೇಶಿಸಿದ್ದರೋ ಅದನ್ನು ಮಾಡಿದರು. ಕಾಂಗ್ರೆಸ್ ಒಂದು ವೇಳೆ ಹೆಚ್ಚು ಪ್ರಚಾರಕ್ಕೆ ತಾರದೇ ಪ್ರಜಾತಂತ್ರ, ಜಾತ್ಯತೀತತೆಯ ಮೌಲ್ಯಗಳಿಗೆ ತಕ್ಕ ಹಾಗೆ ಪಠ್ಯಪುಸ್ತಕಗಳನ್ನು ಪರಿಷ್ಕರಿಸುತ್ತದೆ ಎಂದು ಯಾರಾದರೂ ತಿಳಿದಿದ್ದರೆ ಅದು ಸುಳ್ಳು. ಅಂತಹ ಯಾವ ಬದ್ಧತೆಯನ್ನೂ ಹೊಸ ಸರ್ಕಾರವು ಪ್ರದರ್ಶಿಸುತ್ತಿಲ್ಲ. ಮುಂದಿನ ವರ್ಷದಲ್ಲಿ ಅದನ್ನು ಮಾಡುತ್ತೇವೆ ಎಂದು ಹೇಳುತ್ತಿರುವುದು, ಕಾಂಗ್ರೆಸ್ ಸರ್ಕಾರಕ್ಕೆ ಇದರ ಬಗ್ಗೆ ತೋರಿಕೆಯ ಕಾಳಜಿಯಷ್ಟೇ ಇದೆ ಎಂಬುದನ್ನು ತೋರಿಸುತ್ತದೆ.



1986ರ ಹೊಸ ಶಿಕ್ಷಣ ನೀತಿಯ ನಂತರ ದೇಶದ ಬೇರೆ ಬೇರೆ ಭಾಗಗಳಲ್ಲಿ ಗುತ್ತಿಗೆ ಶಿಕ್ಷಕರು, ಅನೌಪಚಾರಿಕ ಶಿಕ್ಷಕರ ಹೆಸರಿನಲ್ಲಿ ಅಭದ್ರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿತ್ತು, ಆದರೆ ಕರ್ನಾಟಕದಲ್ಲಿ ಕಾಯಂ ಶಿಕ್ಷಕರು ಮಾತ್ರವಿದ್ದರು. ಕಾಲೇಜುಗಳಿಗೆ ಮಾತ್ರ ಗುತ್ತಿಗೆ/ಅರೆಕಾಲಿಕ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಕೆಟ್ಟ ಪರಂಪರೆ ಆರಂಭವಾಗಿತ್ತು, ಈಗ ಕಾಂಗ್ರೆಸ್ ಸರ್ಕಾರವು ಅದನ್ನು ಪ್ರಾಥಮಿಕ ಶಿಕ್ಷಣಕ್ಕೂ ವಿಸ್ತರಿಸುವ ಆಘಾತಕಾರಿ ಕ್ರಮಕ್ಕೆ ಕೈ ಹಾಕಿದೆ. ಕಡಿಮೆ ಕೂಲಿಗೆ ಶಿಕ್ಷಕರನ್ನು ದುಡಿಸಿಕೊಳ್ಳುವ ಖಾಸಗಿ ಸಂಸ್ಥೆಗಳಿಗೂ, ಸರ್ಕಾರಕ್ಕೂ ವ್ಯತ್ಯಾಸವೇ ಇಲ್ಲದ ಹಾಗೆ ಮಾಡುವ ಕ್ರಮ ಇದಾಗಿದೆ.

ಹಾಲಿ ಈ ರಾಜ್ಯದಲ್ಲಿ ಎರಡು ಲಕ್ಷ ಪ್ರಾಥಮಿಕ ಶಾಲಾ ಶಿಕ್ಷಕರಿದ್ದಾರೆ (ಮುಖ್ಯ ಶಿಕ್ಷಕರೂ ಸೇರಿ). ಶಿಕ್ಷಣ ಸಚಿವ ಕಿಮ್ಮನೆಯವರು 'ಲಂಕೇಶ್' ಸಂದರ್ಶನದಲ್ಲಿ ಹೇಳಿರುವ ಪ್ರಕಾರ 10,500 ಕೋಟಿ ಹಣ ಶಿಕ್ಷಕರ ಸಂಬಳ ಇತ್ಯಾದಿಗಳಿಗೆ ಖರ್ಚಾಗುತ್ತದೆ. ಅಂದರೆ ಇನ್ನೂ 12,000 ಶಿಕ್ಷಕರನ್ನು ನೇಮಿಸಿಕೊಳ್ಳುವುದರಿಂದ ಕೇವಲ 630 ಕೋಟಿ ರೂ. ಹೆಚ್ಚು ಹಣ ಬೇಕಾಗುತ್ತದೆ. ಶಿಕ್ಷಣದಂತಹ ಕ್ಷೇತ್ರಕ್ಕೆ ಇಷ್ಟನ್ನು ವ್ಯಯಿಸಲು ಸಾಧ್ಯವಾಗದ ಸರ್ಕಾರವನ್ನು ಏನೆಂದು ಹೇಳಬೇಕು? ಇದು ಕೇವಲ ಹಣಕಾಸಿನ ವಿಚಾರವಲ್ಲ, ಈಗಾಗಲೇ ನೂರೆಂಟು ಕ್ಷೇತ್ರಗಳಲ್ಲಿ ಗುತ್ತಿಗೆ/ದಿನಗೂಲಿ ಹೆಸರಿನಲ್ಲಿ ಕಾರ್ಮಿಕರನ್ನು ಜೀತ ಮಾಡಿಸಲಾಗುತ್ತಿದೆ. ಸದಾ ಅಭದ್ರತೆಯಲ್ಲಿಟ್ಟು ಶೋಷಣೆಗೆ ಗುರಿ ಮಾಡುವ ಗುತ್ತಿಗೆ ಪದ್ಧತಿ ಅಮಾನವೀಯವಾದುದು.

ಸರ್ಕಾರ ಅಧಿಕಾರಕ್ಕೆ ಬಂದ 50 ದಿನಗಳೊಳಗೆ ಈ ರೀತಿಯ ಶಿಕ್ಷಣ ವಿರೋಧಿ ಕ್ರಮಗಳಿಗೆ ಮತ್ತು ತನ್ನದೇ ಪ್ರಣಾಳಿಕೆಯ ಆಶಯಗಳಿಗೆ ವಿರುದ್ಧವಾಗಿ ನಡೆದ ಕಾಂಗ್ರೆಸ್ ಸರ್ಕಾರವು ಬಿಜೆಪಿ ಸರ್ಕಾರಕ್ಕಿಂತ ಹೇಗೆ ಭಿನ್ನ ಎಂದು ಕೇಳುವ ಮುನ್ನ ಸಂಬಂಧಪಟ್ಟವರು ಎಚ್ಚೆತ್ತುಕೊಳ್ಳುತ್ತಾರೆಯೇ? ●

ಅತಿಥಿ ಉಪನ್ಯಾಸಕರು ಮತ್ತು ಯುಜಿಸಿ ವೇತನ ಪಡೆಯುವ 'ಪ್ರೊಫೆಸರ್'ಗಳು

ಹಿಂದೆಯೂ ಕರ್ನಾಟಕದ ಕಾಲೇಜುಗಳಲ್ಲಿ ಅರೆಕಾಲಿಕ (ಪಾರ್ಟ್‌ಟೈಂ) ಉಪನ್ಯಾಸಕರು ಎಂದು ಕರೆಸಿಕೊಳ್ಳುತ್ತಿದ್ದವರು ಇದ್ದರು. ಆ ನಂತರ ಜಾಗತೀಕರಣದ ಗಾಳಿಯು ಪೂರ್ಣಪ್ರಮಾಣದಲ್ಲಿ ಬೀಸಲಾರಂಭಿಸಿದ ಮೇಲೆ ಇದಕ್ಕೊಂದು ವ್ಯವಸ್ಥಿತವಾದ ರೂಪವನ್ನು ಕಂಡುಕೊಳ್ಳಲಾಯಿತು. ಅದರ ಭಾಗವಾಗಿ ಅತಿಥಿ ಉಪನ್ಯಾಸಕರು ಎಂಬ ಹೆಸರಿನಲ್ಲಿ ರಾಜ್ಯದ ಪ್ರತಿಯೊಂದು ಕಾಲೇಜಿನಲ್ಲಿ ಜೀತಕ್ಕೆ ನೇಮಕ ಮಾಡಿಕೊಳ್ಳುವುದು ಆರಂಭವಾಯಿತು. ಈ ನೇಮಕದ ಕೆಲವು ನಿಯಮಾವಳಿಗಳು ವ್ಯವಸ್ಥಿತವಾದರೂ, ಸಂಬಳ ನೀಡುವಲ್ಲಿನ ಅವ್ಯವಸ್ಥೆ ಅನಿಶ್ಚಿತತೆಯೇನೂ ಕಡಿಮೆಯಾಗಿಲ್ಲ. ಆರು ತಿಂಗಳಿಗೆ ಒಮ್ಮೆ ಸಂಬಳ ಬಂದರೆ ಅದೃಷ್ಟವೆಂದು ಭಾವಿಸಬೇಕು.

ಇದೇ ಅವಧಿಯಲ್ಲಿ ಕಾಯಂ ಉಪನ್ಯಾಸಕರ (ಈಗ ಅವರು ಅಸಿಸ್ಟೆಂಟ್, ಅಸೋಸಿಯೇಟ್ ಮತ್ತು ಪ್ರೊಫೆಸರ್‌ಗಳೆಂಬ ಬಿರುದಾಂಕಿತರು) ವೇತನದಲ್ಲಿ ಸಿಕ್ಕಾಪಟ್ಟೆ ಹೆಚ್ಚಳವಾಯಿತು. 'ಯುಜಿಸಿ ಸ್ಕೇಲ್' ಎಂದರೆ ಅದರಲ್ಲಿ ಮೆಚ್ಚುಗೆಯೂ, ವ್ಯಂಗ್ಯವೂ ಜೊತೆಜೊತೆಗೇ ಬೆರೆತಿರುವ ಮಟ್ಟಿಗೆ ಜನಪ್ರಿಯವಾಯಿತು. ಹೊಸ ಕಾಲೇಜುಗಳು ಆರಂಭವಾದವು. ಅದಕ್ಕೆ ತಕ್ಕಂತೆ ಹೊಸ ನೇಮಕಾತಿಗಳು ನಡೆಯಲಿಲ್ಲ. ಇದರ ಪರಿಣಾಮವಾಗಿ ಇಂದು ದೊಡ್ಡ ಸಂಖ್ಯೆಯ ಕಾಲೇಜುಗಳಲ್ಲಿ ಕಾಯಂ ಶಿಕ್ಷಕರಿಗಿಂತ ಅತಿಥಿ ಉಪನ್ಯಾಸಕರದ್ದೇ ಹೆಚ್ಚಿನ ಸಂಖ್ಯೆ. ಕಳೆದ ವರ್ಷ ಇವರನ್ನು ಅತಿಥಿಗಳೆಂದು ಕರೆಯುವ ಬದಲು ಬಾಡಿಗೆ ಶಿಕ್ಷಕರೆಂದು ಕರೆಯಲು ಸರ್ಕಾರ ಸುತ್ತೋಲೆಯೊಂದರಲ್ಲಿ ಸೂಚಿಸಿತ್ತು. ಹೊಸ ಹೆಸರನ್ನು ಹಿಂತೆಗೆದುಕೊಂಡಿತು; ಪರಿಸ್ಥಿತಿಯಲ್ಲೇನೂ ಬದಲಾವಣೆ ಬರಲಿಲ್ಲ.

ಮಿಕ್ಕೆಲ್ಲಾ ಅಸಂಘಟಿತ ಕಾರ್ಮಿಕರಿಗಿಂತ ಈ ಸುಶಿಕ್ಷಿತ ಸಮುದಾಯವು ಸಂಘಟಿತಗೊಳ್ಳಲು ಹೆದರುವುದು ಮಾತ್ರ ಆಶ್ಚರ್ಯದ ಸಂಗತಿ. ಹೆಚ್ಚೆಚ್ಚು ಸುಶಿಕ್ಷಿತವಾದಷ್ಟೂ ಹೆಚ್ಚೆಚ್ಚು ವ್ಯವಸ್ಥೆಯ ಜೊತೆ ರಾಜಿ ಮಾಡಿಕೊಳ್ಳುವುದು ಜಾಗತೀಕರಣದ ಮತ್ತೊಂದು ಪರಿಣಾಮವೂ ಇರಬಹುದು. ಇದು ಕಾಯಂ ಪ್ರೊಫೆಸರ್‌ಗಳ ಮನೋಭಾವದಲ್ಲಿ ಢಾಳಾಗಿ ಎದ್ದು ಕಾಣುತ್ತದೆ. ಬುಕ್ಟಾ, ಅಮುಕ್ತ್‌ದಂತಹ ವಿಶ್ವವಿದ್ಯಾಲಯ ಮಟ್ಟದ ಶಿಕ್ಷಕರ ವೃಂದಗಳೂ, ಫುಕ್ಟಾಕ್‌ನಂತಹ ರಾಜ್ಯ ಮಟ್ಟದ ಒಕ್ಕೂಟಗಳೂ ಅತಿಥಿ ಉಪನ್ಯಾಸಕರ ಪರವಾಗಿ ಬೀದಿಗಿಳಿದ ಉದಾಹರಣೆಗಳಿಲ್ಲ. ಬೀದಿಗಿಳಿಯುವುದು ಹೋಗಲಿ, ತಮ್ಮ ಕಾಲೇಜುಗಳ ಮಟ್ಟದಲ್ಲಾದರೂ ಅವರ ಪರವಾಗಿ ದನಿಯೇರಿಸದಷ್ಟು ಪ್ರೊಫೆಸರ್‌ಗಳು ಸ್ವ ಕೇಂದ್ರಿತವಾಗಿದ್ದಾರೆ.

ಎಲ್ಲಾ ಶೋಷಿತ ಸಮುದಾಯಗಳ ಪರವಾಗಿ ಪ್ರತಿಭಟನೆ ಮಾಡುತ್ತಿದ್ದ 80ರ ದಶಕಕ್ಕೆ ಹಿಂದಿನ ಅಧ್ಯಾಪಕ ಸಮುದಾಯದ ಮನೋಭಾವ ಸಂಪೂರ್ಣವಾಗಿ ಮರೆಯಾಗಿದೆ. ಯುಜಿಸಿ ಸ್ಕೇಲ್ ಸಂಬಳ ಇವರ ಬಾಯಿ ಮುಚ್ಚಿಸಿದೆಯೇ?

ಅದರಲ್ಲಿ ಕಾಲು ಭಾಗ ಸಂಬಳವನ್ನೂ ಪಡೆಯದ ಅತಿಥಿ ಉಪನ್ಯಾಸಕರಾದರೂ ಸಂಘಟಿತರಾಗುವರೇ?

ಇಡೀ ಮಾನವ ಕುಲಕ್ಕೆ ಜನ್ಮ ನೀಡಿದ ಸ್ತ್ರೀ




• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಸಾಮಾನ್ಯವಾಗಿ ಇತಿಹಾಸಕಾರರು ಮಾನವಕುಲದ ಮೂಲ ಇರುವುದು ಆಹಾರಕ್ಕಾಗಿ ಬೇಟೆಯಾಡುತ್ತಿದ್ದ ಅದಕ್ಕೆಂದು ಸಲಕರಣೆಗಳನ್ನು ತಯಾರಿಸಿದ ಪುರುಷನಲ್ಲಿ ಎಂದು ವಾದಿಸುತ್ತಾರೆ. ಆದರೆ ವಾಸ್ತವವಾಗಿ ಮಾನವಕುಲದ ಕತೆ ಪ್ರಾರಂಭವಾಗುವುದು ಪುರುಷನಿಂದಲ್ಲ, ಬದಲಾಗಿ ಮಹಿಳೆಯಿಂದ. ಯಾಕೆಂದರೆ ಆಕೆಯೇ ಆದಿಕಾಲದಿಂದ ಇವತ್ತಿನ ತನಕ ತನ್ನ ದೇಹದಲ್ಲಿ ಮಾನವನ ಮೂಲ ಮಾತೃಕೆಯನ್ನು ಹೊತ್ತುಬಂದಿರುವುದು. ಮಾತ್ರವಲ್ಲ, ಆಕೆ ವಿಕಾಸದ ಪ್ರಕ್ರಿಯೆಯಲ್ಲಿ ತನ್ನ ದೇಹದೊಳಗೆ ಮಾಡಿಕೊಂಡ ಬದಲಾವಣೆಯಿಂದಾಗಿಯೇ ಮಾನವವಂಶ ಬೆಳೆಯುವಂತೆ ಮಾಡಿದಳು. ಅಷ್ಟೇ ಮುಖ್ಯವಾಗಿ ಮಹಿಳೆಯಲ್ಲಿ ಬೆಳೆದ ಮಾತೃತ್ವ ಗುಣವೇ ಮನುಷ್ಯರಲ್ಲಿ ಸಂವಹನ ಕಲೆ ಮತ್ತು ಸಾವಯುವ ಗುಣ ಮೂಡಿ ನಾಗರಿಕತೆ ಬೆಳೆಯಲು ಕಾರಣವಾಯಿತು ಎಂದರೆ ಹಲವರಿಗೆ ಆಶ್ಚರ್ಯವಾಗಬಹುದು. ಆದರೂ ಇದು ಸತ್ಯ.

ಈಗ ವಿಜ್ಞಾನಿಗಳು ಕೂಡ "ಮಹಿಳೆಯೇ ಮಾನವಕುಲದ ಬಲಶಾಲಿ ಮೂಲ ಲಿಂಗ. ಪುರುಷ ಹೆಚ್ಚೆಂದರೆ ಅನುಬಂಧ" ಎಂದು ಒಪ್ಪಿಕೊಳ್ಳುತ್ತಾರೆ. ಇದಕ್ಕೆ ಮುಖ್ಯ ಕಾರಣ ಮನುಷ್ಯರ ಜೀವಕೋಶದ ರಚನೆಯಲ್ಲಿ ಮಹಿಳೆಯ 'ಎಕ್ಸ್' ಕ್ರೋಮಸೋಮ್ ಪ್ರಧಾನವಾಗಿರುವುದು. ಹೆಣ್ಣುಮಕ್ಕಳು ಹುಟ್ಟುವಾಗ ಅವರು ಮತ್ತೊಂದು 'ಎಕ್ಸ್' ಕ್ರೋಮಸೋಮ್‌ಅನ್ನು ಪಡೆಯುತ್ತಾರೆ. ಆದರೆ ಗಂಡು ಮಕ್ಕಳು ಹುಟ್ಟುವಾಗ ಅವರು ಬೇರೆಯದೇ ಆದ 'ವೈ' ಕ್ರೋಮಸೋಮ್‌ಅನ್ನು ಪಡೆಯುತ್ತಾರೆ. ವಿಜ್ಞಾನಿಗಳು 'ವೈ' ಕ್ರೋಮಸೋಮ್‌ಅನ್ನು 'ಎಕ್ಸ್' ಕ್ರೋಮಸೋಮಿನ ಅಂಗವಿಕಲ ರೂಪ ಎಂದೂ, ಅದನ್ನು 'ಜೆನೆಟಿಕ್ ಎರರ್' ಎಂದೂ ಕರೆಯುತ್ತಾರೆ! ಮಹಿಳೆಯ ದೇಹದಲ್ಲಿರುವ ಅಂಡಾಣು ಪುರುಷನ ದೇಹದಿಂದ ಬರುವ ಶುಕ್ರಕ್ಕಿಂತ ನೂರಾರು ಪಟ್ಟು ದೊಡ್ಡದಾಗಿದ್ದು ಹುಟ್ಟುವ ಮಗುವಿಗೆ ಕೊಡಬೇಕಾದ ಎಲ್ಲಾ ಪ್ರಧಾನ ಜೆನೆಟಿಕ್ ಸಂದೇಶಗಳನ್ನು ರವಾನಿಸುತ್ತದೆ. ಈ ಎಲ್ಲ ಕಾರಣಗಳಿಗೆ ಇತಿಹಾಸಕಾರರು "ಸ್ತ್ರೀತ್ವವೇ ಮಾದರಿ. ಮನುಕುಲಕ್ಕೆ ಆಕೆಯೇ ಮೂಲ" ಎನ್ನುತ್ತಾರೆ.

ಇತ್ತೀಚೆಗೆ ನಡೆದಿರುವ ಹಲವಾರು ಸಂಶೋಧನೆಗಳ ಪ್ರಕಾರ ಜಗತ್ತಿನ ಮನುಷ್ಯರೆಲ್ಲರ ಮೂಲವೂ ಓರ್ವ ಮಹಿಳೆಯೇ. ಖ್ಯಾತ ಬರ್ಕ್ಲಿ, ಕ್ಯಾಲಿಫೋರ್ನಿಯಾ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳು ಆಧುನಿಕ ತಂತ್ರಜ್ಞಾನಗಳನ್ನು ಬಳಸಿ ಪ್ರತ್ಯೇಕವಾಗಿ ನಡೆಸಿದ ಸಂಶೋಧನೆಗಳು ಮಾನವ ಕುಲದ ಡಿಎನ್‌ಎನಿಂದ 'ಫಿಂಗರ್ ಪ್ರಿಂಟ್' ಅನ್ನು ಪಡೆದು ಅದನ್ನು ಪರೀಕ್ಷಿಸಿದಾಗ ಗೊತ್ತಾಗಿದ್ದು ಏನೆಂದರೆ ಎಲ್ಲರಲ್ಲೂ - ಅವರು ಯಾವುದೇ ದೇಶ, ಪ್ರಾಂತ್ಯ, ಬಣ್ಣ, ಬುಡಕಟ್ಟು ಇತ್ಯಾದಿಗೆ ಸೇರಿದವರಾಗಿದ್ದರೂ - ಇರುವುದು ಒಂದೇ 'ಫಿಂಗರ್ ಪ್ರಿಂಟ್' ಎಂಬುದು. ಆ 'ಫಿಂಗರ್ ಪ್ರಿಂಟ್' ಸಹಸ್ರಾರು ವರ್ಷಗಳಿಂದ ಬದಲಾಗದೆ ಹಾಗೆಯೇ ಉಳಿದು ಬಂದಿದೆಯಲ್ಲದೆ ಅದು ಮೂಲತಃ ಮಹಿಳೆಯಿಂದಲೇ ಬಂದಿದೆ. ಆ ಮಹಿಳೆ 2,00,000 ವರ್ಷಗಳ ಹಿಂದೆ ಆಫ್ರಿಕಾದಲ್ಲಿದ್ದಳು ಎಂದೂ, ನಂತರ ಆಕೆಯಿಂದ ಹುಟ್ಟಿದ ಜನ ಜಗತ್ತಿನಾದ್ಯಂತ ಹರಡಿಹೋದರು ಎಂದೂ ಈ ಸಂಶೋಧನೆಗಳು ಸ್ಪಷ್ಟಪಡಿಸಿವೆ.



ಸುಮಾರು 5,00,000 ವರ್ಷಗಳ ಹಿಂದೆ ಆದ್ಯರೂಪದ ಮಾನವವಂಶ ತನ್ನ ಹಿಂಗಾಲುಗಳ ಮೇಲೆ ನಿಂತಾಗಿನಿಂದ ಮಾನವ ಜಾತಿಯ ಬೆಳವಣಿಗೆಯಲ್ಲಿ ಮಹಿಳೆಯು ಪುರುಷನಿಗಿಂತ ಪ್ರಮುಖ ಪಾತ್ರ ವಹಿಸಿದ್ದಾಳೆ. ಇದರಲ್ಲಿ ಮುಖ್ಯವಾದದ್ದು ಆಕೆಯ ದೇಹದಲ್ಲಾದ ಒಂದು ಮುಖ್ಯ ಬದಲಾವಣೆ. ಮನುಷ್ಯನಂತೆ ಉನ್ನತ ಶ್ರೇಣಿಯ ಸಸ್ತನಿಗಳಾದ ಚಿಂಪಾಂಜಿ, ಗೊರಿಲ್ಲಾ ಮತ್ತು ಒರಾಂಗ್‌ಉಟಾನ್ (ನರವಾನರ)ಗಳ ಮಹಿಳೆಯರಲ್ಲಿ ಋತು ಬರುವುದು ಅಪರೂಪಕ್ಕೆ, ಆ ಕಾರಣಕ್ಕೆ ಅವು ಹಲವಾರು ವರ್ಷಗಳಲ್ಲಿ ಒಂದು ಮರಿಗೆ ಜನ್ಮ ನೀಡುತ್ತವೆ. ಆದ್ದರಿಂದಲೇ ಅವು ಈಗ ಜಗತ್ತಿನಾದ್ಯಂತ ಬೆರಳೆಣಿಕೆ ಸಂಖ್ಯೆಯಲ್ಲಿದ್ದು ರಕ್ಷಿಸಲ್ಪಟ್ಟಿವೆ. ಆದರೆ ಅದೇ ಸಸ್ತನಿ ಜಾತಿಗೆ ಸೇರಿದ ಮಾನವ ಮಹಿಳೆಯ ದೇಹದಲ್ಲಿ ತಿಂಗಳಿಗೊಮ್ಮೆ ಋತುಚಕ್ರ ಸಂಭವಿಸುತ್ತದೆ. ಇದರ ಅರ್ಥ ಆಕೆ ಗೊರಿಲ್ಲಾಗಳಂತೆ ಐದು ವರ್ಷಕ್ಕೊಮ್ಮೆ ಹಡೆಯುವ ಬದಲು ಪ್ರತಿ ತಿಂಗಳೂ ಗರ್ಭ ಧರಿಸುವ ಅವಕಾಶವನ್ನು ಪಡೆದಳು. ಈ ಒಂದು ಬದಲಾವಣೆಯಿಂದಾಗಿ ಆಕೆ ಹೆಚ್ಚೆಚ್ಚು ಮಕ್ಕಳನ್ನು ಹಡೆದು ಮಾನವ ಕುಲ ನಾಶವಾಗದಂತೆ ನೋಡಿಕೊಂಡಳು. ಇದರರ್ಥ ಬೇಟೆಯಾಡುತ್ತಿದ್ದ ಪುರುಷನಿಗಿಂತಲೂ ಋತುಮತಿಯಾಗುವ ಮೂಲಕ ಮಹಿಳೆ ಮಾನವ ಕುಲವನ್ನು ಉದ್ಧಾರ ಮಾಡಿದಳು ಎಂಬುದು ವಿಜ್ಞಾನಿಗಳ ತರ್ಕ.

ಇದರೊಂದಿಗೆ ಆಕೆ ಪುರುಷನ ದೇಹದಲ್ಲೂ ಒಂದು ಮುಖ್ಯ ಬದಲಾವಣೆಗೆ ಕಾರಣಳಾದಳು. ಅದು ಒಂದಿಷ್ಟು ಪೋಲಿ ಅನ್ನಿಸಿದರೂ ಇಲ್ಲಿ ಹೇಳಬಹುದೆನಿಸುತ್ತದೆ. ಕಿಂಗ್‌ಕಾಂಗ್ ತರಹದ ಬೃಹತ್ ಗಾತ್ರದ ಪುರುಷ ಗೊರಿಲ್ಲಾಗಳ ಜನನಾಂಗ ಚಿಕ್ಕದಾಗಿರುತ್ತದೆ. ಅದಕ್ಕೆ ಹೋಲಿಸಿದರೆ ಮಾನವ ಪುರುಷನ ಜನನಾಂಗ ದೊಡ್ಡದು. ಅದು ಹೇಗೆ ಸಾಧ್ಯವಾಯಿತು ಎಂಬುದು ಕುತೂಹಲಕಾರಿಯಾಗಿದೆ. ಹೋಮಿನಿಡ್ ಮಹಿಳೆ ತನ್ನ ಹಿಂಗಾಲುಗಳ ಮೇಲೆ ನಡೆಯಲು ಪ್ರಾರಂಭಿಸಿದಾಗ ಆಕೆಯ ಯೋನಿಯು ಮುಂದಿನ ಭಾಗಕ್ಕೆ ಬಂದಿತಲ್ಲದೆ ಕೆಳದಿಕ್ಕಿನತ್ತ ಸರಿಯಿತು. ಜೊತೆಗೆ ಆಕೆಯ ಗರ್ಭಕೋಶವೂ ಆಕೆಯ ದೇಹದಲ್ಲಿ ಆಳಕ್ಕೆ ಹೋಯಿತು. ಬಾಯಿಗೆಟುಕದ ಎಲೆಗಳಿಗಾಗಿ ಹೇಗೆ ಜಿರಾಫೆಯ ಕತ್ತು ಬೆಳೆಯುತ್ತಾ ಹೋಯಿತೋ ಅದೇ ತತ್ವವನ್ನಾಧರಿಸಿ ಮಹಿಳೆಯ ಗರ್ಭಕೋಶಕ್ಕೆ ಹತ್ತಿರವಾಗಲು ಪುರುಷನ ಜನನಾಂಗವೂ ಬೆಳೆಯಿತು!

ದಿನಗಳನ್ನು ಲೆಕ್ಕಹಾಕುವುದನ್ನು ಮೊದಲು ಕಲಿತದ್ದೂ ಮಹಿಳೆಯೇ. ಹೇಗೆ ಎನ್ನುತ್ತೀರಾ? ಎಲ್ಲರಿಗೂ ಗೊತ್ತಿರುವಂತೆ ಪ್ರಾಚೀನಕಾಲದಲ್ಲಿ ಹಲವಾರು ಸಮುದಾಯಗಳು ಬಳಸುತ್ತಿದ್ದದ್ದು ಲೂನಾರ್ ಕ್ಯಾಲೆಂಡರ್‌ಅನ್ನು. ಅದಕ್ಕೆ ಕಾರಣ ಚಂದ್ರನ ಚಲನವಲನಕ್ಕೂ, ಪ್ರತಿ ತಿಂಗಳು ಮಹಿಳೆಯ ದೇಹದಲ್ಲಾಗುತ್ತಿದ್ದ ಬದಲಾವಣೆಗೂ ಇದ್ದ ಸಂಬಂಧ. 28 ದಿನಗಳಿಗೊಮ್ಮೆ ಹೊಸ ಚಂದ್ರ ಉದಯಿಸುವಂತೆ ಸಾಮಾನ್ಯವಾಗಿ ಅಷ್ಟೇ ದಿನಗಳಲ್ಲಿ ಮಹಿಳೆಗೆ ರಕ್ತಸ್ರಾವವಾಗುತಿತ್ತು! ತನ್ನ ದೇಹದ ಕ್ಯಾಲೆಂಡರ್ ಮತ್ತು ಪ್ರಕೃತಿಯ ಕ್ಯಾಲೆಂಡರ್ ನಡುವಿನ ಸಂಬಂಧವನ್ನು ಗುರುತಿಸಿ ದಿನಗಳನ್ನು ಲೆಕ್ಕಹಾಕಲಾರಂಭಿಸಿದ್ದು ಮಹಿಳೆಯಲ್ಲದೆ ಇನ್ನಾರು?!

ಮನುಷ್ಯರು ಬಲಗೈಯನ್ನೇ ಯಾಕೆ ಹೆಚ್ಚಾಗಿ ಉಪಯೋಗಿಸುತ್ತಾರೆ ಎಂದು ಎಂದಾದರೂ ಯೋಚಿಸಿದ್ದೀರಾ? ಅದಕ್ಕೂ ಮಹಿಳೆಯೇ ಕಾರಣ. ತಾನು ಹೆತ್ತ ಕೂಸುಗಳಿಗೆ ಸಾಂತ್ವನ ನೀಡಲು ಮಹಿಳೆಯು ತನ್ನ ಮಗುವಿಗೆ ತನ್ನ ಹೃದಯಬಡಿತ ಕೇಳಿಸುವಂತೆ ಎಡಗೈಯಲ್ಲಿ ಎತ್ತಿಕೊಂಡಿರುತ್ತಿದ್ದರಿಂದ ಆಕೆ ಹೆಚ್ಚಿನ ಕೆಲಸಗಳಿಗೆ ಬಲಗೈಯನ್ನು ಉಪಯೋಗಿಸುತ್ತಿದ್ದಳು. ಆ ಕಾರಣಕ್ಕೆ ಕಾಲಕ್ರಮೇಣ ಎಡಗೈಗಿಂತಲೂ ಬಲಗೈ ಹೆಚ್ಚು ಡೆಕ್ಸ್‌ಟ್ರಸ್ ಆಗಿ ಜನ ಅದನ್ನೇ ಹೆಚ್ಚು ಉಪಯೋಗಿಸಲಾರಂಭಿಸಿದರು.

ಆಧುನಿಕ ಮಾನವನಾಗಿ ರೂಪಗೊಳ್ಳುವ ಮುನ್ನ ಮಾನವಕುಲ ಇನ್ನೂ ಹೋಮಿನಿಡ್ ಆಗಿದ್ದಾಗಿನಿಂದಲೂ - ಅಂದರೆ ಸುಮಾರು 5,00,000 ವರ್ಷಗಳ ಹಿಂದೆ - ತನ್ನವರನ್ನು ಪೋಷಿಸುತ್ತಿದ್ದದ್ದು ಮಹಿಳೆಯೇ ಹೊರತು ಪುರುಷನಲ್ಲ ಎಂಬುದೂ ಸಾಬೀತಾಗಿದೆ. ಆಹಾರಕ್ಕಾಗಿ ಬೇಟೆ ಆಡುವುದರಿಂದ ಹಿಡಿದು ತನ್ನ ವಂಶದ ಉಳಿವಿನ, ಬೆಳವಣಿಗೆಯ ಪ್ರತಿ ಹಂತದಲ್ಲೂ ಆಕೆಯ ಕೊಡುಗೆ ಇದ್ದೇ ಇದೆ. ಆದಿಕಾಲದ ಪಳೆಯುಳಿಕೆಯನ್ನು ಅಧ್ಯಯನ ಮಾಡಿರುವವರ ಪ್ರಕಾರ ಆಗಿನ ಹೋಮಿನಿಡ್ ಮಹಿಳೆಯರು ಇಪ್ಪತ್ತು ವರ್ಷ ವಯಸ್ಸಾಗುವ ಹೊತ್ತಿಗೆ ಸಾವಪ್ಪುತ್ತಿದ್ದರು. ಕೆಲವೇ ಕೆಲವರು ಮಾತ್ರ ಮೂವತ್ತನ್ನು ತಲುಪುತ್ತಿದ್ದರು. ಅಪರೂಪಕ್ಕೆ ಕೆಲವರು ನಲವತ್ತನ್ನು ದಾಟುತ್ತಿದ್ದರು. ಆಗಿನ ಕಾಲದ ಮಹಿಳೆಯರು ಅಲ್ಪಾಯುಷಿಗಳಾಗಿದ್ದರೂ ಬದುಕನ್ನು ಸಾಗಿಸಲು ಹಲವಾರು ಕಲೆಗಳನ್ನು ಮೈಗೂಡಿಸಿಕೊಂಡಿದ್ದರು. ಅವುಗಳಲ್ಲಿ ಆಹಾರ ಸಂಗ್ರಹಣೆ, ಮಕ್ಕಳ ಪೋಷಣೆ, ಪ್ರಾಣಿಗಳ ಚರ್ಮದಿಂದ ಬಟ್ಟೆ ಇತ್ಯಾದಿಗಳನ್ನು ರೂಪಿಸುವುದು, ಕುಂಬಾರಿಕೆ, ಅಡುಗೆ, ಪ್ರಕೃತಿಯಲ್ಲಿ ಸಿಗುವ ಹುಲ್ಲು ಇತ್ಯಾದಿಗಳಿಂದ ಬುಟ್ಟಿಗಳನ್ನು ಸೃಷ್ಟಿಸುವುದು, ಹಲ್ಲು ಮತ್ತು ಮೂಳೆಗಳಿಂದ ಮಣಿ ಮತ್ತು ಇತರೆ ಅಲಂಕಾರಿಕ ವಸ್ತುಗಳನ್ನು ತಯಾರಿಸುವುದು, ಆಶ್ರಯತಾಣಗಳನ್ನು ಕಟ್ಟುವುದು, ಔಷಧ ಗುಣಗಳನ್ನು ಹೊಂದಿರುವ ಗಿಡಮೂಲಿಕೆಗಳನ್ನು ಪತ್ತೆ ಮಾಡುವುದು, ಪ್ರಾಣಿಗಳ ಚರ್ಮವನ್ನು ಬೇರ್ಪಡಿಸುವ, ಗೆಣಸುಗಳ ಸಿಪ್ಪೆಯನ್ನು ಸುಲಿಯುವ ಇತ್ಯಾದಿ ಸಲಕರಣೆಗಳನ್ನೂ ಮಹಿಳೆಯರೇ ಮಾಡುತ್ತಿದ್ದರು.

ಆದಿಕಾಲದಲ್ಲೂ ಆಹಾರಕ್ಕಾಗಿ ಮಹಿಳೆಯರು ಪುರುಷರನ್ನು ಸಂಪೂರ್ಣವಾಗಿ ಅವಲಂಬಿಸಿರಲಿಲ್ಲ. ಯಾಕೆಂದರೆ ಆತ ಬೇಟೆಗೆಂದು ಹೋದಾಗ ಆಹಾರ ಸಿಗುತ್ತಿದ್ದದ್ದು ಅಪರೂಪಕ್ಕೆ ಮಾತ್ರ. ಈಗಲೂ ಹಲವಾರು ಬುಡಕಟ್ಟುಗಳ ಪುರುಷರು ಬೇಟೆಯಾಡುತ್ತಿದ್ದು ಅವರು ಮನೆಗೆ ಮಾಂಸ ತರುವುದು ಒಮ್ಮೊಮ್ಮೆ ಮಾತ್ರ. ಅಂತಹ ಸಮುದಾಯಗಳು ಇವತ್ತಿಗೂ ಇದ್ದರೆ ಅದಕ್ಕೆ ಕಾರಣ ಆ ಸಮುದಾಯಗಳ ಮಹಿಳೆಯರು ಸಂಗ್ರಹಿಸುವ ಆಹಾರ. ಮಾತ್ರವಲ್ಲ, ಯಾವ ಹಣ್ಣು, ಯಾವ ಸೊಪ್ಪು ತಿನ್ನಲು ಯೋಗ್ಯ, ಯಾವ ಬೀಜವನ್ನು ಕಾಪಾಡಿಟ್ಟುಕೊಳ್ಳಬೇಕು, ಯಾವುದಕ್ಕೆ ಔಷಧಿಯ ಗುಣ ಇದೆ ಎಂಬ ಅರಿವು ಇರುವುದೂ ಆ ಸಮುದಾಯಗಳ ಮಹಿಳೆಯರಲ್ಲೇ. ಆದಿಕಾಲದ ಮಹಿಳೆಯೂ ಇವರಿಗಿಂತ ಭಿನ್ನವಾಗಿರಲಿಲ್ಲ.

ತನ್ನನ್ನು ಅವಲಂಬಿಸಿರುವ ಮಕ್ಕಳಿಗೆ ಮತ್ತು ಇತರರಿಗೆ ಆಹಾರ ಸಂಗ್ರಹಿಸುವಾಗ ಎಲ್ಲ ಗಿಡ, ಮರ, ಹುಳು, ಹಣ್ಣು ಇತ್ಯಾದಿಗಳ ಬಗ್ಗೆ ನೆನಪಿಟ್ಟುಕೊಳ್ಳುತ್ತಿದ್ದದ್ದು ಮಹಿಳೆಯೇ. ಮಾತ್ರವಲ್ಲ ಹಾಗೆ ಸಿಕ್ಕ ಆಹಾರವನ್ನು ಹದ ಮಾಡುವ, ಸುಲಿಯುವ ಸಲಕರಣೆಗಳನ್ನು ಕಂಡುಹಿಡಿದದ್ದೂ ಮಹಿಳೆಯೇ. ಅಂದರೆ ಕೃಷಿಯನ್ನು ಮೊದಲು ಅಭ್ಯಸಿಸಿದ್ದು ಮಹಿಳೆಯೇ.

ಸಾಮಾನ್ಯವಾಗಿ 'ಕುಟುಂಬ' ವ್ಯವಸ್ಥೆಯನ್ನು ಜಾರಿಗೆ ತಂದಿದ್ದು ಪುರುಷ ಎಂದು ನಂಬಲಾಗಿದೆ. ಆದರೆ ಅದು ತಪ್ಪು, ವಾಸ್ತವವಾಗಿ ಗಂಡು ಮಕ್ಕಳು ದೊಡ್ಡವರಾದ ಮೇಲೆ ಅವರು ಬೇಟೆಗೆ ಹೋಗುತ್ತಿದ್ದಾಗ ಮಕ್ಕಳು ಮತ್ತು ತನ್ನ ಕುಲದ ಇತರರನ್ನು ನೋಡಿಕೊಳ್ಳುತ್ತಿದ್ದದ್ದು ಮಹಿಳೆ. ಆದ್ದರಿಂದ 'ಕುಟುಂಬ' ಮತ್ತು ಅದರ ಲಾಲನೆಪಾಲನೆಯ ಜವಾಬ್ದಾರಿಯನ್ನು ಹೊತ್ತದ್ದು ಮಹಿಳೆ. ಈಗಲೂ ಹೆಚ್ಚಿನ ಬುಡಕಟ್ಟು ಸಮುದಾಯಗಳಲ್ಲಿ ಮಹಿಳೆಯೇ ಕುಟುಂಬದ ಮುಖ್ಯಸ್ಥೆ ಆಗಿರುವುದು ಆ ಪದ್ಧತಿಯ ಮುಂದುವರಿಕೆ ಎಂದು ನಂಬಲಾಗಿದೆ.


ಈಗಿನ ಆಧುನಿಕ ಕಾಲದಲ್ಲಿ ಮಹಿಳೆಯರ ಮೇಲೆ ಹಲವಾರು ತರಹದ ಶೋಷಣೆ ನಡೆಯುತ್ತಿದೆ. ಮಹಿಳೆ ಎಂದರೆ ಅಬಲೆ, ಸಮಾನ ಸ್ಥಾನಮಾನಕ್ಕೆ ಅರ್ಹಳಲ್ಲ, ತನ್ನ ಜೀವಮಾನವಿಡೀ ಪುರುಷನನ್ನು ಅವಲಂಬಿಸುವವಳು ಎಂಬ ಕಲ್ಪನೆ ಈಗಲೂ ಇದೆ. ಇಂತಹ ಧೋರಣೆಯಿಂದಾಗಿಯೇ ಆಕೆಯ ಮೇಲೆ ದೈಹಿಕ ದಾಳಿ, ಅತ್ಯಾಚಾರ ಇತ್ಯಾದಿಗಳು ನಡೆಯುತ್ತಿರುತ್ತವೆ. ಆದರೆ ಪ್ರಾಚೀನ ಕಾಲದಲ್ಲಿ ಮಹಿಳೆಗೆ ವಿಶೇಷ ಸ್ಥಾನಮಾನವಿತ್ತು! ಆದಿಮಾನವನಾಗಿದ್ದ ಕಾಲದಲ್ಲಿ ಬದುಕಿ ಬಾಳುವುದೇ ಕಷ್ಟವಾಗಿದ್ದರಿಂದ ಆಹಾರ ಸಂಗ್ರಹಣೆಯಲ್ಲಿ ಮುಖ್ಯ ಪಾತ್ರವಹಿಸುತ್ತಿದ್ದ, ಗಿಡಮೂಲಿಕೆಗಳ ಶಕ್ತಿ ಗೊತ್ತಿದ್ದ ಮಹಿಳೆಗೆ ಮರ್ಯಾದೆ ಕೊಡಲಾಗುತ್ತಿತ್ತು, ಈ ಗುಣವನ್ನು ಈಗಲೂ ಬುಡಕಟ್ಟು ಸಮುದಾಯಗಳಲ್ಲಿ ಕಾಣಬಹುದಾಗಿದೆ. ಅಂತಹ ಸಮುದಾಯಗಳಲ್ಲಿ ಮಹಿಳೆಯರ ಮೇಲೆ ಪುರುಷರು ಹಕ್ಕು ಚಲಾಯಿಸುವಂತಿಲ್ಲ, ಆಕೆಯ ಶ್ರಮದ ಫಲವನ್ನು ಕಿತ್ತುಕೊಳ್ಳುವಂತಿಲ್ಲ, ಆಕೆಯ ಚಲನವಲನಗಳ ಮೇಲೆ ನಿಯಂತ್ರಣಗಳನ್ನು ಹೇರುವಂತಿಲ್ಲ, ಆಕೆಯ ಕನ್ಯತ್ವ, ಶೀಲ ಇತ್ಯಾದಿಗಳ ಮಾತು ಬಿಡಿ ಆಕೆಯ ದೇಹದ ಮೇಲೆ ಪುರುಷ ತನ್ನ ಅಧಿಪತ್ಯವನ್ನು ಸಾರುವಂತಿಲ್ಲ, ಇದು ಹಿಂದಿನ ಕಾಲದಲ್ಲಿ ಮಹಿಳೆಯರಿಗೆ ಇದ್ದ ಸ್ವಾತಂತ್ರ್ಯ ಮತ್ತು ಗೌರವ.

ಶಿಲಾಯುಗದಲ್ಲೂ ಮಹಿಳೆಯರು ಹಲವಾರು ಸಮುದಾಯಗಳಲ್ಲಿ ನಾಯಕಿಯರಾಗಿ, ಕತೆಗಾರರಾಗಿ, ವೈದ್ಯರಾಗಿ, ನ್ಯಾಯ ಕೊಡುವವರಾಗಿ ವಿವಿಧ ಪಾತ್ರಗಳನ್ನು ವಹಿಸುತ್ತಿದ್ದರು ಎಂಬುದನ್ನು ಅಧ್ಯಯನಗಳು ಸಾಬೀತುಪಡಿಸುತ್ತಿವೆ. ಮುಖ್ಯವಾಗಿ ಇವೆಲ್ಲವುಗಳೊಂದಿಗೆ ಆಕೆ ತನಗಿದ್ದ ಇನ್ನೊಂದು ಶಕ್ತಿಯನ್ನೂ ಚಲಾಯಿಸುತ್ತಿದ್ದಳು. ಅದು ಮಕ್ಕಳನ್ನು ಹಡೆಯುವ ಮತ್ತು ಆ ಮೂಲಕ ತನ್ನ ಸಮುದಾಯವನ್ನು ಮುನ್ನಡೆಸುವ ಶಕ್ತಿ!

ಹಿಂದಿನ ಕಾಲದಲ್ಲಿ ಚಂದ್ರನೊಂದಿಗೆ ಮಹಿಳೆಯ ದೇಹಕ್ಕಿದ್ದ ಸಂಬಂಧದ ಬಗ್ಗೆಯಾಗಲಿ, ಹೊಸ ಜೀವಕ್ಕೆ ಜನ್ಮ ಕೊಡುವ ಪ್ರಕ್ರಿಯೆಯ ಬಗ್ಗೆಯಾಗಲಿ ಅರಿವಿರಲಿಲ್ಲ, ಜೀವವನ್ನು ಸೃಷ್ಟಿಸುವ ಶಕ್ತಿಯನ್ನು ಹೊಂದಿರುವ ಮಹಿಳೆ ತನಗೆ ಸಮಾನವಾದ ಮಾನವಳಲ್ಲ ಬದಲಾಗಿ ಆಕೆ ದೇವರೇ ಆಗಿರಬೇಕು ಎಂದೇ ಪುರುಷ ನಂಬಿದ್ದ...

... ಇಂತಹ ಹಲವಾರು ಕುತೂಹಲಕಾರಿ ಅಂಶಗಳನ್ನು, ಒಳನೋಟಗಳನ್ನು, ಸಂಶೋಧನೆಗಳ ಮಾಹಿತಿಯನ್ನು ಹೊಂದಿರುವ, ರೋಸಲಿಂಡ್ ಮೈಲ್ಸ್ ಎಂಬಾಕೆ ಬರೆದಿರುವ 'ಹೂ ಕುಕ್ಡ್ ದಿ ಲಾಸ್ಟ್ ಸಪ್ಪರ್' ಎಂಬ ಪುಸ್ತಕವನ್ನು ಮೊನ್ನೆ ಮಿತ್ರ ಸಂವರ್ತ ಸಾಹಿಲ್ ಈಮೇಲ್ ಮಾಡಿದರು. ಮಹಿಳೆಯರ ಇತಿಹಾಸವನ್ನು ಚಿತ್ರಿಸಿರುವ ಈ ಪುಸ್ತಕದ ಮೊದಲನೆ ಚಾಪ್ಟರ್‌ನಲ್ಲಿರುವ ಹಲವು ವಿಷಯಗಳನ್ನು ಇಲ್ಲಿ ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ. ಈ ಪುಸ್ತಕದಲ್ಲಿರುವ ಮುಖ್ಯ ವಿಷಯಗಳನ್ನು ಸಂಗ್ರಹ ರೂಪದಲ್ಲಿ ಕೊಡುವ ಯೋಚನೆ ನನಗಿದೆ. ಕೊನೆಯದಾಗಿ ಎಲ್ಲ ಮಹಿಳೆಯರ ಪರವಾಗಿ ಇಂತಹ ಅದ್ಭುತ ಪುಸ್ತಕವನ್ನು ಬರೆದಿರುವ ರೋಸಲಿಂಡ್ ಮೈಲ್ಸ್ ಅವರಿಗೆ ಒಂದು ದೊಡ್ಡ ಥ್ಯಾಂಕ್ಸ್! •

ಬಿಸಿಯೂಟ ಯೋಜನೆಯಲ್ಲಿನ ಅಧ್ವಾನಗಳಿಂದಾಗಿ ವಿದ್ಯಾರ್ಥಿಗಳಷ್ಟೇ ಅಲ್ಲ, ಅದರ ಉಸ್ತುವಾರಿ ವಹಿಸಲಾಗಿರುವ ಶಿಕ್ಷಕರೂ ರೋಸತ್ತು ಹೋಗಿದ್ದಾರೆ. ಈ ಬೋಗಸ್ ಯೋಜನೆಯಿಂದಾಗಿ ವಿದ್ಯಾರ್ಥಿಗಳು ಶಾಲೆಯ ಆಕರ್ಷಣೆ ಕಳೆದುಕೊಳ್ಳುತ್ತಿದ್ದಾರೆ. ದಾಖಲಾತಿ-ಹಾಜರಾತಿ ಕುಸಿಯುತ್ತಿದೆ. ಹಾಗಂತ ಸರ್ಕಾರಿ ಅಂಕಿ-ಅಂಶಗಳೇ ಘಂಟಾಘೋಷವಾಗಿ ಸಾರುತ್ತಿವೆ. ಸಮಸ್ಯೆ ಪರಿಹರಿಸಬೇಕಾದ ಸರ್ಕಾರಿ ಪಂಡಿತರು ಮತ್ತು ಆಳುವ ಬೃಹಸ್ಪತಿಗಳು ನಿಸ್ಸೀಮ ನಿರ್ಲಕ್ಷದಿಂದ ಚಲ್ತಾಹೈ ಧೋರಣೆ ಪಾಲಿಸುತ್ತಿದ್ದಾರೆ.



ಅಕ್ಷರ ದಾಸೋಹದ ಅವಾಂತರ

ಶಾಲೆಗಳಲ್ಲಿ ಕೊಡುತ್ತಿರುವುದು ಬಿಸಿಯೂಟವೋ? ಕಹಿಯೂಟವೋ?


ತಂಗಳಿಗೆ ಬಿಸಿಯೂಟ ಎಂದು ಹೆಸರಿಟ್ಟರೆ ಹೇಗಿರುತ್ತದೆ? ರಾಜ್ಯದ ಶಾಲೆಗಳಲ್ಲಿ ಅಕ್ಷರ ದಾಸೋಹ ಯೋಜನೆಯಲ್ಲಿ ವಿದ್ಯಾರ್ಥಿಗಳಿಗೆ ಬಡಿಸುತ್ತಿರುವ ಬೂಸಾದಂತಿರುತ್ತದೆ! ಹಾಗೆಂಬುದು ಸಾರ್ವತ್ರಿಕ ಅಭಿಪ್ರಾಯ. ಇದು ಖರೆಯೂ ಹೌದು!!

ಒಂದು ದಶಕ ಕಳೆವಷ್ಟರಲ್ಲೇ ಅಕ್ಷರ ದಾಸೋಹ ದಾರಿ ತಪ್ಪಿದೆ. ಮೊದಲಿನ ಉಮೇದು-ಚೈತನ್ಯ ಈ ಯೋಜನೆಗೆ ಇಲ್ಲದಾಗಿದೆ. ಸರ್ಕಾರಿ ಆಡಳಿತಕ್ಕಂತೂ ಯೋಜನೆ ಬಗ್ಗೆ ಆಸಕ್ತಿಯೇ ಇಲ್ಲ. ಸರ್ಕಾರಿ ದಾಸೋಹಕ್ಕೆ ಸ್ವಯಂಸ್ಫೂರ್ತಿಯಿಂದ ಪ್ರೋತ್ಸಾಹ ನೀಡುತ್ತಿದ್ದ ದಾನಶೂರರು ಹಾಗೇ ಸುಮ್ಮನಾಗಿದ್ದಾರೆ. ಸರ್ಕಾರದ ಲೆಕ್ಕಾಚಾರದಲ್ಲಷ್ಟೇ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮಕ್ಕಳಿಗೆ ಬಿಸಿ-ಬಿಸಿ ಭೂರಿಭೋಜನ ಬಡಿಸಲಾಗುತ್ತಿದೆಯಷ್ಟೇ! ವಾಸ್ತವವಾಗಿ ಮಕ್ಕಳ ಪಾಲಿಗೆ ಈ ಊಟದ ಬಿಸಿಯೂರಿ ತಂಗಳಾಗಿ ಅದ್ಯಾವುದೋ ಕಾಲವಾಗಿ ಹೋಗಿದೆ!!

ಶಾಲಾ ದಾಖಲಾತಿ-ಹಾಜರಾತಿ ಗ್ರಾಫು ಏರಿಸುವುದು, ಹಸಿವಿನಿಂದ ಶಾಲೆಯನ್ನು ಮಧ್ಯದಲ್ಲೇ ತೊರೆಯುವುದನ್ನು ತಪ್ಪಿಸುವುದು, ಬಡಮಕ್ಕಳ ಪೌಷ್ಟಿಕತೆಯನ್ನು ವೃದ್ಧಿಸಿ ಆರೋಗ್ಯವಂತರಾಗಿಸುವುದು, ಹಳ್ಳಿಗಾಡಿನ ಮಕ್ಕಳನ್ನು ಕಲಿಕೆಯತ್ತ ಸೆಳೆಯುವುದು... ಮುಂತಾದ 'ಉದ್ಧಾರ'ದ ಉದ್ದೇಶದಿಂದ ಎಸ್ಸೆಂ ಕೃಷ್ಣರ ಸಿಎಂ ಕಾಲಕೀರ್ದಿಯಲ್ಲಿ ಅಕ್ಷರ ದಾಸೋಹ ಆರಂಭಿಸಲಾಗಿತ್ತು. ಮೊದಲ ಹಂತದಲ್ಲಿ ಐದಾರು ಜಿಲ್ಲೆಗಳಲ್ಲಿ ಪ್ರಾರಂಭವಾದ ಈ ಯೋಜನೆ 2003ರ ಹೊತ್ತಿಗೆ ಇಡೀ ರಾಜ್ಯದಲ್ಲಿ ಜಾರಿಗೊಳಿಸಲಾಗಿತ್ತು.

ಮೂಲ ಧ್ಯೇಯೋದ್ದೇಶಕ್ಕೆ ತದ್ವಿರುದ್ಧವಾಗಿ ಈಗ ಅಕ್ಷರ ದಾಸೋಹ ಯೋಜನೆ ನಡೆಯುತ್ತಿದೆ. ಬಿಸಿಯೂಟ ಯೋಜನೆಯಲ್ಲಿನ ಅಧ್ವಾನಗಳಿಂದಾಗಿ ವಿದ್ಯಾರ್ಥಿಗಳಷ್ಟೇ ಅಲ್ಲ, ಅದರ ಉಸ್ತುವಾರಿ ವಹಿಸಲಾಗಿರುವ ಶಿಕ್ಷಕರೂ ರೋಸತ್ತು ಹೋಗಿದ್ದಾರೆ. ಈ ಬೋಗಸ್ ಯೋಜನೆಯಿಂದಾಗಿ ವಿದ್ಯಾರ್ಥಿಗಳು ಶಾಲೆಯ ಆಕರ್ಷಣೆ ಕಳೆದುಕೊಳ್ಳುತ್ತಿದ್ದಾರೆ. ಮೊದಲಿನ ಆಸಕ್ತಿ ಈಗ ಉಳಿದಿಲ್ಲ, ಅಕ್ಷರ ದಾಸೋಹದ ಊಟ 'ಸಪ್ಪೆ'ಯಾದಂತೆ ದಾಖಲಾತಿ-ಹಾಜರಾತಿ ಕುಸಿಯುತ್ತಿದೆ. ಹಾಗಂತ ಸರ್ಕಾರಿ ಅಂಕಿ-ಅಂಶಗಳೇ ಘಂಟಾಘೋಷವಾಗಿ ಸಾರುತ್ತಿವೆ. ಸಮಸ್ಯೆ ಪರಿಹರಿಸಬೇಕಾದ ಸರ್ಕಾರಿ ಪಂಡಿತರು ಮತ್ತು ಆಳುವ ಬೃಹಸ್ಪತಿಗಳು ನಿಸ್ಸೀಮ ನಿರ್ಲಕ್ಷದಿಂದ ಚಲ್ತಾಹೈ ಧೋರಣೆ ಪಾಲಿಸುತ್ತಿದ್ದಾರೆ.

ಈ ದಾಸೋಹ ವಿಫಲವಾಗಲು ಮೂಲಕಾರಣ- ಬೇಳೆ ಕಾಳು, ತರಕಾರಿ ಇಲ್ಲದ ತಿಳಿಸಾರು ಮತ್ತು ಉಪ್ಪಿನ ಕಾಯಿಗೂ ತತ್ವಾರ ಪರಿಸ್ಥಿತಿ; ಇವೆಲ್ಲ ಕಂಡೂ ಕಾಣದಂತಿರುವ ಶಿಕ್ಷಣ ಇಲಾಖೆಯ ಹೊಣೆಗೇಡಿತನದಿಂದ ಬಿಸಿಯೂಟ ತಣ್ಣೆ ಅನ್ನದಂತಾಗಿ ಹೋಗಿದೆ! ಅಕ್ಕಿ ಬೇಯಿಸಿ, ನೀರಿಗೆ ಒಗ್ಗರಣೆ ಹಾಕಿ ಬಡಿಸಿದರೆ ಮಕ್ಕಳ ಪೌಷ್ಟಿಕತೆ ಹೆಚ್ಚುತ್ತದಾ? ಶಾಲಾ ದಾಖಲಾತಿ-ಹಾಜರಾತಿ ಏರಲು ಸಾಧ್ಯವಾ? ಬಡ ಮಕ್ಕಳಿಗೆ ಶಾಲೆಯ ಬಗ್ಗೆ ಆಸಕ್ತಿ ಮೂಡುತ್ತದಾ? ಇಂಥ ಸರಳ ಸತ್ಯ ಸಾಮಾಜಿಕ ನ್ಯಾಯ ರಥದ ಸಾರಥಿ ಎಂದೇ ಭಾವಿಸಲಾಗಿರುವ ಸಿಎಂ ಸಿದ್ದರಾಮಯ್ಯ ಮತ್ತವರ ಶಿಕ್ಷಣ ಮಂತ್ರಿ ಕಿಮ್ಮನೆ ರತ್ನಾಕರ್‌ಗೂ ಅರ್ಥವಾಗದ್ದು ವಿಪರ್‍ಯಾಸವೇ ಸರಿ!




ಬಿಸಿಯೂಟ ದಿನಕಳೆದಂತೆ ದನವೂ ತಿನ್ನದ ಆಹಾರದಂತಾಗುತ್ತಿರುವುದರ ಅರಿವಿಲ್ಲದಂತೆ ಸಿಎಂ ಸಿದ್ದು ಮಾತಾಡುತ್ತಿದ್ದಾರೆ. ಬಿಸಿಯೂಟದ ಜತೆ ಮಕ್ಕಳಿಗೆ ಟೆಟ್ರಾಪ್ಯಾಕ್‌ನಲ್ಲಿ ಜುಲೈ ಒಂದರಿಂದ ಹಾಲು ಕೊಡುತ್ತೇವೆ ಎಂದು ಸಿಎಂ ಎದೆಯುಬ್ಬಿಸುತ್ತಿದ್ದಾರೆ. ಹಿಂದಿನ ಸಿಎಂ ಒಬ್ಬರು ಶಾಲಾಮಕ್ಕಳಿಗೆ ಊಟದ ಜತೆಗೊಂದು ಮೊಟ್ಟೆ ಕೊಡುತ್ತೇವೆ ಎಂದಿದ್ದರು. ಮೊಟ್ಟೆಗೆ ಚಡ್ಡಿ ಸನಾತನಿಗಳು ಅಡ್ಡಗಾಲು ಹಾಕಿದ್ದರು. ಆ ಮಾತು ಬಿಡಿ. ಈ ಮೊಟ್ಟೆ ಅಥವಾ ಹಾಲು ಸಪ್ಪೆ ಊಟದ ಜತೆ ಕೊಟ್ಟರೇನು ಫಲ? ಬೇಳೆ-ತರಕಾರಿ ಇಲ್ಲದ ನೀರುಸಾರಿನಿಂದಾಗಿ ಅನ್ನವೇ ನುಂಗಲಾಗದಿರುವಾಗ ಹಾಲು ಕುಡಿದರೇನು ಪ್ರಯೋಜನ? ಇದು ಅಸಲಿ ಜಿಜ್ಞಾಸೆ.

ಸಿಎಂ ಸಿದ್ದು ಸರ್ಕಾರ ಮೊದಲು ಮಾಡಬೇಕಾಗಿರುವುದು, ಮಕ್ಕಳಿಗೆ ಶಾಲೆಯಲ್ಲಿ ಕೊಡುವ ಊಟವನ್ನು ನೋಡಿ ವಾಕರಿಕೆ ಬರದಂತೆ ಮಾಡಬೇಕು. ಅಂದರೆ, ಬೇಳೆ-ಕಾಳು, ತರಕಾರಿಯುಕ್ತ ಸಾರು ತಯಾರಿಕೆಗೆ ಅನುಕೂಲ ಕಲ್ಪಿಸಬೇಕಿದೆ. ತುಟ್ಟಿಯಾಗಿರುವ ತರಕಾರಿ-ಬೇಳೆಕಾಳು ಖರೀದಿಗೆ ಹೆಚ್ಚಿಗೆ ಹಣ ಶಾಲೆಗಳಿಗೆ ಒದಗಿಸಬೇಕಿದೆ. ಇದನ್ನು ಹಾಲಿನ ಖರ್ಚಿನಲ್ಲೇ ಮಾಡಬಹುದು. ಮಕ್ಕಳು ಖುಷಿಯಿಂದ ಉಣ್ಣುತ್ತಾರೆ. ಕೊಡುವ ಊಟ ಮೊದಲು ಸರಿಮಾಡಿದ ಬಳಿಕ ಬೇಕಿದ್ದರೆ ಹಾಲು-ಮೊಟ್ಟೆ-ಮೊಸರು-ಮೀನು-ತುಪ್ಪದ ಬಗ್ಗೆ ಚಿಂತಿಸಿದರಾಯ್ತು! ಹಾಗೆಂದು ವಿದ್ಯಾರ್ಥಿಗಳು-ಪಾಲಕರು-ಶಿಕ್ಷಕರು ಏಕ ಧ್ವನಿಯಲ್ಲಿ ಹೇಳುತ್ತಿದ್ದಾರೆ.

ಈಗಿನ ಬಿಸಿಯೂಟದ ಸ್ಥಿತಿ-ಗತಿ ಆರಂಭದ ಸಾಫಲ್ಯಕ್ಕೆ ಒಂಚೂರು ಹೊಂದಿಕೆ ಆಗದು. 1 ರಿಂದ 10ನೇ ತರಗತಿ ತನಕದ ಮಕ್ಕಳಿಗೆ ಮಧ್ಯಾಹ್ನದ ಊಟ ಶಾಲೆಯಲ್ಲಿ ಒದಗಿಸುವ ಯೋಜನೆ ಸರ್ಕಾರ ಘೋಷಿಸಿದಾಗ ಜನರ, ಸಂಘ-ಸಂಸ್ಥೆಗಳ, ಹಣವಂತರ ಸಹಕಾರ ಸಿಕ್ಕಿತ್ತು, ಖಾಸಗಿಯವರ ಸಹಾಯ ಸರ್ಕಾರವೇ ಬೇಡಿತ್ತು. ಆ ದಾಸೋಹ ಅತ್ಯುತ್ತಮ ಯೋಜನೆಯೆಂಬ ಹೆಗ್ಗಳಿಕೆಗೂ ಪಾತ್ರವಾಯ್ತು. ವಾರಕ್ಕೊಮ್ಮೆ ಸಿಹಿ ಊಟ; ಆಗಾಗ ತರತರದ ರುಚಿ. ದಿನವೂ ಹೊಟ್ಟೆ ತುಂಬ ಉಣ್ಣುವಂಥ ಅಡುಗೆ. ದಾನಿಗಳು ಬಿಸಿಯೂಟಕ್ಕೆ ಬೇಕಾದ ಅಡುಗೆ ಪಾತ್ರೆ-ತಾಟು-ಲೋಟ ನೀಡಿ ನೆರವಾಗಿದ್ದರು. ಹೀಗಾಗಿ ಸರ್ಕಾರಿ-ಅನುದಾನಿತ ಶಾಲೆಗಳಲ್ಲಿ ಹಾಜರಾತಿ ಗಮನಾರ್ಹವಾಗಿ ಹೆಚ್ಚಾಯ್ತು. 2003ರಲ್ಲಿ ಬಿಸಿಯೂಟ 44,40375 ಮಕ್ಕಳು ಉಂಡರೆ, 2007 ರ ವೇಳೆಗೆ ಈ ಸಂಖ್ಯೆ ಬರೋಬ್ಬರಿ 70,55,461ಕ್ಕೆ ಭರ್ಜರಿ ಏರಿಕೆಯಾಗಿತ್ತು.

ದಾಪುಗಾಲು ಹಾಕುತ್ತಿದ್ದ ದಾಸೋಹ ಯೋಜನೆ 2008ರಲ್ಲಿ ಇದ್ದಕ್ಕಿದ್ದಂತೆ ಹಿಂದಡಿ ಇಡಲಾರಂಭಿಸಿತು. ಬಿಸಿಯೂಟ ತಣಿಯಲಾರಂಭಿಸಿತು. ಮಕ್ಕಳು ಶಾಲೆಯ ಊಟವೆಂದರೆ ಮೂಗು ಮುರಿಯತೊಡಗಿದರು. 2008ರಲ್ಲಿ 68,94,932ಕ್ಕೆ ಹಾಜರಾತಿ ಇಳಿಯಿತು. 2009ರಲ್ಲಿ ಬಿಸಿಯೂಟ ಉಂಡವರು ರಾಜ್ಯದ ಬರೀ 67,24,079 ವಿದ್ಯಾರ್ಥಿಗಳಷ್ಟೇ! 2010ರಲ್ಲಿ 66,96,104 ವಿದ್ಯಾರ್ಥಿಗಳು ಅಕ್ಷರ ದಾಸೋಹ ಯೋಜನೆಯ ಫಲಾನುಭವಿಗಳಾಗಿದ್ದರೆ 2011ರಲ್ಲಿ ಈ ಸಂಖ್ಯೆ 65,12,721ಕ್ಕೆ ಕುಸಿಯಿತು. ಒಟ್ಟಿನಲ್ಲಿ ಅಕ್ಷರ ದಾಸೋಹದ ಗ್ರಾಫು ಒಂದೇ ಸಮನೆ ಇಳಿಯುತ್ತಾ ಹೋಯಿತು. ಇಳಿಯುತ್ತಲೇ ಇದೆ. ಸರ್ಕಾರಿ ಅಧಿಕಾರಿಗಳು, ದಾನಿಗಳು, ಸಂಘ-ಸಂಸ್ಥೆಗಳು ಅಕ್ಷರ ದಾಸೋಹದಲ್ಲಿ ಆಸಕ್ತಿ ಕಳೆದುಕೊಂಡಿದ್ದೇ ಈ ವೈಫಲ್ಯಕ್ಕೆ ಮೂಲ.



ಬಿಸಿಯೂಟ ಯೋಜನೆಗೆ ಕೇಂದ್ರ ಸರ್ಕಾರದ ಅನುದಾನವು ಬರುತ್ತಿದೆ. ಇದಕ್ಕೆ ರಾಜ್ಯ ಸರ್ಕಾರ ತನ್ನ ಪಾಲು ಸೇರಿಸಿ 56 ಸಾವಿರ ಪ್ರಾಥಮಿಕ ಮತ್ತು ಪ್ರೌಢಶಾಲೆಯ 'ಅಕ್ಷರ ದಾಸೋಹ' ಎಂಬ ಹೆಸರಲ್ಲಿ ಮಕ್ಕಳಿಗೆ ಮಧ್ಯಾಹ್ನದ ಊಟ ಕೊಡುತ್ತಿದೆ. 1 ರಿಂದ 5ನೇ ತರಗತಿಯ ಮಕ್ಕಳಿಗೆ ಪ್ರತಿದಿನ ತಲಾ 100 ಗ್ರಾಂ ಅಕ್ಕಿ, 20ಗ್ರಾಂ ಬೇಳೆ, 50 ಗ್ರಾಂ ತರಕಾರಿ, 5 ಗ್ರಾಂ ಎಣ್ಣೆ, 2 ಗ್ರಾಂ ಉಪ್ಪು, ಸಾಂಬಾರ ಪದಾರ್ಥ ಮತ್ತು ಖಾರದ ಪುಡಿ 8 ಗ್ರಾಂ ಪ್ರಕಾರ ಅನುದಾನ ಕೊಡಲಾಗುತ್ತಿದೆ. ಆಹಾರ ಪದಾರ್ಥ-ಸಾಗಾಣಿಕೆ ವೆಚ್ಚ ಮತ್ತು ಅಡುಗೆ ಖರ್ಚು ಸೇರಿ ಪ್ರತಿ ವಿದ್ಯಾರ್ಥಿಗೆ ರೂ. 3.11 ಪೈಸೆ ವೆಚ್ಚ ಮಾಡಲಾಗುತ್ತಿದೆ. 6 ರಿಂದ 8ನೇ ತರಗತಿ ಮಕ್ಕಳಿಗೆ ಒಂಚೂರು ಹೆಚ್ಚು ಆಹಾರ ಸಿಗುತ್ತದೆ. ಅಂದರೆ ಪ್ರತಿ 6-8ನೇ ವರ್ಗದ ವಿದ್ಯಾರ್ಥಿಗೆ ರೂ. 4.65 ಪೈಸೆ ಹಂಚಿಕೆ ಮಾಡಲಾಗಿದೆ. ಈ ವೆಚ್ಚ 9 ಮತ್ತು 10ನೇ ತರಗತಿ ಮಕ್ಕಳಿಗೆ ರೂ. 6.16 ಪೈಸೆಯಂತೆ ಏರಿಕೆಯಾಗಿದೆ. ಪ್ರತಿ ಮಕ್ಕಳಿಗೆ ಹಂಚಿಕೆ ಆಗಿರುವ ಅಕ್ಕಿ ಪ್ರಮಾಣ ಕಡಿಮೆ ಎಂಬ ಮಾತೂ ಇದೆ.

ಕೇಂದ್ರ ಸರ್ಕಾರ 1-8ನೇ ತರಗತಿ ತನಕದ ಮಕ್ಕಳ ಬಿಸಿಯೂಟದ ಅಕ್ಕಿ ಅನುದಾನ ಕೊಡುತ್ತಿದೆ. 9 ಮತ 10ನೇ ವರ್ಗದ ಮಕ್ಕಳಿಗೆ ಮಾತ್ರ ರಾಜ್ಯ ಸರ್ಕಾರ ಅ ಕೊಡುತ್ತಿದೆ. ಅಡುಗೆ ಖರ್ಚಿನಲ್ಲೂ ಕೇಂದ್ರದ್ದೇ ದೊಡ ಪಾಲು. 1 ರಿಂದ 5ನೇ ತರಗತಿ ತನಕದ ಮಕ್ಕಳಿಗ ಕೇಂದ್ರ ಸರ್ಕಾರ ರೂ. 202 ಕೊಟ್ಟರೆ, ರಾಜ್ಯ ಸರ್ಕಾ ಕೊಡುವುದು 0.67 ಪೈಸೆ. 6 ರಿಂದ 8ನೇ ತರಗತಿಯ ಮಕ್ಕಳಿಗೆಂದು ಕೇಂದ್ರ ರೂ. 3.01 ಕೊಡುತ್ತಿದೆ; ರಾಜ ಸರ್ಕಾರದ ಪಾಲು 1.01 ರೂ. ಹಾಗೆಯೇ 9 ಮತ 10ನೇ ತರಗತಿಯ ಪ್ರತಿ ವಿದ್ಯಾರ್ಥಿಗೆಂದು ಕೇಂದ್ರ ಸರ್ಕಾ 5.43 ಪೈಸೆ ಖರ್ಚು ಮಾಡುತ್ತಿದೆ. ಇದರ ಜತೆಗೆ ಅಕ್ಕಿ-ಬೇಳೆ ಸಾಗಾಟಕ್ಕೆಂದು ಕೇಂದ್ರ ಸರ್ಕಾರ 1 ರಿಂದ 8ನೇ ತರಗತಿವರೆಗಿನ ಮಕ್ಕಳಿಗಾಗಿ 75 ರೂ. ಹಾಗು 9- 10ನೇ ವರ್ಗದ ಮಕ್ಕಳಿಗೆ 95 ಪೈಸೆ ವ್ಯಯಿಸುತ್ತಿದೆ.

ಈ ಅನುದಾನದಲ್ಲಿ ದಿನದಿಂದ ದಿನಕ ಏರಿಕೆಯಾಗುತ್ತಿರುವ ಬೇಳೆ-ತರಕಾರಿ ಖರೀದಿಸಲು ಸಾಧ್ಯವೇ ಇಲ್ಲದಾಗಿದೆ! ರಾಜ್ಯ ಸರ್ಕಾರ ತನ್ನ ಖರ್ಚಿನ ಪಾಲನ್ನು ಏರಿಸಿದರಷ್ಟೇ ತಿನ್ನಲು ಯೋಗ್ಯವಾದ ಊಟ ಅಕ್ಷರ ದಾಸೋಹದಲ್ಲಿ ಕೊಡಬಹುದು. ಈಗಿನ ಅನುದಾನದಲ್ಲಿ ಹೆಚ್ಚಿನ ಮಕ್ಕಳಿರುವ ಶಾಲೆಯಲ್ಲಿ ಹೇಗಾದರೂ ಸುಧಾರಿಸಬಹುದು. ಆದರೆ ಕಡಿಮೆ ಮಕ್ಕಳಿರುವ ಶಾಲೆಯಲ್ಲಿ ಈ ಸರ್ಕಸ್ ಸಾಧ್ಯವಾಗದು. ತರಕಾರಿ ವಿಪರೀತ ದುಬಾರಿಯಾಗಿದೆ. ಸರ್ಕಾರಿ ಲೆಕ್ಕದಲ್ಲಿ ಒಂದು ವಾರದ ತರಕಾರಿಗೆಂದು ಬರುವ ಅನುದಾನದಲ್ಲಿ ಒಂದೇ ಒಂದು ದಿನದ ತರಕಾರಿ ತರಲಾಗದು! ಈಗಿತ್ತಲಾಗಿ ಒಂದು ಬಾಟಲಿ ಉಪ್ಪಿನಕಾಯಿ ತಂದುಕೊಡುವ ದಾನಿಗೂ ಬರಬಂದಿದೆ. ಮೊದಲಿನಂತೆ ಬಿಸಿಯೂಟದ ಸೆಳೆತಕ್ಕೆ ಶಾಲೆಗೆ ಬರುವ ವಿದ್ಯಾರ್ಥಿಗಳು ಈಗಿಲ್ಲ, ಇಂಗ್ಲಿಷ್ ಮಾಧ್ಯಮ ಶಾಲೆಯ ಪೈಪೋಟಿಯಲ್ಲಿ ಒಳ್ಳೆಯ ಊಟ ಕೊಡದೆ ಸರ್ಕಾರಿ ಶಾಲೆಗೆ ಮಕ್ಕಳನ್ನು ಆಕರ್ಷಿಸುವುದು ಅಸಾಧ್ಯವೆಂದೇ ಬೋಧಕ-ಶಿಕ್ಷಕ ವರ್ಗ ಕೈಚೆಲ್ಲಿ ಕೂತಿದೆ.

ಅಕ್ಷರ ದಾಸೋಹದ ಅಡಿಗೆ ಉಸ್ತುವಾರಿಗಳಿಗೆ ಈಗಿನ ತುಟ್ಟಾಗ್ರತೆಯಲ್ಲಿ ತರಕಾರಿ ತರುವುದೇ ದೊಡ್ಡ ಸಂಕಟದಂತಾಗಿದೆ. ವಾರಕ್ಕೆ ಹೆಚ್ಚೆಂದರೆ ರೂ. 100 ತರಕಾರಿಗೆಂದು ಬಳಸಬಹುದು. ಆದರೆ ಒಂದು ಕೆಜಿ ಟೊಮೊಟೋಕ್ಕೆ ರೂ. 60 ಆಗಿರುವಾಗ 100ನಲ್ಲಿ ತರುವ ತರಕಾರಿ ಒಂದು ದಿನಕ್ಕೂ ಕಡಿಮೆಯೇ. ಕಳೆದ ವರ್ಷ ಬೇಳೆ ಬೆಲೆ ತುಂಬ ದುಬಾರಿಯಾದಾಗ ಇಂಥದೇ ಕಷ್ಟ ಎದುರಾಗಿತ್ತು. ಆಗ 'ನೀರು ಸಾರು' ಗತಿಯಾಗಿತ್ತು. ಹಲವು ಶಾಲೆಗಳಲ್ಲಿ ಆಗ ಬೇಳೆ ಬಳಸಿರಲೇ ಇಲ್ಲ. ಇನ್ನೂ ಕೆಲವೆಡೆ ಬೇಳೆ ಬದಲು ಬೇರೆ ಕಾಳು-ಕಡ್ಡಿ ಹಾಕಿ ಸಾರು ಮಾಡಲಾಗಿತ್ತು. ಇದು ಶಾಲೆಯ ಮಕ್ಕಳ ಶಿಕ್ಷಣದ ಮೇಲೆ ಕೆಟ್ಟ ಪರಿಣಾಮ ಮಾಡಿತ್ತು. ಬಹಳಷ್ಟು ವಿದ್ಯಾರ್ಥಿಗಳು ದಾಸೋಹಕ್ಕೆ ಹೋಗುತ್ತಲೇ ಇರಲಿಲ್ಲ. ಅರೆಬರೆ ಹೊಟ್ಟೆಯಲ್ಲಿ ಕಲಿಯಲಿಕ್ಕೂ ಆಗುತ್ತಿರಲಿಲ್ಲ.

ಇಷ್ಟಾದರೂ ಶಿಕ್ಷಣ ಇಲಾಖೆಯಾಗಲಿ ಇನ್ನಿತರ ಸಂಬಂಧಿಸಿದ ಅಧಿಕಾರಿಗಳಾಗಲಿ ಎಂಪಿ-ಎಮ್ಮೆಲ್ಲೆ-ಮಂತ್ರಿಗಳಾಗಲಿ ತಲೆ ಕೆಡಿಸಿಕೊಳ್ಳದೇ ಆರಾಮಾಗಿದ್ದರು. ಮಾರುಕಟ್ಟೆಯಲ್ಲಿ ತರಕಾರಿ-ಬೇಳೆಕಾಳು ಮತ್ತಿತರ ಅಗತ್ಯ ವಸ್ತುಗಳ ಬೆಲೆ ಏರಿದಂತೆ ತಕ್ಷಣಕ್ಕೆ ಅನುದಾನ ಸರ್ಕಾರ ಹೊಂದಿಸಿ ಕೊಟ್ಟರಷ್ಟೇ ಅಕ್ಷರ ದಾಸೋಹಕ್ಕೊಂದು ಅರ್ಥ ಬರುತ್ತದೆ. ಇಲ್ಲದಿದ್ದರೆ ಇದೊಂದು ದಾಸೋಹದ ಅಣಕವಷ್ಟೇ! ನಿಜವಾಗಿಯೂ ರಾಜ್ಯ ಸರ್ಕಾರಕ್ಕೆ ಮಕ್ಕಳ ಪೌಷ್ಟಿಕತೆ ವೃದ್ಧಿ, ಅವರ ಆರೋಗ್ಯ ಮತ್ತು ಶಿಕ್ಷಣದ ಮಟ್ಟ ಎತ್ತರಿಸಬೇಕೆಂದಿದ್ದರೆ ಅನುದಾನ ಹೆಚ್ಚಿಸಬೇಕು. ಹೊಟ್ಟೆ ತುಂಬಿದವರಿಗೆ ತುಟ್ಟಿಭತ್ಯೆ ಏರಿಸುವ ಸರ್ಕಾರಿ ಪಂಡಿತರು ದೇಶ ಕಟ್ಟುವ ಮಕ್ಕಳ ದಾಸೋಹಕ್ಕೆ ಅನುದಾನ ಹೆಚ್ಚಿಸುವುದಕ್ಕೆ ಹಿಂದೆ-ಮುಂದೆ ನೋಡುವುದು ನಾಚಿಕೆಗೇಡು!

ಬಿಸಿಯೂಟ ಕಳಪೆಯಾಗಿರುವುದರಿಂದಲೇ ಮಕ್ಕಳ ಅಪೌಷ್ಟಿಕತೆ ಕಂಡುಬರುತ್ತಿದೆ ಎಂಬ ಹುಯಿಲೆದ್ದಿದೆ. ಮನೆಯೂಟ ವಂಚಿತರಾಗಿ ಶಾಲೆಯಲ್ಲಿ ಸಿಗುವ ಬೂಸ ಅನಿವಾರ್ಯವಾಗಿ ಉಂಡು ಅಥವಾ ವಾಕರಿಕೆ ಬಂದು ಉಣ್ಣದೆ ಇರುವುದರಿಂದಲೇ ಮಕ್ಕಳಿಗೆ ಈ ಕೊರತೆ ಕಾಡುತ್ತಿದೆ ಎಂಬುದಕ್ಕೆ ಯಾವ ತನಿಖೆ ತರ್ಕವೂ ಬೇಕಾಗಿಲ್ಲ. ಇದು ಗೊತ್ತಿದ್ದೂ ಸರ್ಕಾರಿ ಮಂದಿ ಮಕ್ಕಳಲ್ಲಿನ ಅಪೌಷ್ಟಿಕತೆ ಕಾರಣ ಹುಡುಕುವ ನಾಟಕವಾಡುತ್ತಿದ್ದಾರೆ. ಶಾಲೆಯ ಸರಿಯಾದ ಆಹಾರ ಕೊಡುವುದರಿಂದ ಮಕ್ಕಳ ಪೌಷ್ಟಿಕ ಹೆಚ್ಚಾಗಲಿದೆ. ಅಷ್ಟೇ ಅಲ್ಲ, ಶೈಕ್ಷಣಿಕ ಸ್ಥಿತಿ-ಗತಿಯೂ ಗಣನೀಯವಾಗಿ ಚೇತರಿಸಲಿದೆ.

ಇದು ಶಿಕ್ಷಣ ಇಲಾಖೆಯ ಎಸಿ ರೂಮಿನ ಸಾಹೇಬರಿ ಅರ್ಥವಾದೀತಾ? ಶಿಕ್ಷಣ ಮಂತ್ರಿ ಕಿಮ್ಮನೆ ಇತ್ತ ಗಮ ಹರಿಸುವರಾ? ಅಕ್ಷರ ದಾಸೋಹದ ಊಟ ರುಚಿಕ ಪೌಷ್ಟಿಕವಾಗಿ ಮಾಡುವ ಹೊಣೆ ಸರ್ಕಾರದ ಮೇಲಿ ಬೇಡದ ಬಂಡಲ್ ಯೋಜನೆಗಳಿಗೆ ವ್ಯರ್ಥ ಹಣ ವ್ಯಯಿಸು ಬದಲು ಅತೀ ಅವಶ್ಯವಾದ ಬಿಸಿಯೂಟಕ್ಕೆ ಪ್ರಾ ಕೊಡಬೇಕಾಗಿದೆ. ತನ್ಮೂಲಕ ಒಂದೇ ಒಂದು ಮಗುವ ಶಿಕ್ಷಣದಿಂದ ವಂಚಿತವಾಗದಂತೆ ನಿಗಾ ವಹಿಸಬೇಕಿದೆ!

ಹಾಲಾಹಲ!!


ಅಕ್ಷರ ದಾಸೋಹದ ಮಕ್ಕಳಿಗೆ ಹಾಲು ಕೊಡಲು ಸಿಎಂ ಸಿದ್ದು ಸಿದ್ಧವಾಗಿದ್ದಾರೆ. ಶಾಲಾ ಮಕ್ಕಳಲ್ಲಿ ಪೌಷ್ಟಿಕತೆ ಉದ್ದೀಪಿಸಲು ಈ ಯೋಜನೆಯಂತೆ. ಶಾಲೆಯಲ್ಲಿ ಕೊಡುತ್ತಿರುವ ಬಿಸಿಯೂಟವೇ ತಂಗಳಂತಾಗಿ ಹಸಿದ ಹೊಟ್ಟೆಯ ಮಕ್ಕಳಿಗೆ ರುಚಿಸುತ್ತಿಲ್ಲ. ಹಲವು ಶಾಲೆಯಲ್ಲಿ ಊಟ ತಯಾರಿಕೆಗೆ ಬೇಳೆ, ತರಕಾರಿ ಇಲ್ಲವಾದರೆ, ಇನ್ನೂ ಕೆಲವೆಡೆ ಅನ್ನ ಬೇಯಿಸಲಿಕ್ಕೂ ಗ್ಯಾಸ್ ಸಿಲಿಂಡರ್ ಸಿಗದಾಗಿದೆ. ಹೀಗಿರುವಾಗ ಈ ಹಾಲು ಬೇರೆ ಕೇಡು. ಊಟ ತಿನ್ನದ ಮಕ್ಕಳು ಈ ಒಂದು ಲೋಟ ಹಾಲು ಕುಡಿದು ಬೆಳಗಿಂದ ಸಂಜೆವರೆಗೆ ಶಾಲೆಯಲ್ಲಿ ಲವಲವಿಕೆಯಿಂದ ಇದ್ದು ಕಲಿಯುವುದು ಸಾಧ್ಯವಾ? ಹಾಗಾಗಿ ಮೊದಲು ಸರಿಯಾದ ಊಟದ ವ್ಯವಸ್ಥೆ ಸರ್ಕಾರ ಮಾಡಬೇಕಿದೆ. ನಂತರ ಬೇಕಿದ್ದರೆ ಹಾಲು-ಹಣ್ಣು-ಮೀನು-ಮಾಂಸ-ಮೊಟ್ಟೆ..... ಏನು ಬೇಕಿದ್ದರೂ ಕೊಡಲು ಯೋಚಿಸಲಿ.

ಕೊಡುವ ಊಟವೇ ಕಳಪೆಯಾಗಿರುವಾಗ ಹಾಲಿನಿಂದೇನು ಪ್ರಯೋಜನ ಸಿಎಂ ಸಾಹೇಬರೇ?!

ಅಮ್ಮ ಎಂಬ ಲ್ಯಾಂಡ್ ಮಾಫಿಯಾ

"ಬೆಂಗಳೂರಿನಲ್ಲಿ ಅಮ್ಮ" ಎಂಬ ವಿಲಕ್ಷಣ ...ೋಸ್ಟರ್‌ಗಳು ಬೆಂಗಳೂರಿನ ಗೋಡೆಗಳ ಮೇಲೆ ಆಗಾಗ್ಗೆ ...ೋಚರಿಸುತ್ತವೆ. ಮಾತಾ ಅಮೃತಾನಂದಮಯಿ ಎಂದು ...್ಯಾತಳಾಗಿರುವ ಕೇರಳ ಮೂಲದ ಈ "ಅಮ್ಮ" ...ಂಗಳೂರಿಗೆ ಬಂದಾಗ ಭಾರೀ ಜಾತ್ರೆಗಳಂಥ ಕಾರ್ಯ...ಮಗಳನ್ನು ಏರ್ಪಡಿಸಲಾಗುತ್ತದೆ. ಈ ಅಮ್ಮ ಹೋದ ...ಂದೆಡೆಯೆಲ್ಲಾ ತನ್ನ ಭಕ್ತಾದಿಗಳನ್ನು ಅಪ್ಪಿಕೊಳ್ಳುವುದಕ್ಕೆ ...ೇಮಸ್. ಈಗ ಇದ್ದಕ್ಕಿದ್ದಂತೆ ಈ ಅಮ್ಮ ಬೆಂಗಳೂರಿನ ...ೊರವಲಯದಲ್ಲಿರುವ ಕೆಂಗೇರಿ ಬಳಿಯ ಕಣಿಮಿಣಿಕೆ ...ಂಬ ಗ್ರಾಮಕ್ಕೆ ಸದ್ದುಗದ್ದಲವಿಲ್ಲದೆ ಕಾಲಿಟ್ಟು, ಈ ಗ್ರಾಮಕ್ಕೆ ...ೇರಿದ ಬರೋಬ್ಬರಿ 25 ಎಕರೆ ಸರ್ಕಾರಿ ಗೋಮಾಳ ...ೂಮಿಯನ್ನು ಗಟ್ಟಿಯಾಗಿ ತಬ್ಬಿಹಿಡಿದುಬಿಟ್ಟಿದ್ದಾಳೆ!

ಇನ್ನೊಂದು ದುರಂತ ನೋಡಿ. ಈ ಸಾರ್ವಜನಿಕ ...ತ್ತನ್ನು ಸರ್ಕಾರಿ ಅಧಿಕಾರಿಗಳೇ ಮುಂದೆ ನಿಂತು ಅಮ್ಮ ...ಂಬ ಲ್ಯಾಂಡ್ ಮಾಫಿಯಾ ಬಾಯಿಗೆ ಹಾಕಿಬಿಟ್ಟಿದ್ದಾರೆ. ...ಂಗಳೂರು ಡಿಸಿಯಾಗಿದ್ದ ಪರಮ ಭ್ರಷ್ಟ ಅಯ್ಯಪ್ಪನಿಗೆ ...ಮ್ಮನ ಆಶೀರ್ವಾದ ಸಿಕ್ಕಿದ್ದೇ ತಡ, ಕೈತುಂಬಾ ಪ್ರಸಾದ ...ೀಕರಿಸಿ, ಸುಮಾರು 50 ಕೋಟಿ ಬೆಲೆಬಾಳುವ ಸರ್ಕಾರಿ ...ೂಮಿಯನ್ನು ಅಮ್ಮನ ಮಡಿಲಿಗೆ ...ಾಕಿದ್ದಾರೆ. ಈ ಅನೈತಿಕ ದಂಧೆ ನಡೆದದ್ದು ...ಾರ್ವಜನಿಕ ಸೇವೆಯ ಹೆಸರಿನಲ್ಲಿ!?


ನರಸಿಂಹಮೂರ್ತಿ

ಈ ಗ್ರಾಮ ಬೆಂಗಳೂರು-...ೈಸೂರು ಹೆದ್ದಾರಿಯಲ್ಲಿ ಕೆಂಗೇರಿ ...ಾಟಿದ ಮೇಲೆ 6-7 ಕಿಮೀ ದೂರ ...ದ್ದಿದೆ. ಇಲ್ಲಿ ದನಕರುಗಳ ಮೇವು ನೀರು ...ಳ ಉದ್ದೇಶಕ್ಕಾಗಿ ಸರ್ಕಾರಿ ಗೋಮಾಳ ...ಂದು ನಮೂದಿಸಿ ಸುಮಾರು 150 ...ಕರೆ ಮೀಸಲಿಡಲಾಗಿತ್ತು. ಬಿಬಿಎಂಪಿ ...ಮಿತಿಯಲ್ಲಿದ್ದು, ಹೆದ್ದಾರಿಗೆ ಅಂಟಿಕೊಂಡಿ...ವ ಈ ಭೂಮಿಯ ಮಾರುಕಟ್ಟೆ ...ೌಲ್ಯ ಏನಿಲ್ಲವೆಂದರೂ ಎಕರೆಗೆ ಎರಡು ಕೋಟಿ!

ಭೂ ಮಾಫಿಯಾ ಹಾಗೂ ಕಳ್ಳ ಅಧಿಕಾರಿಗಳ ಕೂಟಕ್ಕೆ ...ಥಾ ಭೂಮಿ ತಲಾಶೆ ಆಗಿದ್ದೇ ಬಂತು; ಅದಕ್ಕೆ ಒಂದು ... ಕಾಣಿಸುವವರೆಗೂ ನಿದ್ದೆ ಹತ್ತಲಿಲ್ಲ. ಕಣಿಮಿಣಿಕೆಯ ಸರ್ವೆ ನಂಬರ್ 41ರ ಸುಮಾರು 75 ಎಕರೆ ಭೂಮಿಗೆ ನಾಮುಂದು ತಾಮುಂದು ಎಂದು ಪೈಪೋಟಿಗಿಳಿದು ಈ ಭೂಮಿಯ ಮೇಲೆ ಮುಗಿಬಿದ್ದಿದ್ದಾರೆ.

ಇಲ್ಲಿಗೆ ಕೆಲವು ವರ್ಷಗಳ ಹಿಂದೆ ಸರ್ಕಾರಿ ಭೂಮಿಯನ್ನು ಹರಾಜು ಹಾಕುವ ಯೋಜನೆಯೊಂದು ಚಾಲ್ತಿಗೆ ಬಂದಿತ್ತು ನೋಡಿ. ಆದರೆ ಭೂಮಾಫಿಯಾದವರಿಗೆ ಪುಕ್ಕಟೆಯಾಗಿಯೋ ಅಥವಾ ಕಿಲುಬುಕಾಸಿನ ಬೆಲೆಗೋ ಭೂಮಿ ಲಪಟಾಯಿಸಲು ವಿಫುಲ ಅವಕಾಶಗಳಿರುವಾಗ ಹರಾಜಿನಲ್ಲಿ ಕೊಳ್ಳಲು ಅವರೇನು ದಡ್ಡರೇ? ಹಾಗಾಗಿ ಈ ಹರಾಜು ಪ್ರಕ್ರಿಯೆ ಅಷ್ಟು ಯಶಸ್ವಿಯಾಗಲಿಲ್ಲ.

ನಂತರ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂತು ನೋಡಿ.. ಆ ಅವಧಿ ಬೆಂಗಳೂರು ಭೂಗಳ್ಳರ ಪಾಲಿಗೆ ಗುಪ್ತರ ಕಾಲದಂಥಾ ಸುವರ್ಣಯುಗ. ಇಂಥಾ ಯುಗದ ಸಂಪೂರ್ಣ ಲಾಭ ಪಡೆಯಲು ಒಂದೆಡೆ ಕ್ರೈಸ್ಟ್ ಕಾಲೇಜಿನವರು ಅಮರಿಕೊಂಡರು. ಮತ್ತೊಂದೆಡೆ ಅಮ್ಮನ ಆಶ್ರಮದವರೂ ಮುಗಿಬಿದ್ದರು. ಕಾನೂನಿನ ಕಣ್ಣಿಗೆ ಮಣ್ಣೆರಚಿ, ಕಳ್ಳದಾರಿಗಳ ಮೂಲಕ ಭೂಮಿ ಮಂಜೂರಾತಿ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.


ತಾರೀಕು 12-04-2012ರಲ್ಲಿ ಬೆಂಗಳೂರು ಜಿಲ್ಲಾಧಿಕಾರಿ ಕಾರ್ಯಾಲಯ ಅಮ್ಮ ಆಶ್ರಮದ ಪರವಾಗಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ. "... ಕಣಿಮಿಣಿಕೆ ಗ್ರಾಮದ ಸ.ನಂ 41ರ ಸರ್ಕಾರಿ ಗೋಮಾಳ ಜಮೀನಿನ ಪೈಕಿ 25 ಎಕರೆ ಜಮೀನನ್ನು ಕರ್ನಾಟಕ ಭೂಕಂದಾಯ ನಿಯಮಗಳ 1966ರ ನಿಯಮ 97(4)ರಡಿಯಲ್ಲಿನ ಅವಕಾಶದಂತೆ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ ಸದರಿ ಜಮೀನಿನ ಮಾರ್ಗದರ್ಶಿ ಬೆಲೆಯ ಶೇಕಡಾ 30ರಷ್ಟು ವಿಧಿಸಿ ಶ್ರೀ ಮಾತಾ ಅಮೃತಾನಂದಮಯಿ ಮಠರವರಿಗೆ ಉನ್ನತ ದರ್ಜೆ ಆಸ್ಪತ್ರೆ ಮತ್ತು ಮೆಡಿಕಲ್ ಕಾಲೇಜು ಸ್ಥಾಪಿಸುವ ಉದ್ದೇಶಕ್ಕಾಗಿ ... ಮಂಜೂರು ಮಾಡಿ ಆದೇಶಿಸಿದೆ."

ಈ ಆದೇಶಕ್ಕೆ ಪೂರ್ವದಲ್ಲಿ ವರದಿ ನೀಡಿರುವ



> ಸಾರ್ವಜನಿಕ ಸ್ವತ್ತನ್ನು ಸರ್ಕಾರಿ ಅಧಿಕಾರಿಗಳೇ ಮುಂದೆ ನಿಂತು ಅಮ್ಮ ಎಂಬ ಲ್ಯಾಂಡ್ ಮಾಫಿಯಾ ಬಾಯಿಗೆ ಹಾಕಿಬಿಟ್ಟಿದ್ದಾರೆ. ಬೆಂಗಳೂರು ಡಿಸಿಯಾಗಿದ್ದ ಪರಮ ಭ್ರಷ್ಟ ಅಯ್ಯಪ್ಪನಿಗೆ ಅಮ್ಮನ ಆಶೀರ್ವಾದ ಸಿಕ್ಕಿದ್ದೇ ತಡ, ಕೈತುಂಬಾ ಪ್ರಸಾದ ಸ್ವೀಕರಿಸಿ, ಸುಮಾರು 50 ಕೋಟಿ ಬೆಲೆಬಾಳುವ ಸರ್ಕಾರಿ ಭೂಮಿಯನ್ನು ಅಮ್ಮನ ಮಡಿಲಿಗೆ ಹಾಕಿದ್ದಾರೆ.

ತಹಸೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್ ಮೊದಲಾದ ಕಂದಾಯ ಇಲಾಖೆ ಅಧಿಕಾರಿಗಳು ವಾಸ್ತವಾಂಶಗಳನ್ನು ತಿರುಚಿ ಅಮ್ಮನ ಏಜೆಂಟರಂತೆ ವರದಿ ನೀಡಿದ್ದರು. ಅಂತಿಮವಾಗಿ ತಾರೀಕು 08-05-2012 ರಂದು ರಾಜರಾಜೇಶ್ವರಿ ನೋಂದಣಿ ಕಚೇರಿಯಲ್ಲಿ ಮಾತಾ ಅಮೃತಾನಂದಮಯಿ ಮಠದ ಹೆಸರಿಗೆ ಈ 25 ಎಕರೆ ಭೂಮಿಯನ್ನು ರಿಜಿಸ್ಟರ್ ಮಾಡಿಸಿಕೊಟ್ಟ ಅಧಿಕಾರಿಗಳು ಅಮ್ಮನ ಪ್ರಸಾದ ಪಡೆದು ಕೃತಾರ್ಥರಾಗಿದ್ದಾರೆ. ಅದೂ ಕೂಡ ಮಾರ್ಗದರ್ಶಿ ಮೌಲ್ಯದಲ್ಲಿ ಶೇಕಡಾ 30ರಷ್ಟು ಬೆಲೆಗೆ!


ಗೋವಿಂದರಾಜು

ಮತ್ತೊಂದು ಕಡೆ ಕ್ರೈಸ್ಟ್ ಕಾಲೇಜಿನವರು ಹತ್ತಾರು ಎಕರೆ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಸರಿಯಾಗಿ ಅದೇ ಸ್ಥಳದಲ್ಲಿ 25 ಎಕರೆ ಜಮೀನನ್ನು ಬಿಎಂಟಿಸಿ ಸಂಸ್ಥೆಗೆ ಮಂಜೂರು ಮಾಡಲಾಗಿದೆ. ಈ ವಿಷಯ ಕೋರ್ಟ್ ಮೆಟ್ಟಿಲು ಹತ್ತಿದೆ. ಈಗ ಹಾಲಿ ಇರುವ ಕೆರೆ ಕುಂಟೆ ಹಾಗೂ ರಾಜಕಾಲುವೆಗಳನ್ನು ಈ ಇಬ್ಬರೂ ಭೂಗಳ್ಳರು ಪೈಪೋಟಿಯಲ್ಲಿ ನೆಲಸಮ ಮಾಡುವ ಹೀನಕೃತ್ಯದಲ್ಲಿ ತೊಡಗಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಅಲ್ಲಿ ಒಂದು ಹಳ್ಳ ಅಥವ ಕೆರೆಯಿತ್ತು ಎಂಬುದಕ್ಕೆ ಸಣ್ಣ ಕುರುಹೂ ಸಿಗಲಾರದು.

ಇದಕ್ಕಿಂತಲೂ ವಿಪರ್ಯಾಸದ ಸಂಗತಿಯೊಂದಿದೆ. ಇದೇ ಸರ್ವೆ ನಂಬರಿನಲ್ಲಿ 1978-79ರಲ್ಲಿ 8 ಮಂದಿ ಬಗರ್‌ಹುಕುಂ ಸಾಗುವಳಿದಾರರಿಗೆ ತಲಾ ಎರಡು ಎಕರೆಯಂತೆ ಜಮೀನು ಮಂಜೂರು ಮಾಡಲಾಗಿದೆ. ಅವರಲ್ಲಿ 3 ಮಂದಿ ಪರಿಶಿಷ್ಟ ಜಾತಿಗೆ ಸೇರಿದವರು. ಹೀಗೆ ಕಾನೂನುಬದ್ಧವಾಗಿ ಮಂಜೂರಾತಿ ಪಡೆದಿರುವ ಬಡರೈತರ ಹೆಸರಿಗೆ ಅಧಿಕಾರಿಗಳು ಇದುವರೆಗೂ ಸೂಕ್ತ ದಾಖಲಾತಿಗಳನ್ನು ಮಾಡಿಕೊಟ್ಟಿಲ್ಲ. ಇದೇ ಗ್ರಾಮದ ಅನೇಕ ಮಂದಿ ಬಗರ್ ಹುಕುಂ ಸಾಗುವಳಿದಾರರು ತಮಗೆ ಭೂಮಿ ಮಂಜೂರು ಮಾಡುವಂತೆ ದಶಕಗಳ ಹಿಂದೆಯೇ ಸರ್ಕಾರಕ್ಕೆ ಅರ್ಜಿ ಗುಜರಾಯಿಸಿ ಕಾಯುತ್ತಾ ಕೂತಿದ್ದಾರೆ. ಆದರೆ ಅಮ್ಮ ಆಶ್ರಮ, ಟ್ರಿನಿಟಿ ಆಸ್ಪತ್ರೆಯಂಥಾ ಖದೀಮರಿಗೆ ಶರವೇಗದಲ್ಲಿ ಎಲ್ಲಾ ದಾಖಲಾತಿಗಳೂ ಮಂಜೂರಾಗಿವೆ. ಅಧಿಕಾರಿಗಳು ಹಾಗೂ ಭೂಮಾಫಿಯಾದವರು ಚಕ್ಕಂದದಲ್ಲಿ ತೊಡಗಿದ್ದಾರೆ.

ಇನ್ನು ಕಾನೂನಿನ ವಿಷಯ ನೋಡೋಣ. ಈ ದೇಶದ ಸರ್ವೋಚ್ಚ ನ್ಯಾಯಾಲಯ ಗೋಮಾಳ ಭೂಮಿಗಳನ್ನು ಪರಭಾರೆ ಮಾಡುವ ಬಗ್ಗೆ "ಯಾವುದೇ ಗೋಮಾಳ, ಗಾಯಲಾಣ, ಹುಲ್ಲುಬನ್ನಿ ಜಮೀನು ಗಳನ್ನು ಯಾವುದೇ ಕಾರಣಕ್ಕೂ, ಯಾವುದೇ ಖಾಸಗಿ ವ್ಯಕ್ತಿಗಾಗಲಿ, ಖಾಸಗಿ ಸಂಸ್ಥೆಗಾಗಲಿ ಮಂಜೂರು/ಪರಭಾರೆ ಮಾಡದೆ ಅವುಗಳನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗತಕ್ಕದ್ದು ಹಾಗೂ ಈ ಜಮೀನುಗಳನ್ನು ಗ್ರಾಮ ಸಮುದಾಯದ ಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಿಡಬೇಕು" ಎಂದು ಕಟ್ಟುನಿಟ್ಟಿನ ಆದೇಶ ನೀಡಿದೆ.

ಸುಪ್ರೀಂಕೋರ್ಟ್‌ನ ಆದೇಶ ಇಷ್ಟು ಸ್ಪಷ್ಟವಾಗಿದ್ದರೂ ಭ್ರಷ್ಟ ಅಧಿಕಾರಿಗಳು ಹಾಗೂ ಕೆಲವು ಸ್ಥಳೀಯ ಪುಢಾರಿಗಳೂ ಎಂಜಲು ಕಾಸಿನ ಆಸೆಗಾಗಿ ಇಂಥಾ ದ್ರೋಹದ ಕಾರ್ಯಕ್ಕೆ ಮುಂದಾಗಿದ್ದಾರೆ. ಸುಪ್ರೀಂಕೋರ್ಟಿನ ನಿರ್ದೇಶನವನ್ನು ಆಧರಿಸಿ ಕರ್ನಾಟಕ ಸರ್ಕಾರ ಹೊರಡಿಸಿರುವ ಸುತ್ತೋಲೆಯ ಪ್ರತಿಯನ್ನು ಡಿಸಿ ಅಯ್ಯಪ್ಪನ ಕೈಗೆ ಕೊಟ್ಟು ಕೋರ್ಟ್ ಆದೇಶವನ್ನು ಪಾಲಿಸಬೇಕೆಂದು ಗ್ರಾಮಸ್ಥರು ವಿನಂತಿಸಿಕೊಂಡಾಗ ಅಯ್ಯಪ್ಪ ಗ್ರಾಮಸ್ಥರ ಮುಖಕ್ಕೆ ಆ ಪ್ರತಿಯನ್ನು ಎಸೆದು ದರ್ಪದಿಂದ ವರ್ತಿಸಿದ್ದಾನೆ.


ವಿಧಿಯಿಲ್ಲದೆ ಗ್ರಾಮದ ಯುವಕರಾದ ಗೋವಿಂದರಾಜು ಮತ್ತು ನರಸಿಂಹಮೂರ್ತಿ ಕಾನೂನು ಹೋರಾಟ ನಡೆಸಲು ನಿರ್ಧರಿಸಿ ಹೈಕೋರ್ಟ್‌ನಲ್ಲಿ ಪಿಐಎಲ್ ದಾಖಲಿಸಿದ್ದಾರೆ. ಹೈಕೋರ್ಟ್ ಈಗಾಗಲೇ ಸಂಬಂಧಪಟ್ಟವರಿಗೆ ನೋಟಿಸ್ ಜಾರಿ ಮಾಡಿ, ವಿವಾದಿತ ಜಮೀನಿನಲ್ಲಿ ಯಾವುದೇ ಕಟ್ಟಡ ನಿರ್ಮಾಣ ಮಾಡಬಾರದೆಂದು ಆದೇಶಿಸಿದೆ.

ಅಯ್ಯಪ್ಪನಂಥ ಭ್ರಷ್ಟ ಅಧಿಕಾರಿಗಳನ್ನು ಜೈಲಿಗೆ ಹಾಕುವವರೆಗೂ ಸರ್ಕಾರ ಹಾಗೂ ಸಾರ್ವಜನಿಕ ಸ್ವತ್ತುಗಳಿಗೆ ಉಳಿಗಾಲವಿಲ್ಲ. ಕಂದಾಯ ಮಂತ್ರಿ ಶ್ರೀನಿವಾಸ ಪ್ರಸಾದ್ ಹಾಗೂ ನೂತನ ಸಿಎಂ ಸಿದ್ದರಾಮಯ್ಯನವರು ಇಂಥಾ ಭ್ರಷ್ಟರಿಗೆ ಮೂಗುದಾರ ಹಾಕುವಂತಾಗಲಿ ಎಂಬುದು ಗ್ರಾಮಸ್ಥರ ಸದಾಶಯ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಅಮ್ಮನ ನೆರಳಿನಲ್ಲಿ ನಿಗೂಢ ಸಾವುಗಳು

ಕೇರಳದ ಮೂಲ ಆಶ್ರಮದ ಸುತ್ತಲೂ ಅನೇಕ ...ವ್ಯವಹಾರಗಳು ನಡೆದಿರುವ ಬಗ್ಗೆ ಆಗಾಗ್ಗೆ ವರದಿಯಾಗು...ತ್ತದೆ. ಅಮ್ಮ ಆಶ್ರಮದ ಸುತ್ತ ಅದೆಷ್ಟೋ ನಿಗೂಢ ...ಗಳಿವೆ. ಅದರಲ್ಲಿ ಇತ್ತೀಚೆಗೆ ನಡೆದ ವಿದ್ಯಾರ್ಥಿಯೊಬ್ಬನ ...ಡಿ ಸಾವಿನ ನಿಗೂಢ ಪ್ರಕರಣವೂ ಒಂದು.


ಸತ್ನಾಮ್ ಸಿಂಗ್ ಮಾನ್

2012ರ ಆಗಸ್ಟ್‌ನಲ್ಲಿ ಕೇರಳದ ...ಲ್ಲಿನ ಅಮೃತಾನಂದಮಯಿ ಆಶ್ರಮದಲ್ಲಿ ...ತ್ನಾಮ್ ಸಿಂಗ್‌ಮಾನ್ ಎಂಬ ...ದ್ಯಾರ್ಥಿಯೊಬ್ಬ ಅಮ್ಮನ ಬಹಿರಂಗ ...ದೆಯಲ್ಲಿ ಸೀದಾ ಪೋಡಿಯಂ ಏರಿ ...ಕೋ ಮಾತಾಡಲು ಪ್ರಯತ್ನಿಸಿದ. ...ಷ್ಟರಲ್ಲೇ ಅಮ್ಮನ ಬೆಂಗಾವಲಿಗಿರುವ ..."ಭಕ್ತರು" ಆತನನ್ನು ಹಿಡಿದು ಥಳಿಸಿ ...ೊಲೀಸರಿಗೆ ಒಪ್ಪಿಸಿದರು. ಆಶ್ರಮದ ...ತಿಳಿತ ಪ್ರಕಾರ ಈ ವಿದ್ಯಾರ್ಥಿಯೊಬ್ಬ ...ಾನಸಿಕ ಅಸ್ವಸ್ಥ.

... ಪೊಲೀಸರು ಆತನ ಮೇಲೆ ಇಲ್ಲಸಲ್ಲದ ...ಪುಗಳನ್ನು ದಾಖಲಿಸಿ ಜೈಲಿಗಟ್ಟಿದರು. ...ದಿನಗಳಲ್ಲೇ ಆ ವಿದ್ಯಾರ್ಥಿಯನ್ನು ಜೈಲಿನಲ್ಲೇ ಚಿತ್ರಹಿಂಸೆ ...ಡಿ ಕೊಂದುಹಾಕಲಾಯಿತು. ಮರಣೋತ್ತರ ...ರೀಕ್ಷೆಯಿಂದ ತಿಳಿದುಬಂದ ಸತ್ಯ ಆಘಾತಕಾರಿಯಾಗಿತ್ತು. ...ನ ಶವದ ಮೇಲೆ ಬರೋಬ್ಬರಿ 77 ಗಾಯದ ...ುರುತುಗಳಿದ್ದವು. ಆತನ ತಲೆಯ ಹಿಂಬದಿಯಲ್ಲಿ ಹಾಗೂ ...ತ್ತಿಗೆಯ ಮೇಲೆ ಹರಿತ ಆಯುಧದಿಂದಾದ ಗಾಯದ ...ುರುತುಗಳಿದ್ದವು.

... ಈ ಕೇಸು ಹೈಕೋರ್ಟ್ ಮೆಟ್ಟಿಲೇರಿತು. ಇದು ...ಷ್ಟವಾಗಿ ಕಸ್ಟಡಿ ಸಾವು ಎಂದು ಕೋರ್ಟ್ ...ಪ್ರಾಯಪಟ್ಟು ತನಿಖೆಗೆ ಆದೇಶಿಸಿದೆ. ಅಮ್ಮ ಆಶ್ರಮದ ...ಹಾವಳಿಯಲ್ಲಿರುವ ಕೇರಳ ಪೊಲೀಸರ ಮೇಲೆ ...ಶ್ವಾಸವಿಲ್ಲದ ಸತ್ನಾಮ್‌ನ ಬಂಧು-ಮಿತ್ರರು ಹಾಗೂ ...ನವ ಹಕ್ಕು ಸಂಘಟನೆಗಳು ಸಿಬಿಐ ತನಿಖೆಗೆ ಆಗ್ರಹಿಸಿ...ತ್ತಿಸಿದ್ದಾರೆ.

...ಆಶ್ರಮ ಹಾಗೂ ಪೊಲೀಸರು ಆರೋಪಿಸುತ್ತಿರುವಂತೆ ... ಸತ್ನಾಮ್ ವಿದ್ಯಾರ್ಥಿ ನಿಜವಾಗಿಯೂ ಮಾನಸಿಕ ...ಗಿದ್ದ ಪಕ್ಷದಲ್ಲಿ ಆತನನ್ನು ಈ ರೀತಿ ಅಮಾನುಷವಾಗಿ ಕೊಲ್ಲಬೇಕಾದ ಜರೂರತ್ತು ಯಾರಿಗಿತ್ತು? ಪೊಲೀಸರ ವಶದಲ್ಲಿದ್ದ ಆತನನ್ನು ಬಿಡಿಸುವಂತೆ ಸತ್ನಾಮ್‌ನ ಕುಟುಂಬ ವರ್ಗದವರು ಪರಿಪರಿಯಾಗಿ ಬೇಡಿಕೊಂಡರೂ ಅಮ್ಮ ಅದನ್ನು ನಿರಾಕರಿಸಿದ್ದೇಕೆ? ಜಗತ್ತಿಗೇ ಪ್ರೀತಿಯ ಅಪ್ಪುಗೆ ನೀಡುವ ಅಮ್ಮ ಈ ಅಸಹಾಯಕ ಯುವಕನ ವಿಷಯದಲ್ಲಿ ಅಷ್ಟೊಂದು ಕಠೋರ ಹೃದಯಿಯಾಗಿದ್ದೇಕೆ? ಅದರ ಹಿಂದಿರುವ ನಿಗೂಢ ಕಾರಣಗಳೇನು ಎಂಬ ಪ್ರಶ್ನೆಗಳಿಗೆ ಸದ್ಯಕ್ಕೆ ಉತ್ತರವಿಲ್ಲ.

ಆದರೆ ವಿದ್ಯಾರ್ಥಿಯ ತಂದೆ ಹರೇಂದರ್ ಕುಮಾರ್ ಹಾಗೂ ಆತನ ನೂರಾರು ಸ್ನೇಹಿತರ ಪ್ರಕಾರ ಸತ್ನಾಮ್ ಪ್ರತಿಭಾವಂತ ವಿದ್ಯಾರ್ಥಿ. ಆತನಿಗೆ ಯಾವುದೇ ಮಾನಸಿಕ ಸಮಸ್ಯೆಗಳೂ ಇರಲಿಲ್ಲ. ಅಷ್ಟು ಮಾತ್ರವಲ್ಲ; ಸದಾ ಹಸನ್ಮುಖಿಯಾಗಿರುತ್ತಿದ್ದ ಆತ ಎಂದೂ, ಯಾರಿಗೂ ಕೇಡು ಬಯಸಿದವನಲ್ಲ. ಲಕ್ನೋದ ರಾಷ್ಟ್ರೀಯ ಕಾನೂನು ವಿದ್ಯಾಲಯದಲ್ಲಿ ಕಾನೂನು ವಿದ್ಯಾರ್ಥಿಯಾಗಿದ್ದ ಸತ್ನಾಮ್‌ನ ವಯಸ್ಸು ಇನ್ನೂ ಕೇವಲ 23 ವರ್ಷ. ಎಲ್ಲರೊಂದಿಗೆ ಆತ್ಮೀಯತೆಯಿಂದಿರುತ್ತಿದ್ದ ಆತನ ಗೆಳೆಯರ ದಂಡು ಬಹಳ ದೊಡ್ಡದಿತ್ತು. 'ಸತ್ನಾಮ್ ಮೆಮೋರಿಯಲ್ ಕ್ರಿಕೆಟ್ ಟೂರ್ನಮೆಂಟ್' ನಡೆದದ್ದೇ ಅದಕ್ಕೆ ಸಾಕ್ಷಿ.

ಸತ್ನಾಮ್‌ನ ಆತ್ಮೀಯರ ಪ್ರಕಾರ ಆತನಿಗೆ ಹಲವು ಆಧ್ಯಾತ್ಮಿಕ ಪ್ರಶ್ನೆಗಳಿದ್ದವು. ನಿಜವಾದ ಜ್ಞಾನ ಹಾಗೂ ನಿಜವಾದ ಗುರುವನ್ನು ಕಾಣಬೇಕೆಂಬ ತುಡಿತ ಆತನಲ್ಲಿತ್ತು.

ಈತನ ದುರಂತ ಅಂತ್ಯದ ಬಗ್ಗೆ ಗೆಳೆಯರ ಅಭಿಪ್ರಾಯ ಇಷ್ಟು. ಅತೀವ ಆಧ್ಯಾತ್ಮಿಕ ಆಸಕ್ತಿಯಿದ್ದ ಸತ್ನಾಮ್ ಕೊಲ್ಲಂನ ಆಶ್ರಮಕ್ಕೆ ಹೋಗಿದ್ದಾನೆ. ಆದರೆ ಅಲ್ಲಿನ ಸನ್ನಿವೇಶದಿಂದ ಭ್ರಮನಿರಸನಗೊಂಡು ಅದನ್ನು ವೇದಿಕೆಯಲ್ಲೇ ಬಹಿರಂಗಪಡಿಸಲು ಮುಂದಾಗಿದ್ದಾನೆ. ಅಲ್ಲಿಂದಾಚೆಗೆ ನಡೆದದ್ದೆಲ್ಲಾ ಒಂದು ಭಾರೀ ಷಡ್ಯಂತ್ರ ಮಾತ್ರ. ಈ ಷಡ್ಯಂತ್ರದ ಭಾಗವಾಗಿದ್ದ ಪೊಲೀಸರೇ ತನಿಖೆ ಮುಂದುವರೆಸಿದ್ದಾರೆ. ಸತ್ಯಸಂಗತಿ ಬಯಲಾಗುತ್ತದೆ ಎಂದು ಯಾರಾದರೂ ನಂಬುತ್ತೀರಾ?

ಸರ್ಕಾರಿ ಭೂಮಿ ಯಾರ ಅಪ್ಪನದು?



ಅಯ್ಯಪ್ಪ

ತಮ್ಮ ಗ್ರಾಮದ ಗೋಮಾಳ ಭೂಮಿ ಮಾಫಿಯಾಗಳ ಪಾಲಾಗುತ್ತಿರುವುದನ್ನು ಕಂಡು ಸಹಿಸಲಾಗದ, ಗ್ರಾಮದ ಯುವಕ ಗೋವಿಂದರಾಜ್ ಅಂದಿನ ಜಿಲ್ಲಾಧಿಕಾರಿಯಾಗಿದ್ದ ಅಯ್ಯಪ್ಪ ಎಂಬ ಸಾಹೇಬರನ್ನು ಭೇಟಿಯಾದರು. ಹೇಗಾದರೂ ಮಾಡಿ ಗ್ರಾಮದ ಸಾರ್ವಜನಿಕ ಸ್ವತ್ತನ್ನು ಉಳಿಸಿಕೊಡುವಂತೆ ಒತ್ತಾಯಿಸಿದರು.

ಆದರೆ ಜಿಲ್ಲಾಧಿಕಾರಿ ಅಯ್ಯಪ್ಪ ಕೇಳಿದ ಮೊದಲನೇ ಪ್ರಶ್ನೆ "ಆ ಭೂಮಿ ನಿನ್ನದಾ?" ಅಂತ. "ನಮ್ಮೂರಿನ ಗೋಮಾಳ ಭೂಮಿ" ಅಂದಿದ್ದಕ್ಕೆ ಅಯ್ಯಪ್ಪ ಮರುಪ್ರಶ್ನೆ ಎಸೆದ. "ಅದು ನಮ್ಮ ಸರ್ಕಾರದ ಭೂಮಿ; ಅದನ್ನು ನಾನು ಯಾರಿಗೆ ಬೇಕಾದರೂ ಕೊಡುತ್ತೇನೆ; ಅದನ್ನು ಕೇಳಲು ನೀನು ಯಾರು? ನಿನಗೇನು ಅಧಿಕಾರ ಇದೆ?" ಅಂತಾ ಅರಚಲು ಶುರು ಮಾಡಿದ. ಕಚೇರಿಯಲ್ಲಿದ್ದ ಅಧೀನ ಅಧಿಕಾರಿಗಳೂ ಅಯ್ಯಪ್ಪನ ಜೊತೆ ಸೇರಿ ಅಬ್ಬರಿಸಿದರು. ಅಲ್ಲಿಗೆ ಅಧಿಕಾರಿಗಳು ಭೂಮಾಫಿಯಾ ಜೊತೆಗೆ ಶಾಮೀಲಾಗಿದ್ದಾರೆಂಬ ಸತ್ಯ ಗ್ರಾಮಸ್ಥರಿಗೆ ನಿಚ್ಚಳವಾಯ್ತು.

ಸಾರ್ವಜನಿಕ ಭೂಮಿಯನ್ನು ತಮ್ಮ ಇಚ್ಛಾನುಸಾರ ಭೂಗಳ್ಳರಿಗೆ ಪರಭಾರೆ ಮಾಡಲು ಈ ಭೂಮಿ ಅಯ್ಯಪ್ಪನದೋ? ಅವರ ಅಪ್ಪನದೋ? ಎಂಬುದು ಸದ್ಯ ಗ್ರಾಮಸ್ಥರ ಪ್ರಶ್ನೆ!

ಕೆ.ಆರ್.ಪೇಟೆ: ಮರಳು ಮಾಫಿಯಾಕ್ಕೆ 'ಹೇಮಾವತಿ' ಬಲಿ!



ಮಾಜಿ ಶಾಸಕ ಚಂದ್ರಶೇಖರನ ಮಗ ಡಾ.ಶ್ರೀಕಾಂತ್



ಕೆ.ಆರ್.ಪೇಟೆ ತಾಲ್ಲೂಕಿನ ವರಹನಾಥಕಲ್ಲಹಳ್ಳಿ ಬಳಿ ಹೇಮಾವತಿ ನದಿಯಲ್ಲಿ ಅಕ್ರಮವಾಗಿ ಮರಳು ಗಣಗಾರಿಕೆ ನಡೆಸಿ ಸಂಗ್ರಹಿಸಿರುವ ಮರಳನ್ನು ಲಾರಿಗಳಿಗೆ ಲೋಡ್ ಮಾಡುತ್ತಿರುವುದು.

ಹಣ ಮಾಡಲೇಬೇಕೆನ್ನುವ ಹಪಾಹಪಿಗೆ ಬಿದ್ದಿರುವ ದುರುಳರಿಗೆ ಕಡಿವಾಣ ಬೀಳದ ಹೊರತು ಮಂಡ್ಯ ಜಿಲ್ಲೆಯಲ್ಲಿ ಅಕ್ರಮ ಮರಳು ದಂಧೆ ನಿಲ್ಲುವ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ, ಅದರಲ್ಲೂ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಅಕ್ರಮ ಮರಳುಗಾರಿಕೆಯಿಂದ ಹೇಮಾವತಿ ನದಿ ಬತ್ತಿ ಹೋಗಿ, ಅಂತರ್ಜಲಮಟ್ಟ ಕುಸಿದು, ಕುಡಿಯುವ ನೀರಿಗೆ ಜನ ಪರದಾಡುವಂತಾಗಿದೆ. ಅಕ್ರಮ ಮರಳುದಂಧೆಯಲ್ಲಿ ಕೊಬ್ಬಿರುವ ಕುಖ್ಯಾತರಿಗೆ ಸರ್ಕಾರ ಕಡಿವಾಣ ಹಾಕದಿದ್ದರೆ ಕಾವೇರಿ ಹಾಗೂ ಹೇಮಾವತಿ ಜೀವನದಿಗಳನ್ನು ಯಾರಿಂದಲೂ ಕಾಪಾಡಲು ಸಾಧ್ಯವಿಲ್ಲ.

ಕಾಂಕ್ರೀಟ್ ನಗರಿ ಬೆಂಗಳೂರಿನಲ್ಲಿ ಮರಳಿಗೆ ಚಿನ್ನದ ಬೆಲೆ. ಲೋಡಿಗೆ 25ರಿಂದ 30 ಸಾವಿರಕ್ಕೂ ಮೀರಿ ವ್ಯಾಪಾರ ನಡೆಯುತ್ತಿದೆ. ಕೆ.ಆರ್.ಪೇಟೆಯ ಅಕ್ರಮ ಮರಳುದಂಧೆಗೆ ಇದೇ ಮೂಲ. ಜಿಲ್ಲಾಡಳಿತ ಎಷ್ಟೇ ಎಚ್ಚರ ವಹಿಸಿದರೂ ಮರಳು ಮಾಫಿಯಾಕ್ಕೆ ಕಡಿವಾಣ ಹಾಕಲು ಸಾಧ್ಯವಾಗಿಲ್ಲ, ಇದರಲ್ಲಿ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಎನ್ನದೆ ಎಲ್ಲಾ ಪಕ್ಷಗಳ ಮುಖಂಡರು ಭಾಗಿಯಾಗಿ ಜೀವಗಂಗೆಗಳ ಒಡಲನ್ನು ಲೂಟಿ ಮಾಡುತ್ತಿದ್ದಾರೆ.

ಮಾಜಿ ಶಾಸಕನ ಮಗ ಶ್ರೀಕಾಂತನೇ ಡಾನ್

ಕೆ.ಆರ್.ಪೇಟೆಯಲ್ಲಿ ನಡೆಯುತ್ತಿರುವ ಮರಳು ಮಾಫಿಯಾದ ಮುಂಚೂಣಿಯಲ್ಲಿ ಕೇಳಿಬರುವ ಹೆಸರೇ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರನ ಮಗ ಡಾ.ಶ್ರೀಕಾಂತ್ ನದು. ದಂತ ವೈದ್ಯನಾಗಿರುವ ಡಾ.ಶ್ರೀಕಾಂತ್ ಹಲ್ಲು ಕೀಳುವ ಬದಲು ಕಾವೇರಿ ಹಾಗೂ ಹೇಮಾವತಿ ಒಡಲಿನಿಂದ ಮರಳು ಬಗೆಯುವುದರಲ್ಲಿ ಬಹಳ ನಿಸ್ಸೀಮ. ಈತನಿಗೆ ಪಟ್ಟಣದಲ್ಲಿ ಒಂದು ಡೆಂಟಲ್ ಕ್ಲಿನಿಕ್ ಕೂಡಾ ಇದೆ. ಆದರೆ ಅಲ್ಲಿ ಹಲ್ಲುಕಿತ್ತು ಪುಡಿಗಾಸು ದುಡಿಯುವ ಬದಲು ದಿನಕ್ಕೆ ಏನಿಲ್ಲವೆಂದರೂ ಲಕ್ಷಾಂತರ ರೂಪಾಯಿ ಆದಾಯ ತರುವ ಅಕ್ರಮ ಮರಳುಗಾರಿಕೆಯೇ ಇವನ ಕರಾಳ ವೃತ್ತಿ, ಡಾಲುರವಿ ಹಾಗೂ ಕಟ್ಟೆ ಕ್ಯಾತನಹಳ್ಳಿ ಪಾಪಣ್ಣ ಎಂಬ ಛೇಲಾಗಳನ್ನು ತನ್ನ ಎಡಬಲದಲ್ಲಿಟ್ಟು ಕೊಂಡು ಮರಳುದಂಧೆಯಲ್ಲಿ ತೊಡಗಿರುವ ಡಾ.ಶ್ರೀಕಾಂತ 'ಹೇಮೆ' ಒಡಲನ್ನು ಬಗೆದು ಕೋಟಿ ಕೋಟಿ ರೊಕ್ಕ ಬಾಚುತ್ತಿದ್ದಾನೆ.

ಅಪ್ಪ ಚಂದ್ರಶೇಖರ್ ಶಾಸಕನಾಗಿದ್ದ ಅವಧಿಯಲ್ಲೆ ಡಾ.ಶ್ರೀಕಾಂತ ಅಕ್ರಮ ಮರಳು ದಂಧೆ ಮೇಲೆ ಸಾಕಷ್ಟು ನಿಯಂತ್ರಣ ಸಾಧಿಸಿದ್ದ. ಅವನಪ್ಪ ಶಾಸಕನಾಗಿದ್ದರಿಂದ ಆತನನ್ನು ಮುಟ್ಟುವ ಧೈರ್ಯ ಕೆ.ಆರ್.ಪೇಟೆಯ ಪೊಲೀಸರಿಗೆ ಇರಲೇ ಇಲ್ಲ, ಅವರ ಬಾಯಿಗೂ ಒಂದಷ್ಟು ಹಾಕುತ್ತಿದ್ದ ಶ್ರೀಕಾಂತ ತನ್ನ ದಂಧೆಯನ್ನು ವಿಸ್ತರಿಸಿಕೊಂಡು ಕೋಟ್ಯಾಂತರ ಹಣ ಮಾಡಿದ. ಆದರೆ ಈಗ ಅವನಪ್ಪ ಸೋತು ಮಾಜಿಯಾಗಿದ್ದರೂ ಸಹ ಮರಳು ಮಾಫಿಯಾದ ಮುಂಚೂಣಿಯಲ್ಲಿರುವ ಡಾ.ಶ್ರೀಕಾಂತನನ್ನು ಮುಟ್ಟುವ ತಾಕತ್ತು ಪೊಲೀಸರಿಗಿನ್ನೂ ಬಂದಂತಿಲ್ಲ.

ಒಂದೆರಡು ದಿನಗಳ ಹಿಂದೆ ಜಿಲ್ಲಾಧಿಕಾರಿ ಕೃಷ್ಣಯ್ಯ ಹಾಗೂ ಎಸ್ಪಿ ಭೂಷಣ್ ಬೊರಸೆ ನಿರ್ದೇಶನದಂತೆ ತಂಡವೊಂದು ಅಕ್ರಮ ಮರಳುಗಾರಿಕೆ ಅಡ್ಡೆಗಳ ಮೇಲೆ ದಾಳಿ ನಡೆಸಿ ಹಿಟಾಚಿ, ಜೆಸಿಬಿ, ಟಿಪ್ಪರ್‌ಗಳನ್ನು ವಶಪಡಿಸಿಕೊಂಡಿದ್ದರೂ ಶ್ರೀಕಾಂತನ ಅಡ್ಡೆಗಳತ್ತ ಈ ತಂಡ ತಲೆಯನ್ನೂ ಹಾಕದೆ ವಾಪಾಸು ಬಂದಿದೆ. ಅಲ್ಲಿಗೆ ಮರಳು ದಂಧೆಯಲ್ಲಿ ಆ ಶ್ರೀಕಾಂತ ಅದಿನ್ನೆಂತ ಹಿಡಿತ ಸಾಧಿಸಿರಬಲ್ಲ ಎನ್ನುವುದು ಸಾಬೀತಾಗುತ್ತದೆ.

ಅಪ್ಪ ಕೆ.ಬಿ.ಚಂದ್ರಶೇಖರ್ ಶಾಸಕನಾಗಿದ್ದಾಗ ಬಹುಪಾಲು ಗುತ್ತಿಗೆಗಳನ್ನು ಶ್ರೀಕಾಂತನೇ ಬೇನಾಮಿಯಾಗಿ ಹಿಡಿಯುತ್ತಿದ್ದ, ತಾಲ್ಲೂಕಿನಲ್ಲಿ ನಡೆದಿರುವ ಹೇಮಾವತಿ ನಾಲಾ ಆಧುನೀಕರಣ ಕಾಮಗಾರಿಯು ಅಪ್ಪೂ ಕಾಮಗಾರಿಗಳಿಗೆ ಈತನೇ ಮರಳು ಸಪ್ಲೈ ಮಾಡುತ್ತಿದ್ದನೆಂದರೆ, ಶ್ರೀಕಾಂತನ 'ವ್ಯಾಪ್ತಿ' ಅರ್ಥವಾಗಿ ಹೋಗುತ್ತದೆ. ತನ್ನ ಅಪ್ಪ ಎಂ.ಎಲ್.ಎ ಆಗಿದ್ದನ್ನೆ ಬಂಡವಾಳ ಮಾಡಿಕೊಂಡ ಶ್ರೀಕಾಂತ ಉಳಿದ ಗುತ್ತಿಗೆದಾರರು ಕೂಡ ಇವನಿಂದಲೇ ಮರಳು ಪಡೆಯಬೇಕಾದ 'ಲೋಕಲ್ ಸಂವಿಧಾನ'ವನ್ನೇ ಸೃಷ್ಟಿಸಿಕೊಂಡಿದ್ದ.

ದಕ್ಷ ತಹಶೀಲ್ದಾರ್ ಎತ್ತಂಗಡಿ

ಕೆ.ಆರ್.ಪೇಟೆಯಲ್ಲಿ ಅಕ್ರಮ ಮರಳು ದಂಧೆಯನ್ನು ತಡೆಯಲು ಪ್ರಯತ್ನಗಳೇ ನಡೆದಿಲ್ಲ ಅಂತಲ್ಲ, ಸಾಕಷ್ಟು ಪ್ರಾಮಾಣಿಕ ಅಧಿಕಾರಿಗಳಿದ್ದರೂ ಅವರ್‍ಯಾರಿಗೂ ಸೂಕ್ತ ಬೆಂಬಲ ಸಿಗದೆ, ಮಾಫಿಯಾದ ಪ್ರಭಾವದಿಂದ ಎತ್ತಂಗಡಿಯಾಗಬೇಕಾಗಿ ಬಂದಿದೆ. ಅಂತವರಲ್ಲಿ ಡಾ.ಹೆಚ್.ಎಲ್.ನಾಗರಾಜು ಎಂಬ ದಕ್ಷ ತಹಶೀಲ್ದಾರ್ ಕೂಡಾ ಒಬ್ಬರು. ತಾಲ್ಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಮರಳುಗಾರಿಕೆಯ ಮೇಲೆ ಆಗಾಗ್ಗೆ ದಾಳಿ ಮಾಡುತ್ತಾ ಮರಳುದಂಧೆಕೋರರಿಗೆ ಬಿಸಿ ಮುಟ್ಟಿಸುತ್ತಿದ್ದ ತಹಶೀಲ್ದಾರ್ ನಾಗರಾಜುಗೆ ಸ್ವತಃ ಪೊಲೀಸರಿಂದಲೇ ಸರಿಯಾದ ಸಹಕಾರ ಸಿಕ್ಕಿರಲಿಲ್ಲ, ತಹಶೀಲ್ದಾರ್ ನಾಗರಾಜು ಅಕ್ರಮ ಮರಳುಗಾರಿಕೆ ಅಡ್ಡೆಗಳ ಮೇಲೆ ದಾಳಿ ಮಾಡಲು ಸಹಕಾರ ನೀಡಬೇಕೆಂದು ಸರ್ಕಲ್ ಇನ್ಸ್‌ಪೆಕ್ಟರ್ ಸಂದೇಶ್‌ಕುಮಾರ್‌ಗೆ ಫೋನ್ ಮಾಡಿದರೆ 'ನಾನು ಅಲ್ಲಿದ್ದೇನೆ, ಇಲ್ಲಿದ್ದೇನೆ ಈಗ ಬರ್ತೇನೆ, ಆಗ ಬರ್ತೇನೆ' ಅಂತ ನೆಪಗಳು ಮಾತ್ರವೇ ಸಿಗುತ್ತಿದ್ದವು. ಮರಳುದಂಧೆಕೋರರು ಮತ್ತು ಸಿಪಿಐ ಸಂದೇಶ್‌ಕುಮಾರ್‌ನ ಹೊಂದಾಣಿಕೆ ಅಂತದ್ದು. ಆದರೂ ತಹಶೀಲ್ದಾರ್ ನಾಗರಾಜು ಕಂದಾಯ ಅಧಿಕಾರಿಗಳೊಂದಿಗೆ ದಾಳಿ ಮಾಡಿ ಮರಳುದಂಧೆಕೋರರ ಮೇಲೆ ಮುಗಿಬೀಳುತ್ತಿದ್ದರು. ಇದನ್ನು ಸಹಿಸದ ಮರಳುಮಾಫಿಯಾ ಶ್ರೀಕಾಂತನ ನೇತೃತ್ವದಲ್ಲಿ ತಹಶೀಲ್ದಾರ್ ನಾಗರಾಜುರವರನ್ನೇ ಎತ್ತಂಗಡಿ ಮಾಡಿಸಿತು.

ವರ್ಗವಾದ ತಹಶೀಲ್ದಾರ್ ನಾಗರಾಜುರವರ ಜಾಗಕ್ಕೆ ಬಂದದ್ದು ಅಹೋಬಲಯ್ಯ ಎಂಬ 55ರ ವೃದ್ಧ. ಹಿಂದೆ ಬಂದರೆ ಹಾಯದ ಮುಂದೆ ಬಂದರೆ ಒದೆಯದ ಅಹೋಬಲಯ್ಯ ಬಂದ ಮೇಲಂತು ಅಕ್ರಮ ಮರಳುಗಾರಿಕೆಗೆ ಯಾವ ಅಡೆತಡೆಯೂ ಇಲ್ಲದಂತಾಯಿತು. ದಿನಕ್ಕೆ ನೂರಾರು ಲಾರಿಗಳು ಅಕ್ರಮ ಮರಳು ಸಮೇತ ಬೆಂಗಳೂರಿನತ್ತ ಹೊರಡುತ್ತಿವೆ. ಮರಳುಗಳ್ಳರು ನಿರಂತರವಾಗಿ ಹೇಮಾವತಿ ಒಡಲನ್ನು ಬಗೆಯುತ್ತಿದ್ದರೂ ತಹಶೀಲ್ದಾರ್ ಅಂಕಲ್ ಅತ್ತ ಕಡೆ ತಲೆ ಕೂಡಾ ಹಾಕುತ್ತಿಲ್ಲ.

ಮರಳುಗಳ್ಳರಿಗೆ ಸಿಪಿಐ ಸಂದೇಶನ ಸಾಥ್

ಕೆ.ಆರ್.ಪೇಟೆಯಲ್ಲಿ ಮರಳುದಂಧೆ ಮಾಫಿಯಾ ಮಟ್ಟಕ್ಕೆ ಬೆಳೆಯಲು ಇಲ್ಲಿನ ಕೆಲ ಪೊಲೀಸರೇ ಕಾರಣ. ಅದರಲ್ಲೂ ಟೌನ್ ಸಿಪಿಐ ಸಂದೇಶ್‌ಕುಮಾರ್‌ನೇ ಮರಳುಗಳ್ಳರಿಗೆ ಗಾಡ್‌ಫಾದರ್! ಶೃಂಗೇರಿ ಕಡೆಯವನಾದ ಈತ ಮಾಧ್ಯಮ ಪ್ರಚಾರಕ್ಕೋಸ್ಕರ ಮಾತೆತ್ತಿದರೆ ಕಲೆ-ಸಾಹಿತ್ಯ-ಕುವೆಂಪು-ಬೇಂದ್ರೆ ಅಂತೆಲ್ಲಾ ಭಾಷಣ ಕುಟ್ಟುತ್ತಾನೆ. ಆದರೆ ತನ್ನದೇ ವ್ಯಾಪ್ತಿಯಲ್ಲಿ ಜೀವನದಿಗಳ ಹಗಲು ಅತ್ಯಾಚಾರ ನಡೆಯುತ್ತಿದ್ದರೂ ತನಗೂ ಅದಕ್ಕೂ ಸಂಬಂಧವೇ ಇಲ್ಲದಂತೆ ಮೌನವಾಗಿಬಿಡುತ್ತಾನೆ. ಇಂತಹ ಸಂದೇಶಕುಮಾರನ ಕುಮ್ಮಕ್ಕಿನಿಂದಲೇ ಮರಳುದಂಧೆಕೋರರು ನಿರಂತರವಾಗಿ ಮರಳು ಲೂಟಿಯಲ್ಲಿ ತೊಡಗಿದ್ದಾರೆ.

ಯಾವಾಗ ಮರಳುದಂಧೆಯಿಂದ ಪ್ರಾಕೃತಿಕ ಸಂಪತ್ತು ಲೂಟಿಯಾಗಿ, ಹೇಮಾವತಿ, ಕಾವೇರಿ ನದಿಗಳಲ್ಲಿ ನೀರು ಇಲ್ಲವಾಯಿತೋ ಎಚ್ಚೆತ್ತ ಕೆ.ಆರ್.ಪೇಟೆ ನಾಗರಿಕರು ಜಿಲ್ಲಾಧಿಕಾರಿ, ಎಸ್ಪಿ ಗಮನ ಸೆಳೆದರು. ಅವರ ಆದೇಶದಂತೆ 3-4 ದಿನಗಳ ಹಿಂದೆ ಅಕ್ರಮ ಮರಳು ಅಡ್ಡೆಗಳ ಮೇಲೆ ದಾಳಿ ನಡೆಸಲಾಗಿದೆ. ಈ ಸಂದರ್ಭದಲ್ಲಿ 600 ಲಾರಿಯಷ್ಟು ಅಕ್ರಮ ಮರಳು ಸಿಕ್ಕಿದೆ. ಒಂದೇ ದಿನದಲ್ಲಿ ಇಷ್ಟೊಂದು ಮರಳು ಸಿಕ್ಕಿದೆಯೆಂದರೆ ನಿತ್ಯ ನಿರಂತರವಾಗಿ ನಡೆಯುತ್ತಿರುವ ಈ ದಂಧೆಯಿಂದ ಇದುವರೆಗೂ ಅದೆಷ್ಟು ಮರಳು ಖದೀಮರ ಪಾಲಾಗಿರಬಹುದು?


ಡಿಸಿ, ಎಸ್ಪಿಗಳ ಆದೇಶದ ನಂತರ ದಾಳಿ ಮಾಡಿದ ಸಿಪಿಐ ಸಂದೇಶ್‌ಕುಮಾರ್ ಇದುವರೆಗೂ ಏನು ಮಾಡುತ್ತಿದ್ದ? ಎಂಬುದು ಪೊಲೀಸ್ ಇಲಾಖೆಗೆ ಕೆ.ಆರ್ ಪೇಟೆ ಜನರ ಪ್ರಶ್ನೆ. ಪಟ್ಟಣ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ರಂಗಸ್ವಾಮಿ ಮರಳು ದಂಧೆಕೋರರ ಮೇಲೆ ಆಗಾಗ ದಾಳಿ ಮಾಡಿದರೂ ಸಿಪಿಐ ಸಂದೇಶ್‌ಕುಮಾರ್ ಮಾತ್ರ ಆತನಿಗೆ ಸಹಕರಿಸುತ್ತಲೇ ಇರಲಿಲ್ಲ, ವಿಪರ್ಯಾಸ ಅಂತಂದರೆ ಮರಳುಗಳ್ಳತನದ ಲಾಭವನ್ನು ಕಣ್ಣಾರೆ ಕಂಡಿದ್ದ ಹಿಂದಿನ ಸಬ್‌ಇನ್ಸ್‌ಪೆಕ್ಟರ್ ಹೆಚ್.ಶಿವಕುಮಾರ್‌ನೇ ಮೂರು ಲಾರಿಗಳನ್ನು ಖರೀದಿಸಿ ಅವುಗಳನ್ನು ಮರಳುಗಳ್ಳತನಕ್ಕೆ ಮೀಸಲಿಟ್ಟಿದ್ದ!


ಪಕ್ಷಾತೀತ ಮರಳು ದಂಧೆಕೋರರು


ಕೆ.ಆರ್.ಪೇಟೆಯಲ್ಲಿ ಮರಳು ಬಗೆಯಲು ಪಕ್ಷಭೇದವಿಲ್ಲ, ಈ ಕಸುಬಿನಲ್ಲಿ ಎಲ್ಲಾ ಪಕ್ಷದವರೂ ಸಮನಾಗಿ ಕಮಾಯಿ ಕಾಣುತ್ತಿದ್ದಾರೆ. ಕೆಲವೇ ವರ್ಷಗಳ ಹಿಂದೆ ಬರಿಗೈ ದಾಸನಾಗಿದ್ದ ಅನೇಕರು ಇವತ್ತು ಮರಳು ಲೂಟಿಯಿಂದಾಗಿ ಕೋಟ್ಯಾಧೀಶರಾಗಿದ್ದಾರೆ. ಈ ಹಡಬಿಟ್ಟಿ ದುಡ್ಡೇ ಅವರ ಎಲೆಕ್ಷನ್ ಫಂಡು! ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಕೆ.ಆರ್.ಪೇಟೆ ಕೃಷ್ಣ, ಹಾಲಿ ಶಾಸಕ ನಾರಾಯಣಗೌಡನ ಹಿಂದಿರುವ ಅನೇಕರು ಮೆಘಾ ಮರಳುಗಳ್ಳರು.


ಇವತ್ತು ಕಾಂಗ್ರೆಸ್‌ನಲ್ಲಿ ದುಡ್ಡಿರುವ ಕುಳದಂತೆ ಓಡಾಡುತ್ತಿರುವ ದೊಡ್ಡನಕಟ್ಟೆ ಪಾಂಡುಗೆ 10 ವರ್ಷಗಳ ಹಿಂದೆ ಏನೂ ಇರಲಿಲ್ಲ, ಮರಳುಗಳ್ಳತನಕ್ಕಿಳಿದ ಮೇಲೆ ಇವತ್ತು ಹತ್ತಾರು ಕೋಟಿಗಳ ಒಡೆಯ. ಸಂಸದ ಹೆಚ್.ವಿಶ್ವನಾಥ್ ಭಾಮೈದರಾದ ಜಯರಾಮೇಗೌಡ, ನಂಜುಂಡೇಗೌಡ ಕೂಡ ಮರಳುದಂಧೆಯಲ್ಲಿ ತೊಡಗಿದ್ದಾರೆ. ಮೊನ್ನೆ ನಡೆದ ದಾಳಿಯ ಸಂದರ್ಭದಲ್ಲಿ ಮಾಜಿ ಶಾಸಕ ಕೆ.ಆರ್.ಪೇಟೆ ಕೃಷ್ಣರ ಶಿಷ್ಯ ಎ.ಡಿ.ಮೋಹನನ ಹಿಟಾಚಿ, ಜೆಸಿಬಿ, ಟಿಪ್ಪರ್‌ಗಳು ಜಪ್ತಿಯಾಗಿದ್ದು, ಅವರೂ ದಂಧೆಯಲ್ಲಿರುವುದನ್ನು ಸ್ಪಷ್ಟಪಡಿಸಿದೆ. ಇನ್ನು ರೈತಸಂಘದಲ್ಲಿದ್ದ ಹರಳಹಳ್ಳಿ ಹೆಚ್.ಟಿ.ಮಂಜು, ಹಾಲಿ ಶಾಸಕ ನಾರಾಯಣಗೌಡನ ಜೊತೆಯಲ್ಲಿದ್ದುಕೊಂಡೇ ಮರಳುಗಾರಿಕೆ ನಡೆಸಿ, ಸಾಕಷ್ಟು ದುಡ್ಡು ಮಾಡಿಕೊಂಡು ಈಗ ಜಲ್ಲಿ ಕ್ರಷರ್ ನಡೆಸುತ್ತಿದ್ದಾನೆ.

ಬೂಕನಕೆರೆ ಹೋಬಳಿಯಲ್ಲಿ ಮಾಜಿ ಸಿಎಂ ಯಡಿಯೂರಪ್ಪನ ಅಕ್ಕನ ಮಗ ಅರವಿಂದನ ಛೇಲಾಗಳದ್ದೂ ಇದೇ ಕಸುಬು. ಜೆಡಿಎಸ್‌ನ ವಿಶ್ವನಾಥ್, ಸುರೇಶ ಹೆಸರೂ ಇದರಲ್ಲಿ ಕೇಳಿಬರುತ್ತೆ. ಹೀಗೆ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯೇ ತಯಾರಾಗುತ್ತೆ.


ಕೆಆರ್‌ಪೇಟೆ ಕೃಷ್ಣ


ಎಂಎಲ್‌ಎ ನಾರಾಯಣಗೌಡ


ಚಂದ್ರಶೇಖರ್


ಕಟ್ಟೆಕ್ಯಾತನಹಳ್ಳಿ ಪಾಪಣ್ಣ

ಸರ್ಕಾರವೇ ಮರಳು ತೆಗೆಯಲಿ

ತಾಲ್ಲೂಕಿನ ಬೂಕನಕೆರೆ ಹೋಬಳಿಯ ಪೂವನಹಳ್ಳಿ, ವರಾಹನಾಥಕಲ್ಲಹಳ್ಳಿ, ಹೆಮ್ಮನಹಳ್ಳಿ, ಕೂಡಲಕುಪ್ಪೆ, ಯಗಚಗುಪ್ಪೆ, ಕಟ್ಟೇಕ್ಯಾತನಹಳ್ಳಿ, ಸೋಮನಾಥಪುರ, ಬೆಳತೂರು, ಸಂಗಮ, ಬಂಡಿಹೊಳೆ, ಅಂಬಿಗರಹಳ್ಳಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಮರಳುಗಳ್ಳತನ ಎಗ್ಗಿಲ್ಲದೆ ಸಾಗಿದೆ. ದಾಳಿ ನಡೆದರೂ ಅದು ನೆಪಕ್ಕೆ ಮಾತ್ರ. ಯಾವಾಗ ದಾಳಿ ನಡೆದರೂ ಒಂದಷ್ಟು ದಿನ ಸುಮ್ಮನಿರುವ ದಂಧೆಕೋರರು ಮತ್ತೆ ಯಥಾಪ್ರಕಾರ ದಂಧೆಗಿಳಿಯುತ್ತಾರೆ. ಪ್ರತಿ ತಾಲ್ಲೂಕಿನಲ್ಲಿ ಅಕ್ರಮ ಮರಳುಗಣಿಗಾರಿಕೆ ತಡೆಗೆ ಕಂದಾಯ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಲೋಕೋಪಯೋಗಿ ಇಲಾಖೆ, ಪೊಲೀಸ್ ಇಲಾಖೆ ಒಳಗೊಂಡ ತಂಡವನ್ನು ನೇಮಿಸಲಾಗಿದೆ. ಈ ತಂಡ ಅದೇನು ಮಾಡುತ್ತಿದೆಯೋ ಭಗವಂತನೇ ಬಲ್ಲ.

ನದಿ ಪಾತ್ರದಲ್ಲಿ ಮರಳಿದ್ದರೆ ಅಂತರ್ಜಲ ಮಟ್ಟ ಸಹಜವಾಗಿಯೇ ಹೆಚ್ಚಾಗುತ್ತದೆ. ಆದರೆ ಅಕ್ರಮ ಮರಳುಗಣಿಗಾರಿಕೆಯಿಂದಾಗಿ ಅಂತರ್ಜಲಮಟ್ಟ ಸಂಪೂರ್ಣವಾಗಿ ಕುಸಿದಿದೆ. ಇದ್ಯಾವುದೂ ಮರಳುಗಳ್ಳರಿಗೆ ಮುಖ್ಯವಲ್ಲ, ದಾಳಿಯ ಸಂದರ್ಭದಲ್ಲಿ ವಿಧಿಸುವ ದಂಡವೂ ಅವರಿಗೆ ಲೆಕ್ಕಕ್ಕಿಲ್ಲ, ಹಾಗಾಗಿ ಅಕ್ರಮ ಮರಳು ದಂಧೆಯಲ್ಲಿ ತಗುಲಿಕೊಂಡವರಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನು ಪ್ರಾಮಾಣಿಕವಾಗಿ ಅನುಷ್ಠಾನಗೊಳ್ಳಬೇಕು.

ಅಭಿವೃದ್ಧಿ ಕೆಲಸಗಳಿಗೆ, ತಲೆಯ ಮೇಲೊಂದು ಸೂರಿಗೆ ಮರಳು ಅವಶ್ಯಕ. ಖಾಸಗಿಯವರಿಗೆ ಮರಳುಗಣಿಗಾರಿಕೆ ಕೊಡುವುದನ್ನು ಬಿಟ್ಟು ಸರ್ಕಾರ ತಾನೇ ವೈಜ್ಞಾನಿಕವಾಗಿ ಮರಳುಗಾರಿಕೆ ನಡೆಸುವುದು ಉತ್ತಮ. ಇದರಿಂದ ಸರ್ಕಾರಕ್ಕೂ ಆದಾಯ ಬರುತ್ತದೆ, ನದಿ-ಕೆರೆಗಳೂ ಹಾಗೇ ಉಳಿಯುತ್ತವೆ. ಈ ಕುರಿತು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಯೋಚಿಸಲಿ.

ಮರಳು ಮಾಫಿಯಾ ವಿರುದ್ಧ ಡಾ.ಹೆಚ್.ಎಲ್.ನಾಗರಾಜು



ಮರಳು ಮಾಫಿಯಾದ ಪ್ರಭಾವದಿಂದಾಗಿ ದಕ್ಷ ತಹಶೀಲ್ದಾರ್ ಡಾ.ಹೆಚ್.ಎಲ್.ನಾಗರಾಜುರನ್ನು ಕೆ.ಆರ್.ಪೇಟೆಯಿಂದ ಮದ್ದೂರಿಗೆ ಎತ್ತಂಗಡಿ ಮಾಡಲಾಗಿತ್ತು. ಮದ್ದೂರಿಗೆ ಬರುತ್ತಿದ್ದಂತೆಯೇ ಶಿಂಷಾ ನದಿ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ಅಕ್ರಮ ಮರಳುಗಾರಿಕೆ ವಿರುದ್ಧ ತಿರುಗಿ ಬಿದ್ದ ನಾಗರಾಜ್ ಭಾರೀ ಪ್ರಮಾಣದಲ್ಲಿ ಮರಳು ವಶಪಡಿಸಿಕೊಂಡಿದ್ದಾರೆ. ಶಿಂಷಾನದಿ ಪಾತ್ರದಲ್ಲಿ ಮರಳು ತೆಗೆಯುವುದನ್ನು ನಿಷೇಧಿಸಿ 2000ರಲ್ಲೇ ಸರ್ಕಾರ ಆದೇಶ ಹೊರಡಿಸಿದೆ. ಆದರೂ ಮರಳುದಂಧೆ ನಿಂತಿಲ್ಲ, ಇದರ ವಿರುದ್ಧ ಸಮರ ಸಾರಿರುವ ಡಾ.ಹೆಚ್.ಎಲ್.ನಾಗರಾಜು ಎರಡು ದಿನಗಳ ಹಿಂದಷ್ಟೇ 350 ಲೋಡ್ ಲಾರಿ ಮರಳು ವಶಪಡಿಸಿಕೊಂಡು ಮರಳು ದಂಧೆಕೋರರ ನಿದ್ದೆಗೆಡುವಂತೆ ಮಾಡಿದ್ದಾರೆ. ಇಂತಹ ಅಧಿಕಾರಿಗಳು ಎಲ್ಲೆಡೆ ಇದ್ದಾಗ ಮಾತ್ರ ಅಕ್ರಮ ಮರಳುಗಣಿಗಾರಿಕೆ ಸ್ವಲ್ಪವಾದರೂ ನಿಯಂತ್ರಣಕ್ಕೆ ಬರಲು ಸಾಧ್ಯ.





ಪಂಚಾಯತಿಗಳಲ್ಲಿ ಜೀತಪದ್ಧತಿ!

ಅಧಿಕಾರ ವಿಕೇಂದ್ರೀಕರಣ, ಗ್ರಾಮ ಸ್ವರಾಜ್ಯ ಮುಂತಾದ ಭಾರೀ ಘೋಷಣೆಗಳೊಂದಿಗೆ 1994ರಲ್ಲಿ ಪಂಚಾಯತ್ ರಾಜ್ ಕಾಯಿದೆ ಬಂದಿದ್ದು ನಮಗೆಲ್ಲಾ ಗೊತ್ತು. ಈ ಕಾಯಿದೆಯನುಸ್ಸಾರ ನಮ್ಮ ರಾಜ್ಯದಲ್ಲಿ ಒಟ್ಟು 5627 ಗ್ರಾಮ ಪಂಚಾಯತಿಗಳು ಕಾರ್ಯ ನಿರ್ವಹಿಸುತ್ತಿವೆ. ಗಾಂಧೀಜಿ ಗ್ರಾಮರಾಜ್ಯದ ಕನಸು-ನನಸು, ವಿಕೇಂದ್ರೀಕರಣ, ಸಬಲೀಕರಣ ಮುಂತಾದ ಆಡಂಬರದ ಮಾತುಗಳಲ್ಲಿ ಈ ಪಂಚಾಯತಿ ವ್ಯವಸ್ಥೆಯನ್ನು ಹಾಡಿ ಹೊಗಳಿ ಎಲ್ಲಾ ಸರ್ಕಾರಗಳೂ ಅಗ್ಗದ ಪ್ರಚಾರ ಪಡೆದುಕೊಂಡಿವೆ. ಆದರೆ ಎಲ್ಲಾ ಸರ್ಕಾರಗಳೂ ಇಷ್ಟು ದಿನ ಬಿಟ್ಟಿದ್ದೆಲ್ಲಾ ಕೇವಲ ಬೊಗಳೆ! ವಾಸ್ತವವೇನೆಂದರೆ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಅತ್ಯಂತ ಕಡೆಗಣಿಸಲ್ಪಟ್ಟಿರುವುದೇ ಗ್ರಾಮ ಪಂಚಾಯತಿಗಳು ಹಾಗೂ ಅಲ್ಲಿ ದುಡಿಯುತ್ತಿರುವ ನೌಕರರು ಮಾತ್ರ!

1994ರಲ್ಲಿ ಗ್ರಾಮ ಪಂಚಾಯತಿಗಳು ಚಾಲ್ತಿಗೆ ಬಂದಾಗಿನಿಂದಲೂ ಸುಮಾರು 50 ಸಾವಿರ ನೌಕರರು ದುಡಿಯುತ್ತಿದ್ದಾರೆ. ಅವರಲ್ಲಿ ಸುಮಾರು 12 ಸಾವಿರ ಬಿಲ್ ಕಲೆಕ್ಟರ್‌ಗಳು, 30 ಸಾವಿರದಷ್ಟಿರುವ ವಾಟರ್‌ಮ್ಯಾನ್‌ಗಳು, 4 ಸಾವಿರ ಕಂಪ್ಯೂಟರ್ ಆಪರೇಟರ್‌ಗಳು, 7-8 ಸಾವಿರ ಸ್ವೀಪರ್‌ಗಳು ಹಾಗೂ 5627 ಕಚೇರಿ ಸಹಾಯಕರು -ಹೀಗೆ ವಿವಿಧ ಹುದ್ದೆಗಳಿವೆ. ಸುಮಾರು 20 ವರ್ಷಗಳ ಕಾಲದಿಂದ ದುಡಿಯುತ್ತಿದ್ದರೂ ಇವರು ಇನ್ನೂ ದಿನಗೂಲಿ ನೌಕರರಾಗಿಯೇ ಉಳಿದಿದ್ದಾರೆ.

ಸರ್ಕಾರವೇ ನಿಗದಿಗೊಳಿಸಿರುವ ಕನಿಷ್ಟ ವೇತನವೂ ಸಿಗುತ್ತಿಲ್ಲ. ನೌಕರರಿಗೆ ಯಾವುದೇ ಉದ್ಯೋಗ ಭದ್ರತೆ ಇಲ್ಲ, ಇಎಸ್‌ಐ, ಪಿಎಫ್ ಇತ್ಯಾದಿ ಸೌಲಭ್ಯಗಳಿಲ್ಲ, ನಿವೃತ್ತಿ ಉಪಧನ ಎಂಬುದಂತೂ ಕನಸಿನ ಮಾತು. ಕೇವಲ ಒಂದು ಸಾವಿರಕ್ಕಿಂತಲೂ ಕಡಿಮೆ ಮಾಸಿಕ ವೇತನ ಪಡೆಯುತ್ತಿರುವ ಸಾವಿರಗಟ್ಟಲೆ ನೌಕರರು ಎರಡು ದಶಕಗಳ ಸೇವಾವಧಿ ಪೂರ್ಣಗೊಳಿಸಿದ್ದಾರೆ ಎಂದರೆ ಯಾರೂ ನಂಬಲಿಕ್ಕಿಲ್ಲ. ಸುಮಾರು 5000 ಪಂಚಾಯತಿಗಳಲ್ಲಿ ಕನಿಷ್ಟ ವೇತನ ಎಂಬ ಕಾನೂನಿಗೆ ಬೆಲೆಯೇ ಇಲ್ಲವಾಗಿದೆ.

ಇಷ್ಟೆಲ್ಲಾ ಸಾಲದು ಎಂಬಂತೆ ಸುಮಾರು ಅರ್ಧದಷ್ಟು ಪಂಚಾಯತಿಗಳಲ್ಲಿ ಕಳೆದ 10 ತಿಂಗಳಿನಿಂದ ಈ ಮೂರುಕಾಸಿನ ಸಂಬಳವೂ ಬಟವಾಡೆ ಆಗಿಲ್ಲ. ಆದರೆ ಸ್ಥಳೀಯ ರಾಜಕೀಯ ಪುಢಾರಿಗಳ ದಬ್ಬಾಳಿಕೆಯಂತೂ ದಿನನಿತ್ಯ ಪುಕ್ಕಟೆಯಾಗಿ ಸಿಗುತ್ತದೆ. ಪುಢಾರಿಗಳ ದಬ್ಬಾಳಿಕೆಯಿಂದಾಗಿ ನೌಕರರು ಆತ್ಮಹತ್ಯೆಗೆ ಶರಣಾದ ಉದಾಹರಣೆಗಳೂ ಇವೆ. ಒಟ್ಟಾರೆ ಪಂಚಾಯತಿ ನೌಕರರ ಪಾಡು ಜೀತದಾಳುಗಳಿಗಿಂತಲೂ ಕಡೆಯಾಗಿದೆ.

ಇಂಥಾ ಹಿನ್ನೆಲೆಯಲ್ಲಿ ಪಂಚಾಯತಿ ನೌಕರರು 'ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ'ದಡಿ ಒಗ್ಗೂಡಿದ್ದಾರೆ. ಕಳೆದ ಎರಡು ದಶಕಗಳಿಂದಲೂ ವಿವಿಧ ಸರ್ಕಾರಗಳ ಸಮ್ಮುಖದಲ್ಲಿ ತಮ್ಮ ಹಕ್ಕೊತ್ತಾಯಗಳನ್ನು ಮಂಡಿಸಿದ್ದಾರೆ. ಆದರೆ ಇದುವರೆಗೆ ಸಿಕ್ಕಿರುವುದು ಕೇವಲ ಆಶ್ವಾಸನೆ ಮಾತ್ರ.

ಈ ನೌಕರರ ವೇತನ ಕೊಡಬೇಕಾದದ್ದು ನೇರವಾಗಿ ಪಂಚಾಯತಿಗಳೇ ಆಗಿರುವುದರಿಂದ, ಒಂದೊಂದು ಪಂಚಾಯತಿಯಲ್ಲಿ ಒಂದೊಂದು ವಿಧದಲ್ಲಿ ತರಹೇವಾರಿ ಪದ್ಧತಿಗಳು ಜಾರಿಯಲ್ಲಿವೆ. ಇದ್ಯಾವುದಕ್ಕೂ ಒಂದು ನಿಖರವಾದ ಮಾರ್ಗದರ್ಶಿ ಸೂತ್ರವಿಲ್ಲ; ಇದ್ದರೂ ಅದನ್ನು ಪಾಲಿಸುವುದೂ ಬಿಡುವುದೂ ಆಯಾ ಗ್ರಾಮ ಪಂಚಾಯತಿಗಳ ಮರ್ಜಿಗೆ ಬಿಟ್ಟ ವಿಚಾರ ಎಂಬಂತಾಗಿದೆ.

ಹೀಗಾಗಿ ಹೆಚ್ಚಿನ ಆದಾಯವಿರುವ ಕಡೆಗಳಲ್ಲಿ ಹಾಗೂ ಬೆವರು ಸುರಿಸಿ ದುಡಿದ ನೌಕರರಿಗೆ ಅನ್ಯಾಯ ಮಾಡಬಾರದೆಂಬ ಕಾಳಜಿ ತೋರುವ ಕಡೆಗಳಲ್ಲಿ ಪರಿಸ್ಥಿತಿ ಪರವಾಗಿಲ್ಲ ಎನ್ನಬಹುದಾದರೂ, ಶೇ. 80 ಪಂಚಾಯತಿಗಳ ಸ್ಥಿತಿ ದಾರುಣವಾಗಿದೆ.

ಹಲವು ಹೋರಾಟಗಳ ನಂತರ 2011ರಲ್ಲಿ ಅಂದಿನ ಬಿಜೆಪಿ ಸರ್ಕಾರ ಪಂಚಾಯತ್ ನೌಕರರಿಗೆ ಕನಿಷ್ಟ ವೇತನ ಹಾಗೂ 1357 ರೂ. ತುಟ್ಟಿಭತ್ಯೆ ವೇತನ ಪಾವತಿಸುವಂತೆ ಆದೇಶಿಸಿದೆ. ಆದರೆ ಇದು ಕೇವಲ ಕಣ್ಣೊರೆಸುವ ತಂತ್ರ ಮಾತ್ರ. ವಾಸ್ತವದಲ್ಲಿ ತಾವೇ ಮಾಡಿದ್ದ ಆದೇಶವನ್ನು ತಾವೇ ಕಡೆಗಣಿಸಿ ನೌಕರರಿಗೆ ದ್ರೋಹ ಬಗೆದಿದೆ.

ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆಯವರ ಪ್ರಕಾರ "ಪಂಚಾಯತಿಯ ಎಲ್ಲ ನೌಕರರಿಗೆ ಕನಿಷ್ಟ ವೇತನ ತಿಂಗಳಿಗೆ 10 ಸಾವಿರ ರೂಪಾಯಿ ನೀಡಲೇಬೇಕು" ಎಂಬುದು. ಹೀಗಾದರೆ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುವುದಿಲ್ಲವೆ? ಎಂದು ಪ್ರಶ್ನಿಸಿದರೆ "ಎರಡು ತಾಸು ಪಾಠ ಮಾಡೋ ಯೂನಿವರ್ಸಿಟಿ ಮಾಸ್ತರ್‌ಗಳಿಗೆ ತಿಂಗಳಿಗೆ ಲಕ್ಷಗಟ್ಟಲೆ ಸಂಬಳ ಕೊಡೋವಾಗ, ಅದು ನಿಮಗೆ ಹೊರೆ ಅನಿಸೋದಿಲ್ಲ, ಬೆವರು ಸುರಿಸಿ ದುಡಿಯುವ ಶ್ರಮಜೀವಿಗೆ ತಿಂಗಳಿಗೆ 10 ಸಾವಿರ ಕೊಟ್ರೆ ಅದು ಹ್ಯಾಂಗ ಹೊರೆಯಾಗ್ತೈತಿ?" ಅವರು ಮರುಪ್ರಶ್ನೆ ಹಾಕುತ್ತಾರೆ. ಇಂಥಾ ಪ್ರಶ್ನೆಗೆ ಉತ್ತರಿಸುವ ಧೈರ್ಯ ಯಾವ ಪ್ರೊಫೆಸರ್‌ಗೂ ಇಲ್ಲ; ಯೋಜನಾ ಆಯೋಗಕ್ಕೂ ಇಲ್ಲ, ಅದೇ ಈ ವ್ಯವಸ್ಥೆಯ ವೈರುಧ್ಯ.

ಜೂನ್ 18ರಂದು ಬೆಂಗಳೂರಿನ ಸ್ವಾತಂತ್ರ ಉದ್ಯಾನದಲ್ಲಿ ಪ್ರತಿಭಟನೆಯಲ್ಲಿ ತೊಡಗಿದ್ದ ಸುಮಾರು 7-8 ಸಾವಿರ ಪಂಚಾಯತಿ ನೌಕರರ ಬಳಿಗೆ ಧಾವಿಸಿ ಬಂದ ಸಚಿವ ಎಚ್.ಕೆ.ಪಾಟೀಲ್ ನೌಕರರಿಗೆ ಆಶ್ವಾಸನೆ ನೀಡಿದ್ದಾರೆ. "ನನ್ನಿಂದ ಮೊದಲ್ಗೊಂಡು ಎಲ್ಲರೂ ತಪ್ಪು ಮಾಡಿಕೊಂಡೇ ಬಂದಿದ್ದೇವೆ. ಆದರಿಂದಲೇ ಇಂಥಾ ಸಮಸ್ಯೆ ಆಗಿದೆ, ಬೆವರು ಸುರಿಸಿ ದುಡಿಯೋರು, ಅನ್ನ ಕೊಡೋ ರೈತರು ಅತ್ಯಂತ ಸಂಕಷ್ಟದಲ್ಲಿದ್ದಾರೆ, ನಮ್ಮ ಗ್ರಾಮೀಣ ಜನರ ಬದುಕು ಹಸನಾಗಬೇಕು. ಇದು ಸಿದ್ದರಾಮಯ್ಯನವರ ನೇತೃತ್ವದ ನಮ್ಮ ಸರ್ಕಾರದ ನೀತಿ. ಹೀಗಾಗಿ ಇನ್ನು ಒಂದೆರಡು ವಾರದಲ್ಲೇ ನಿಮ್ಮ ಸಮಸ್ಯೆಯನ್ನು ಬಗೆಹರಿಸುತ್ತೇವೆ, ಅದು ನಮ್ಮ ನೈತಿಕ ಜವಾಬ್ದಾರಿ"

ಗ್ರಾಮ ಪಂಚಾಯತಿಗಳು ಚಾಲ್ತಿಗೆ ಬಂದಾಗಿನಿಂದಲೂ ಸುಮಾರು 50 ಸಾವಿರ ನೌಕರರು ದುಡಿಯುತ್ತಿದ್ದಾರೆ. ಅವರಲ್ಲಿ ಸುಮಾರು 12 ಸಾವಿರ ಬಿಲ್ ಕಲೆಕ್ಟರ್‌ಗಳು, 30 ಸಾವಿರದಷ್ಟಿರುವ ವಾಟರ್ ಮ್ಯಾನ್‌ಗಳು, 4 ಸಾವಿರ ಕಂಪ್ಯೂಟರ್ ಆಪರೇಟರ್‌ಗಳು, 7-8 ಸಾವಿರ ಸ್ವೀಪರ್‌ಗಳು ಹಾಗೂ 5627 ಕಚೇರಿ ಸಹಾಯಕರು -ಹೀಗೆ ವಿವಿಧ ಹುದ್ದೆಗಳಿವೆ. ಸುಮಾರು 20 ವರ್ಷಗಳ ಕಾಲದಿಂದ ದುಡಿಯುತ್ತಿದ್ದರೂ ಇವರು ಇನ್ನೂ ದಿನಗೂಲಿ ನೌಕರರಾಗಿಯೇ ಉಳಿದಿದ್ದಾರೆ.

ಎಂಬ ಭರವಸೆಯ ಮಾತಾಡಿದ್ದಾರೆ. ಈ ಭರವಸೆ ಹುಸಿಯಾಗದಿರಲಿ ಎಂದು ಹಾರೈಸೋಣ.

ಇಲ್ಲಿ ಮತ್ತೊಂದು ಪ್ರಮುಖವಾದ ವಿಷಯವನ್ನು ಪ್ರಸ್ತಾಪಿಸುವುದು ಔಚಿತ್ಯಪೂರ್ಣ.

ನಮ್ಮನ್ನಾಳುವ ಸರ್ಕಾರಗಳಿಗೆ ನಿಜಕ್ಕೂ ಅಧಿಕಾರ ವಿಕೇಂದ್ರೀಕರಣ ನೀತಿಯನ್ನು ಬಲಪಡಿಸುವ ಉದ್ದೇಶವಿದ್ದರೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಮಸ್ಯೆಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಅವುಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವತ್ತ ಗಮನಹರಿಸಬೇಕು. ಹೆಚ್ಚಿನ ಅನುದಾನ ಒದಗಿಸಬೇಕು. ಆಡಳಿತದಲ್ಲಿ ಇನ್ನಷ್ಟು ಪಾರದರ್ಶಕತೆ ತರಬೇಕು ಹಾಗೂ ಈ ಸಂಸ್ಥೆಗಳು ಪ್ರಜೆಗಳಿಗೆ ಉತ್ತರದಾಯಿಯಾಗಿರುವಂತೆ ಕಠಿಣ ಕಾನೂನು ರೂಪಿಸಬೇಕು. ಅದು ಈ ಸಂದರ್ಭದಲ್ಲಿ ಪಂಚಾಯತಿ ನೌಕರರಿಗೆ ಕನಿಷ್ಟ ವೇತನ ನೀಡುವ ಕನಿಷ್ಟ ಜವಾಬ್ದಾರಿಯನ್ನು ಈಡೇರಿಸುವ ಮೂಲಕ ಪ್ರಾರಂಭವಾಗಬೇಕು.

ಎಚ್.ಕೆ.ಪಾಟೀಲರು, ಸಿದ್ದರಾಮಯ್ಯನವರು ಇತ್ತಕಡೆ ತುರ್ತು ಗಮನ ಹರಿಸುವಂತಾಗಲಿ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಅನುದಾನ = ಕೆಇಬಿ ಬಡ್ಡಿ!?

ಪ್ರತಿವರ್ಷ ಶಾಸನಬದ್ಧ ಅನುದಾನದ ಹೆಸರಿನಲ್ಲಿ ಪ್ರತಿಯೊಂದು ಪಂಚಾಯತಿಗೆ ತಲಾ 8 ಲಕ್ಷ ರೂಪಾಯಿಗಳನ್ನು ನೀಡಲಾಗುತ್ತದೆ. ಒಂದು ಪಂಚಾಯತಿ ವ್ಯಾಪ್ತಿಯಲ್ಲಿ ಸರಾಸರಿ 10 ಗ್ರಾಮಗಳಿರುತ್ತವೆ ಎಂದುಕೊಂಡರೂ ವಾರ್ಷಿಕ ಅನುದಾನ ಒಂದು ಗ್ರಾಮಕ್ಕೆ ಕೇವಲ 80 ಸಾವಿರ ಮಾತ್ರ. ಈಗಿನ ಕಾಲದಲ್ಲಿ ಇಷ್ಟು ಹಣಕ್ಕೆ ಒಂದು ಗಟ್ಟಿಮುಟ್ಟಾದ ಶೋಚಾಲಯವನ್ನೂ ಕಟ್ಟಲು ಆಗುವುದಿಲ್ಲ. ಹೀಗಿರುವಾಗ ಇನ್ನು ಗ್ರಾಮಗಳನ್ನು ಉದ್ಧಾರ ಮಾಡುವ ಅಭಿವೃದ್ಧಿ ಯೋಜನೆಗಳ ಮಾತುಗಳನ್ನು ಯಾವ ರೀತಿ ಅರ್ಥಮಾಡಿಕೊಳ್ಳುತ್ತೀರೋ ಎಂಬುದು ನಿಮಗೇ ಬಿಟ್ಟಿದ್ದು.

ಅದೆಲ್ಲ ಹಾಗಿರಲಿ. ಪಂಚಾಯತಿಗಳಿಗೆ ಸರ್ಕಾರದಿಂದ ಬರುತ್ತಿರುವ 8 ಲಕ್ಷವಾದರೂ ಹೇಗೆ ವಿನಿಯೋಗವಾಗುತ್ತದೆ ಎಂಬುದು ಮತ್ತೊಂದು ಕುತೂಹಲಕಾರಿ ವಿಷಯ. ನೀವು ನಂಬಿದ್ರೆ ನಂಬಿ, ಬಿಟ್ರೆ ಬಿಡಿ. ವಾಸ್ತವದಲ್ಲಿ ಈ ಅನುದಾನದ ಬಹುಪಾಲು ಹಣ ಬಡ್ಡಿ ಕಟ್ಟಲಿಕ್ಕೆ ವಿನಿಯೋಗವಾಗುತ್ತಿದೆ. ಅನಾದಿ ಕಾಲದಿಂದಲೂ ಪಂಚಾಯತಿಗಳು ವಿದ್ಯುತ್ ಬಿಲ್ ಪಾವತಿ ಮಾಡದೆ ಕೆಇಬಿಗೆ ಒಟ್ಟು 2684 ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿವೆ. ಹೀಗಾಗಿ ಸರ್ಕಾರಿ ಅನುದಾನದ ಶೇಕಡ 60 ಭಾಗವನ್ನು ಕೆಇಬಿಗೆ ಪಾವತಿಸಲಾಗುತ್ತಿದೆ. ಸಂಘದ ಕಾರ್ಯದರ್ಶಿ ಎಂ.ಬಿ.ನಾಡಗೌಡರ ಪ್ರಕಾರ ಹೀಗೆ ಪಾವತಿ ಮಾಡುತ್ತಿರುವ ಹಣ ಕೇವಲ ಬಡ್ಡಿಗೂ ಸಾಲದಂತಾಗಿ, ದಿನೇದಿನೇ ಕೆಇಬಿ ಬಾಕಿ ಬೆಳೆಯುತ್ತಲೇ ಇದೆ. ಉಳಿದ 40 ಭಾಗದಲ್ಲಿ ಅಂದರೆ 3 ಲಕ್ಷದ 20 ಸಾವಿರ ರೂಪಾಯಿಗಳಲ್ಲಿ ಸಿಬ್ಬಂದಿಗೆ ಸಂಬಳವನ್ನೂ ಕೊಟ್ಟು ಅಭಿವೃದ್ಧಿಯನ್ನೂ ಮಾಡಬೇಕು ಎಂಬುದು ನಮ್ಮನ್ನು ಆಳುತ್ತಿರುವ ಸರ್ಕಾರಗಳ ನೀತಿ.

ಒಟ್ಟಾರೆ ರಾಜ್ಯದ ಎಲ್ಲಾ ಪಂಚಾಯತಿಗಳ ಅನುದಾನವನ್ನೆಲ್ಲಾ ಲೆಕ್ಕ ಹಿಡಿದರೂ ಅದು 450 ಕೋಟಿಗಳನ್ನು ಮೀರುವುದಿಲ್ಲ, ಅಂದಹಾಗೆ ಒಂದು ಲಕ್ಷ ಕೋಟಿ ಬಜೆಟ್ ಮಂಡಿಸಿ ಮಾಧ್ಯಮಗಳಿಂದ ಚಪ್ಪಾಳೆ ಗಿಟ್ಟಿಸಿದ ಬಿಜೆಪಿ ಸರ್ಕಾರವನ್ನೂ ಒಳಗೊಂಡಂತೆ ಎಲ್ಲರೂ ಗ್ರಾಮ ಪಂಚಾಯತಿಗಳತ್ತ ಮಲತಾಯಿ ಧೋರಣೆ ತಾಳಿದ್ದಾರೆ. ಅದೇ ಸಂದರ್ಭದಲ್ಲಿ ಮಠಮಾನ್ಯಗಳಿಗೆ ನೂರಾರು ಕೋಟಿಗಳನ್ನು ಸುರಿಸಿದ್ದೂ ಕೂಡ ಈಗ ಇತಿಹಾಸ.

ಈ ಹಿನ್ನೆಲೆಯಲ್ಲಿ ಪಂಚಾಯತಿ ನೌಕರರ ಸಂಘದ ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆಯವರು ಪ್ರತಿಯೊಂದು ಪಂಚಾಯತಿಗೆ ವಾರ್ಷಿಕ ಒಂದು ಕೋಟಿ ಅನುದಾನ ಒದಗಿಸಬೇಕೆಂದು ಒತ್ತಾಯಿಸಿದ್ದಾರೆ. ಸರ್ಕಾರ ನಿಜಕ್ಕೂ ಅಂಥಾ ತೀರ್ಮಾನ ಮಾಡಿದರೆ ಬೊಕ್ಕಸದಿಂದ ವಾರ್ಷಿಕ 5627 ಕೋಟಿಗಳನ್ನು ವೆಚ್ಚ ಮಾಡಬೇಕಾಗುತ್ತದೆ. ಇಚ್ಛಾಶಕ್ತಿಯಿರುವ ಸರ್ಕಾರಕ್ಕೆ ಅದೇನೂ ಭಾರವಾದ ಸಂಗತಿಯಲ್ಲ; ಸಾವಿರಾರು ಕೋಟಿ ಆದಾಯದಲ್ಲಿರುವ ಬಿಟಿ/ಬಿಟಿ ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡಲಾಗುತ್ತಿರುವ ಸಾವಿರಾರು ಕೋಟಿಗಳ ತೆರಿಗೆ ವಿನಾಯ್ತಿಯನ್ನು ರದ್ದುಪಡಿಸಿ, ನಿಯತ್ತಾಗಿ ತೆರಿಗೆ ವಸೂಲಿ ಮಾಡಿದರೆ ಯಾವ ಅಭಿವೃದ್ಧಿಗೂ ಕೈಚಾಚಬೇಕಾದ ದುಸ್ಥಿತಿಯಿರುವುದಿಲ್ಲ. ಸಿಎಂ ಸಿದ್ದರಾಮಯ್ಯನವರಾದರೂ ಈ ದಿಕ್ಕಿನಲ್ಲಿ ಹೆಜ್ಜೆ ಇಡುವರೇ ಎಂಬುದನ್ನು ಕಾದು ನೋಡಬೇಕು.

ನಿಖಿಲ್ ಶೆಟ್ಟಿ ಗಾಳಕ್ಕೆ ಬಿದ್ದ ದುಬೈ ಪಾತಕಿ



ದುಬೈನಲ್ಲೋ, ಬ್ಯಾಂಕಾಕ್‌ನಲ್ಲೋ ಕೂತು ಬೆಂಗಳೂರಿನ ರೊಕ್ಕಸ್ಥರಿಂದ ಕೋಟಿ ಕೋಟಿ ಸುಲಿಯ ಹೊರಟ ಹೈಟೆಕ್ ಹಂತಕರಿಗಿದು ಪೊಲೀಸರ ಎಚ್ಚರಿಕೆ!

ಖತರ್‌ನಾಕ್ ಕ್ರಿಮಿನಲ್ ನಿಖಿಲ್ ಶೆಟ್ಟಿ ಕೊನೆಗೂ ಬೋನಿಗೆ ಬಿದ್ದಿದ್ದಾನೆ. ಮಂಗಳೂರಿನ ಚಾಲಾಕಿ ಕಿಲ್ಲರ್ ರೋಹಿ ಅಲಿಯಾಸ್ ವಾಮಂಜೂರು ರೋಹಿದಾಸ್‌ನನ್ನು ಸದ್ದಿಲ್ಲದೆ ಮುಗಿಸಿದವನು, ಬೆಂಗಳೂರಿನ ಚಿಮ್ಮನೂರು ಜ್ಯುವೆಲ್ಲರ್ಸ್ ಮಳಿಗೆಯನ್ನು ಥೇಟು ಹಾಲಿವುಡ್ ಸಿನಿಮಾ ಶೈಲಿಯಲ್ಲಿ ದೋಚಿದವನು, ಮುಂಬಯಿಯ ಬಿಲ್ಡರ್ ಸುಧಾಕರ್ ಶೆಟ್ಟಿಯ ಫ್ಲಾಟಿಗೆ ಹಂತಕರನ್ನು ನುಗ್ಗಿಸಿ ಆತನ ಇಬ್ಬರು ನೌಕರರನ್ನು ಕೊಲ್ಲಿಸಿದವನು, ನೇಪಾಳದಿಂದ ಹಿಡಿದು ಹೈದರಾಬಾದ್, ಬೆಂಗಳೂರು, ಮಂಗಳೂರನ್ನೂ ಬಿಡದೆ ಅನೇಕಾನೇಕ ಬಿಲ್ಡರುಗಳು, ಶ್ರೀಮಂತರ ಎದೆಗೆ ರಿವಾಲ್ವರ್ ಇಟ್ಟು ಕೋಟಿ ಕೋಟಿ ಸುಲಿದವನು-

ಇಂಥಾ ನಿಖಿಲ್ ಶೆಟ್ಟಿಯನ್ನು ದುಬೈನಿಂದ ಬಲೆ ಬೀಸಿ ಎಳೆತಂದ ಕರ್ನಾಟಕ ಪೊಲೀಸರ ಕೈ ಈಗ ಸಾಕಷ್ಟು ಉದ್ದ ಮತ್ತು ಅಗಾಧ. ನಾಳೆ ಹೆಬ್ಬೆಟ್ಟು ಮಂಜನಂಥವರನ್ನು ಬ್ಯಾಂಕಾಕ್‌ನಿಂದ ಹೊತ್ತು ತರಬಲ್ಲ ತಾಕತ್ತು ಕರ್ನಾಟಕ ಪೊಲೀಸರಿಗಿದ್ದೇ ಇದೆ ಎಂಬುದಕ್ಕೂ ಇದು ರಿಹರ್ಸಲ್ಲಿದ್ದಂತೆ.

ಈಗ ದುಬೈನಿಂದ ಗಡಿಪಾರಾಗಿ ದೆಹಲಿಯ ಇಂದಿರಾಗಾಂಧಿ ಇಂಟರ್‌ನ್ಯಾಷನಲ್ ಏರ್‌ಪೋರ್ಟಿನಲ್ಲಿಳಿಯುತ್ತಿದ್ದಂತೆಯೇ ಮಂಗಳೂರು ಸಿಸಿಬಿ ಪೊಲೀಸರ ತೆಕ್ಕೆಗೆ ಬಿದ್ದ ನಿಖಿಲ್‌ಶೆಟ್ಟಿ ಅಲಿಯಾಸ್ ಪ್ರಕಾಶ್ ಶೆಟ್ಟಿ ಅರ್ಥಾತ್ ನಿಶಿತ್ ಶೆಟ್ಟಿ ಇಂಟರ್‌ನ್ಯಾಷನಲ್ ಕ್ರಿಮಿನಲ್‌ಗಳಾದ ರವಿ ಪೂಜಾರಿ ಮತ್ತು ಹೇಮಂತ್ ಪೂಜಾರಿ ಇಬ್ಬರಿಗೂ ಪರಮಾಪ್ತ. ಹೆಚ್ಚೂ ಕಮ್ಮಿ ಐದು ವರ್ಷದಿಂದ ದುಬೈನಲ್ಲಿ ಅವಿತು ಕೂತಿದ್ದ. ಹಾಗೆ ದುಬೈನಲ್ಲಿದ್ದುಕೊಂಡೇ ಭಾರತದ ಪ್ರಮುಖ ನಗರಗಳ ಕೋಟ್ಯಾಧಿಪತಿಗಳಿಗೆ ನಡುಕ ಹುಟ್ಟಿಸಿದ್ದ. ಕೊಲೆ, ಕೊಲೆ ಯತ್ನ, ಕಿಡ್ನಾಪ್, ಬ್ಲ್ಯಾಕ್‌ಮೇಲ್ ಸುಲಿಗೆ, ಶಸ್ತ್ರಾಸ್ತ್ರ ಸರಬರಾಜು ಇತ್ಯಾದಿ ಬರೋಬ್ಬರಿ ಒಂದು ಡಜನ್ ಕ್ರಿಮಿನಲ್ ಕೇಸುಗಳು ಆತನ ವಿರುದ್ಧ ದಾಖಲಾಗಿದ್ದವು.

ಇದೆಲ್ಲದರ ಹೊರತಾಗಿಯೂ ಹೇಳಬೇಕೆಂದರೆ ಹೆಬ್ಬೆಟ್ಟು ಮಂಜ ಹೇಗೆ ಬೆಂಗಳೂರಿನ ಪಾಸ್‌ಪೋರ್ಟ್ ಕಚೇರಿಯಿಂದ ನಕಲಿ ಪಾಸ್‌ಪೋರ್ಟ್ ಗಿಟ್ಟಿಸಿ ದುಬೈಗೆ ಹಾರಿದ್ದನೋ ಹಾಗೆ ನಿಖಿಲ್ ಶೆಟ್ಟಿ ಕೂಡ ಅದೇ ತಂತ್ರ ಬಳಸಿ ದುಬೈ ಸೇರಿಕೊಂಡಿದ್ದ.

ಆದರೆ ತಲೆಗಾರಿಕೆ ಮತ್ತು ಕಾರ್ಯವ್ಯಾಪ್ತಿಯ ದೃಷ್ಟಿಯಿಂದ ಲೆಕ್ಕ ಹಾಕಿದರೆ ಬಿಲ್ಡರ್ ಸುಬ್ಬರಾಜು ಹಂತಕ ಯೂಸುಫ್ ಬಚಖಾನ, ಮುಂಬಯಿ ಸುಪಾರಿ ಕಿಲ್ಲರ್ ಫ್ರಾನ್ಸಿಸ್ ಕುಟಿನೋ ಮುಂತಾದ ಮುಂಬಯಿ ರಿಟರ್ನ್ಡ್ ಕ್ರಿಮಿನಲ್‌ಗಳಿಗೆ ಹೋಲಿಸಿದರೆ ನಿಖಿಲ್‌ಶೆಟ್ಟಿ ಅತ್ಯಂತ ಅಪಾಯಕಾರಿ ಮತ್ತು ನಿಷ್ಣಾತ ತಂತ್ರಗಾರ.

ಮೂಲತಃ ಮಂಗಳೂರು ನಗರದ ಎಕ್ಕೂರಿನವನಾದ ನಿಖಿಲ್ ಶೆಟ್ಟಿಯ ತಂದೆ ವೃತ್ತಿಯಲ್ಲಿ ಇಂಜಿನಿಯರ್. ಆ ಕಾಲಕ್ಕೇ ಉದ್ಯೋಗ ಅರಸಿ ಮುಂಬಯಿ ಸೇರಿಕೊಂಡ ಆತನ ತಂದೆಯ ಆಸ್ತಿ ಮತ್ತು ಸಂಪಾದನೆ ಪ್ರಕಾರವೇ ನೋಡುವುದಾದರೆ ಭೂಗತ ಲೋಕಕ್ಕೆ ಕಾಲಿಡಬೇಕಾದ ದಾರಿದ್ರ್ಯವಾಗಲಿ, ಅನಿವಾರ್ಯತೆಯಾಗಲಿ ಆತನಿಗಿರಲಿಲ್ಲ, ಶ್ರೀಮಂತಿಕೆಯಿತ್ತು, ಎಲೆಕ್ಟ್ರಾನಿಕ್ಸ್ ಪದವಿಯನ್ನೂ ಗಳಿಸಿದ್ದ. ಆದರೆ ಸಹವಾಸ ದೋಷ ಮತ್ತು ವಯೋಸಹಜ ಮಸ್ತಿಗೆ ಬಿದ್ದು ಸಂತೋಷ್ ಶೆಟ್ಟಿ, ಕೃತಿಕ್ ಶೆಟ್ಟಿ, ವಿಜಯ್ ಶೆಟ್ಟಿ, ಮೋಹನ್ ಕೋಟ್ಯಾನ್ ಇತ್ಯಾದಿ ಮುಂಬಯಿ ಸುಲಿಗೆಕೋರರ ಒಡನಾಟಕ್ಕೆ ಬಿದ್ದ.

ಅದು ದಾವೂದ್ ಮತ್ತು ಛೋಟಾ ರಾಜನ್ ಪಡೆಗಳ ನಡುವೆ ಗ್ಯಾಂಗ್‌ವಾರ್ ಭುಗಿಲೆದ್ದ ಕಾಲ. ಬ್ಯಾಂಕಾಕ್‌ನಲ್ಲಿ ಛೋಟಾ ರಾಜನ್ ತಂಗಿದ್ದ ಅಪಾರ್ಟ್‌ಮೆಂಟಿಗೇ ದಾವೂದ್ ಹಂತಕರನ್ನು ನುಗ್ಗಿಸಿದ್ದ. ಗುಂಡೇಟು ತಿಂದೂ ಬಚಾವಾದ ಛೋಟಾ ರಾಜನ್ ತನ್ನ ದುಷ್ಮನ್ ದಾವೂದ್‌ನ ಮುಂಬಯಿ ಲಿಂಕುಗಳನ್ನೆಲ್ಲ ಕತ್ತರಿಸಿ ಹಾಕುತ್ತೇನೆಂದು ಕಂಡಕಂಡ ಬಿಲ್ಡರುಗಳು, ಸಿನಿಮಾ ಫೈನಾನ್ಸರುಗಳು, ಹವಾಲಾ ಏಜೆಂಟರು ಮತ್ತು ಕ್ರಿಕೆಟ್ ಬುಕ್ಕಿಗಳಿಗೆಲ್ಲ ಧಮಕಿಯಿಟ್ಟ. ಈ ನಿಟ್ಟಿನಲ್ಲಿ ರಾಜನ್‌ನ ನೆರಳಂತೆ ತಲೆ ಎತ್ತಿದ ರವಿಪೂಜಾರಿ ಮತ್ತು ಹೇಮಂತ್ ಪೂಜಾರಿ ಕೇವಲ ಮುಂಬಯಿಯಷ್ಟೇ ಅಲ್ಲ, ಬೆಂಗಳೂರು, ಹೈದ್ರಾಬಾದ್, ಚೆನ್ನೈ, ಮಂಗಳೂರು ಇತ್ಯಾದಿ ದಕ್ಷಿಣ ಭಾರತದ ಇನ್ನೂ ಮುಂಬಯಿ ಅಂಡರ್‌ವರ್ಲ್ಡ್ ತನ್ನ ಕೈಯನ್ನೇ ಚಾಚದಿದ್ದ 'ಎಕ್ಸ್‌ಟಾರ್ಶನ್ ಗಣಿ'ಗಳ ಮೇಲೆ ಕಣ್ಣಿಟ್ಟರು.

ಏಕೆಂದರೆ ದೆಹಲಿ, ಕೊಲ್ಕತ್ತ, ಲಕ್ನೋ, ಅಹ್ಮದಾಬಾದ್ ಇತ್ಯಾದಿ ಉತ್ತರ ಭಾರತದ ನಗರಗಳಲ್ಲಿ ಲೋಕಲ್ ಡಾನ್‌ಗಳಷ್ಟೇ ಅಲ್ಲದೆ ಮುಸ್ಲಿಂ ಅಂಡರ್‌ವರ್ಲ್ಡ್ ಕೂಡ ಹಿಡಿತ ಸಾಧಿಸಿಯಾಗಿತ್ತು. ಇದೊಂಥರ ಹೊಸ ಗಣಿಗಳನ್ನು ಸೃಷ್ಟಿಸಿಕೊಂಡಂತೆ!

'ತಾನು ಕೂಡ ದಾವೂದ್ ವಿರೋಧಿ, ಪಕ್ಕಾ ದೇಶಪ್ರೇಮಿ, ಹಿಂದೂ ಪರ, ಯಾರ್‍ಯಾರು ಡಿ ಕಂಪೆನಿಗೆ ಹಪ್ತಾ ಕೊಡುತ್ತಾರೋ ಅಂಥವರನ್ನೆಲ್ಲ ಮುಗಿಸುವುದೇ ನನ್ನ ಗುರಿ' ಎಂದು ಪಕ್ಕಾ ಛೋಟಾ ರಾಜನ್ ಟೈಪಿನಲ್ಲೇ ಮಾತಾಡತೊಡಗಿದ ರವಿಪೂಜಾರಿಯ ಸಿಂಡಿಕೇಟಿಗೆ ಬೆಂಗಳೂರು, ಮಂಗಳೂರು, ಮುಂಬಯಿಯ ಛೋಟಾ ಮೋಟಾ ಪಾತಕಿಗಳೆಲ್ಲ ಸೇರ್ಪಡೆಗೊಳ್ಳತೊಡಗಿದರು. ಅಶೋಕ್ ದೇವಾಡಿಗ, ಹಳೆಯಂಗಡಿಯ ಭಾಸ್ಕರ್ ಅಲಿಯಾಸ್ ಬಚ್ಚು, ಎಕ್ಕಾರಿನ ಆನಂದ್ ಶೆಟ್ಟಿ, ಸಂತೋಷ್ ಶೆಟ್ಟಿ, ವಿಜಯ್ ಶೆಟ್ಟಿ, ಕೃತಿಕ್ ಶೆಟ್ಟಿ- ಹೀಗೆ ರವಿ ಪೂಜಾರಿಯ ಗ್ಯಾಂಗಿನ ಕಟ್ಟಾಳುಗಳಂತೆ ತಲೆ ಎತ್ತಿದ ಮಂಗಳೂರು ಮೂಲದ ಪಾತಕಿಗಳ ಪೈಕಿ ಅತ್ಯಂತ ಚಾಲಾಕಿ ಮತ್ತು ಮಹತ್ವಾಕಾಂಕ್ಷೆಯ ಆಸಾಮಿಯೇ ನಿಖಿಲ್ ಶೆಟ್ಟಿ.

ಶುರುವಿನಲ್ಲಿ ರವಿ ಪೂಜಾರಿ ಪರವಾಗಿ ದೀಪಾ ಹೋಟೆಲ್ ಸುಲಿಗೆ, ಯು ಟಿವಿಯ ಮುಂಬೈ ಕಚೇರಿಯ ಮೇಲೆ ದಾಳಿಯಲ್ಲಿ ನಿಖಿಲ್ ಸಕ್ರಿಯವಾಗೇ ಭಾಗವಹಿಸಿದ್ದ. ಮುಂಬಯಿಯ ಕ್ರೈಂ ಬ್ರಾಂಚ್ ಪೊಲೀಸರ ಕಣ್ಣು ತನ್ನ ಮೇಲೆ ಬಿದ್ದಿದ್ದು ಗೊತ್ತಾಗಿದ್ದೇ ಹುಷಾರಾಗಿ ಮಂಗಳೂರು ಸೇರಿಕೊಂಡ. ಆತನಿಗೆ ಸ್ಥಳೀಯವಾಗಿ ಆಶ್ರಯ ಕೊಟ್ಟವನು ಮಂಗಳೂರು ಮೂಲದ ಮತ್ತೊಬ್ಬ ದುಬೈ ಪಾತಕಿ ಬನ್ನಂಜೆ ರಾಜ. ಏಕೆಂದರೆ ತನ್ನ ಹುಟ್ಟಾ ದುಷ್ಮನ್ ವಾಮಂಜೂರು ರೋಹಿಯನ್ನು ಮುಗಿಸಲು ಬನ್ನಂಜೆ ರಾಜನಿಗೆ ಬೇಕಿದ್ದದ್ದು ನಿಖಿಲ್ ಶೆಟ್ಟಿಯಂಥ ನಿಷ್ಣಾತ ಪ್ಲಾನರ್!

ಆದರೆ ರೋಹಿಯನ್ನು ಮುಗಿಸುವುದಕ್ಕೂ ಮುನ್ನ ನಿಖಿಲ್ ಶೆಟ್ಟಿ ಅನಾಹುತಕಾರಿ ಡಕಾಯಿತಿಯೊಂದಕ್ಕೆ ಕೈಯಿಟ್ಟು ಬೆಂಗಳೂರು ಪೊಲೀಸರನ್ನು ಮೇಲೆಳೆದುಕೊಂಡಿದ್ದ. ಅದು 2007ರಲ್ಲಿ ಇಂದಿರಾನಗರದ ಸಿಎಂಹೆಚ್ ರಸ್ತೆಯ ಚಿಮ್ಮನೂರು ಜ್ಯೂವೆಲ್ಲರ್ಸ್ ರಾಬರಿ. ಬೆಂಗಳೂರಿನ ಒಂದಿಬ್ಬರು ಘಾತಕಿಗಳಲ್ಲದೆ ಮಂಗಳೂರು ಮೂಲದ ನಾಲ್ವರು ಪುಡಿ ರೌಡಿಗಳನ್ನು ಜೊತೆ ಮಾಡಿದ ನಿಖಿಲ್ ಶೆಟ್ಟಿ ಬರೋಬ್ಬರಿ 24 ಕೆಜಿ ಚಿನ್ನಾಭರಣಗಳನ್ನು ದೋಚಿಬಿಟ್ಟ. ಇದೇ ಬೆಂಗಳೂರಿನ ಪೊಲೀಸರೆಲ್ಲ ಬೆಸ್ತು ಬೀಳುವಂತೆ ಮಾಡಿದ ಈ ಡಕಾಯಿತಿಯಲ್ಲಿ ನಿಖಿಲ್ ಶೆಟ್ಟಿಯ ಪಾಲೆಂದು ಬಂದಿದ್ದು ಆರು ಕೆಜಿಗಳಷ್ಟು ಚಿನ್ನಾಭರಣ!

ಹೀಗೆ ಕರ್ನಾಟಕ ಪೊಲೀಸರನ್ನು ಮೇಲೆಳೆದುಕೊಂಡ ನಿಖಿಲ್ ಮುಂಬಯಿ, ಹೈದ್ರಾಬಾದ್, ಬೆಂಗಳೂರುಗಳಲ್ಲಿ ತಲೆ ಮರೆಸಿಕೊಂಡಿರುತ್ತಲೇ ವಾಮಂಜೂರು ರೋಹಿ ಹತ್ಯೆಗೆ ರಿವಾಲ್ವರುಗಳನ್ನು ಒದಗಿಸಿಕೊಟ್ಟ. ರೋಹಿಯ ಹತ್ಯೆಯಂತೂ ಭಯಾನಕವಾಗೇ ನಡೆದಿತ್ತು, ಆ ಮೂಲಕ ಬನ್ನಂಜೆ ರಾಜನಿಗೆ ಮಂಗಳೂರು ಅಂಡರ್‌ವರ್ಲ್ಡ್ ಮೇಲೆ ಗಣನೀಯ ಹಿಡಿತವೂ ಸಿಕ್ಕಂತಾಯ್ತು, ಹಾಗಂತ ನಿಖಿಲ್ ಕೇವಲ ಬನ್ನಂಜೆ ರಾಜನನ್ನಾಗಲಿ, ರವಿ ಪೂಜಾರಿಯನ್ನಾಗಲಿ ನೆಚ್ಚಿ ಕೂತವನಲ್ಲ, ತನ್ನದೇ ಪ್ರತ್ಯೇಕ ನೆಟ್‌ವರ್ಕ್ ಒಂದನ್ನು ಕಟ್ಟಿಕೊಳ್ಳಲು ಯತ್ನಿಸುತ್ತಲೇ ಮಂಗಳೂರಿನ ಬಲಾಢ್ಯ ವ್ಯಾಪಾರಿ ಮತ್ತು ಸೌಝಾ ಎಲೆಕ್ಟ್ರಾನಿಕ್ಸ್ ಧಣಿ ರಿಚರ್ಡ್ ಪಿಂಟೋನಿಗೆ ಫೋನಾಯಿಸಿದ್ದೇ ಒಂದು ಕೋಟಿಯ ಪ್ರೊಟೆಕ್ಷನ್ ಮನಿ ಕೊಡುವಂತೆ ಧಮಕಿಯಿಟ್ಟ.


ರಿಚರ್ಡ್ ಪಿಂಟೋ ಬಡಪೆಟ್ಟಿಗೆ ಬಗ್ಗುವವನಲ್ಲ, ಆದರೆ ನಿಖಿಲ್ ಶೆಟ್ಟಿ ಬಿಡಬೇಕಲ್ಲ, ನಾಲ್ವರು ಹುಡುಗರನ್ನು ಸೆಟ್ ಮಾಡಿದ್ದೇ ಸೌಝಾ ಎಲೆಕ್ಟ್ರಾನಿಕ್ಸ್‌ಗೆ ನುಗ್ಗಿಸಿ ಪಿಂಟೋ ಮೇಲೆ ಗುಂಡು ಹಾರಿಸಿದ್ದ. ಇತ್ತ ಬೆಂಗಳೂರು ಸಿಸಿಬಿ, ಅತ್ತ ಮಂಗಳೂರು ಪೊಲೀಸರು ತನ್ನ ಬೆನ್ನಿಗೆ ಬಿದ್ದಿದ್ದು ಗೊತ್ತಾಗಿದ್ದೇ ಉಪಾಯವಾಗಿ ನಕಲಿ ಪಾಸ್‌ಪೋರ್ಟ್ ಒಂದನ್ನು ಹೊಂಚಿಕೊಂಡ. ಅದಕ್ಕೆಂದು ತನ್ನ ಹೆಸರನ್ನು ನಿಶಿತ್ ಪ್ರಕಾಶ್ ಅರಸ್ ಎಂದು ಬದಲಿಸಿಕೊಂಡ. ಇದೇ ಹೆಸರಲ್ಲಿ ಪುತ್ತೂರಿನ ವಿಳಾಸ ಕೊಟ್ಟು ನಕಲಿ ಮಾರ್ಕ್ಸ್‌ಕಾರ್ಡ್, ಬರ್ತ್ ಸರ್ಟಿಫಿಕೇಟ್, ರೇಷನ್ ಕಾರ್ಡ್ ಎಲ್ಲವನ್ನೂ ಸೃಷ್ಟಿಸಿಕೊಂಡಿದ್ದ. ಅನೇಕ ಖತರ್‌ನಾಕ್ ಕ್ರಿಮಿನಲ್‌ಗಳು ಹೇಗೆ ಬೆಂಗಳೂರು ಪಾಸ್‌ಪೋರ್ಟ್ ಕಚೇರಿಯ ಭ್ರಷ್ಟಾಚಾರವನ್ನು ಬಳಸಿಕೊಂಡು ನಕಲಿ ಪಾಸ್‌ಪೋರ್ಟ್ ಮೂಲಕ ದುಬೈ, ಬ್ಯಾಂಕಾಕ್ ಸೇರಿಕೊಳ್ಳುತ್ತಿದ್ದರೋ ಹಾಗೇ ನಿಖಿಲ್‌ಶೆಟ್ಟಿ ಕೂಡ ಬೆಂಗಳೂರು ಪಾಸ್‌ಪೋರ್ಟ್ ಖದೀಮರಿಗೆ ಲಂಚಕೊಟ್ಟೇ ನಕಲಿ ಪಾಸ್‌ಪೋರ್ಟ್ ಗಿಟ್ಟಿಸಿಕೊಂಡಿದ್ದ. ಅದನ್ನು ಬಳಸಿದ್ದು ಮಾತ್ರ ನೇಪಾಳದಲ್ಲಿ.

2010ರ ವೇಳೆಗೆ ಸದ್ದಿಲ್ಲದೆ ದುಬೈ ಸೇರಿಕೊಂಡವನು ಮುಂಬಯಿಯ ಬಿಲ್ಡರ್ ಸುಧಾಕರ್ ಶೆಟ್ಟಿಗೆ ಫೋನಿನಲ್ಲೇ 2 ಕೋಟಿ ಕೊಡುವಂತೆ ಧಮಕಿ ಹಾಕಿದ್ದ. ತನ್ನನ್ನು ಕೇರ್ ಮಾಡಲಿಲ್ಲ ಎಂಬ ಒಂದೇ ಕಾರಣಕ್ಕೆ ಕಾಂಟ್ರಾಕ್ಟ್ ಕಿಲ್ಲರ್ ದೇವಾಡಿಗನನ್ನು ಛೂಬಿಟ್ಟಿದ್ದೇ ಸುಧಾಕರ್ ಶೆಟ್ಟಿಯ ನಿರ್ಮಾಣಾವಸ್ಥೆಯಲ್ಲಿದ್ದ ಕಟ್ಟಡದ ಇಬ್ಬರು ನೌಕರರ ಮೇಲೆ ಫೈರ್ ಮಾಡಿಸಿಬಿಟ್ಟ. ಅನ್ಯಾಯವಾಗಿ ಗುಂಡೇಟು ತಿಂದು ಸತ್ತ ಸೈಟ್ ಇಂಜಿನಿಯರ್ ಸಾಮ್ರಾಟ್ ದೇವಾಸಿಯಾಗೆ 28 ವರ್ಷ ಹರೆಯವಾದರೆ ಸೈಟ್ ಸೂಪರ್‌ವೈಸರ್ ಯೋಗೇಶ್ ಖುಲೆಗಿನ್ನೂ 29 ವರ್ಷವಾಗಿತ್ತು.


ಬಿಲ್ಡರ್ ಸುಧಾಕರ್ ಶೆಟ್ಟಿಯಿಂದ ಹಪ್ತಾ ಬಂತೋ ಇಲ್ಲವೋ; ಕಿಲ್ಲರ್ ದೇವಾಡಿಗ ಮಾತ್ರ ಅಷ್ಟೇ ನಿಗೂಢವಾಗಿ ದುಬೈ ಸೇರಿಕೊಂಡಿದ್ದ. ಅಲ್ಲಿಗೆ ಮುಂಬೈ ಪೊಲೀಸರು ನಿಖಿಲ್ ಶೆಟ್ಟಿ ಮತ್ತು ದೇವಾಡಿಗನ ವಿರುದ್ಧ



ರವಿ ಪೂಜಾರಿ



ಬನ್ನಂಜೆ ರಾಜ



ವಾಮಂಜೂರು ರೋಹಿ


ಮುಂದಿನ ಸರದಿ ಹೆಬ್ಬೆಟ್ಟು ಮಂಜ?

ಇಂಟರ್‌ಪೋಲ್ ಹೊರಡಿಸುವ ರೆಡ್‌ಕಾರ್ನರ್ ನೋಟಿಸ್ ಬಗ್ಗೆ ಯಾರೆಲ್ಲ ಪಾತಕಿಗಳು ಉಡಾಫೆಯಿಂದಿದ್ದರೋ ಅವರೆಲ್ಲರಿಗೂ ನಿಖಿಲ್‌ಶೆಟ್ಟಿ ಬಂಧಿತನಾಗಿದ್ದು ಪಾಠದಂತಿದೆ. ನಿಖಿಲ್‌ನನ್ನು ದುಬೈ ಪೊಲೀಸರು ಬಂಧಿಸುವ ಎರಡು ತಿಂಗಳ ಹಿಂದಷ್ಟೇ ಆತನ ಪರಮಾಪ್ತ ದೇವಾಡಿಗನನ್ನು ಅದೇ ದುಬೈ ಪೊಲೀಸರು ಹಿಡಿದು ಇಂಟರ್‌ಪೋಲ್ ಪೊಲೀಸರಿಗೊಪ್ಪಿಸಿದ್ದರು. ಬಹುಶಃ ದೇವಾಡಿಗನೇ ನಿಖಿಲ್ ಬಗ್ಗೆ ಮಾಹಿತಿ ಕೊಟ್ಟಿರಬೇಕು.

ಆದರೆ ಇಂಟರ್‌ಪೋಲ್ ಕಣ್ಣಿಗೇ ಮಣ್ಣೆರಚಿ ಇವತ್ತಿಗೂ ಭಾರತದಲ್ಲಿ ಪಾತಕವೆಸಗುತ್ತಿರುವ ಮಂಗಳೂರು ಮೂಲದ ಕ್ರಿಮಿನಲ್‌ಗಳದ್ದೇ ದೊಡ್ಡ ಪಟ್ಟಿಯಿದೆ. ಮಲ್ಪೆ ಬಳಿಯ ಕಲ್ಮಾಡಿಯವನಾದ ರವಿಪೂಜಾರಿ ಸದ್ಯ ಆಸ್ಟ್ರೇಲಿಯಾದಲ್ಲಿದ್ದಾನೆಂಬ ಮಾಹಿತಿಯಿದೆ. ಈತನ ಪರಮಾಪ್ತ ಹೇಮಂತ ಪೂಜಾರಿ ಮೂಲತಃ ಪಡುಬಿದ್ರಿಯವನು. ಈತ ಸದ್ಯ ದುಬೈನಲ್ಲಿದ್ದಾನೆ. ಬನ್ನಂಜೆ ರಾಜನೂ ದುಬೈನಲ್ಲಿದ್ದ. ಕಾರ್ಕಳದ ವಿಶ್ವನಾಥ್ ಶೆಟ್ಟಿ, ಉಡುಪಿಯ ಯತೀಶ್ ಶೆಟ್ಟಿ, ಒಂದಾನೊಂದು ಕಾಲಕ್ಕೆ ಮುತ್ತಪ್ಪ ರೈಗೆ ಆಪ್ತನಾಗಿದ್ದು ಮಂಗಳೂರಿನ ಅಮರ್ ಆಳ್ವ ಹತ್ಯೆಯ ಪ್ರಮುಖ ಆರೋಪಿ ಕಾರ್ಕಳದ ಲಂಬೂ ಅಶೋಕ್ ಶೆಟ್ಟಿ; ಹೀಗೆ ಇಂಟರ್‌ಪೋಲ್‌ನಿಂದ ವಾಂಟೆಡ್ ಪಟ್ಟಿಯಲ್ಲಿರುವ ಮಂಗಳೂರು ಮೂಲದ ಬಹುತೇಕ 'ಶೆಟ್ಟಿ ಲೋಗ್' ಸದ್ಯ ದುಬೈನಲ್ಲಿ ತಲೆ ಮರೆಸಿಕೊಂಡಿದ್ದಾರೆ.



ಈ ಸಾಲಿಗೆ ಇತ್ತೀಚೆಗೆ ಸೇರ್ಪಡೆಯಾದವನು ಶಿವಮೊಗ್ಗ ಮೂಲದ ಹೆಬ್ಬೆಟ್ಟು ಮಂಜ. ಬೆಂಗಳೂರಿನ ನಟೋರಿಯಸ್ ಬಿಲ್ಡರ್ ದಯಾನಂದ್ ಪೈ ಮೇಲೆ ತನ್ನ ಹುಡುಗರನ್ನು ಬಿಟ್ಟು ಗುಂಡಿನ ದಾಳಿ ಆಯೋಜಿಸಿ ರಾಜಾರೋಷವಾಗಿ ಟಿವಿಗಳಿಗೆ ತಾನೇ ಮಾಡಿಸಿದ್ದೆಂದು ಹೇಳಿಕೆ ಕೊಟ್ಟಿದ್ದ ಹೆಬ್ಬೆಟ್ಟು ಮಂಜನನ್ನು ಸೆರೆ ಹಿಡಿದೇ ತೀರುತ್ತೇನೆಂದು ಪೊಲೀಸ್ ಕಮೀಷನರ್ ಮಿರ್ಜಿ ತೊಟ್ಟ ಪಣ ಈಗ ಫಲ ನೀಡುತ್ತಿದೆ. ಆತನ ವಿರುದ್ಧ ಇಂಟರ್‌ಪೋಲ್ ರೆಡ್‌ಕಾರ್ನರ್ ನೋಟಿಸ್ ಜಾರಿ ಮಾಡುತ್ತಿದ್ದಂತೆ ಮಂಜನ ಪಾಸ್‌ಪೋರ್ಟ್ ಅನ್ನು ಸರ್ಕಾರ ರದ್ದು ಮಾಡಿದೆ.



ವಿಶೇಷವೆಂದರೆ ಮಂಜ ಕೂಡ ಬೆಂಗಳೂರು ಪಾಸ್‌ಪೋರ್ಟ್ ಕಚೇರಿಯ ಖದೀಮರಿಗೆ ಲಂಚ ಕೊಟ್ಟು ನಕಲಿ ಪಾಸ್‌ಪೋರ್ಟ್ ಗಿಟ್ಟಿಸಿದ್ದ. ನಕಲಿ ಅಡ್ರೆಸ್, ನಕಲಿ ಹೆಸರು, ನಕಲಿ ದಾಖಲೆಗಳನ್ನು ಮಂಗಳೂರು ಸಮೀಪದ ಹಳ್ಳಿಯೊಂದರ ವಿಳಾಸದ ಮೂಲಕ ಸೃಷ್ಟಿಸಿದ್ದ. ಅದನ್ನು ಭಾರತದಲ್ಲೆಲ್ಲೂ ಬಳಸದೆ ನೇಪಾಳಕ್ಕೆ ಹೋಗಿ ಆ ನಂತರ ಅಲ್ಲಿಂದ ದುಬೈಗೆ ಹಾರಿದ್ದ. ಇತ್ತೀಚಿನ ಮಾಹಿತಿಯೇನೆಂದರೆ ಹೆಬ್ಬೆಟ್ಟು ಸದ್ಯ ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ತಲೆ ಮರೆಸಿಕೊಂಡಿದ್ದಾನೆ. ಅಲ್ಲಿಂದ ಮತ್ತೆಲ್ಲಿಗೂ ಹೋಗಲಾರ. ಕಮೀಷನರ್ ಮಿರ್ಜಿಯ ಲೆಕ್ಕಾಚಾರದಂತೆ ಎಲ್ಲವೂ ನಡೆಯಿತೆಂದರೆ ಇನ್ನೆರಡು ತಿಂಗಳೊಳಗೆ ಹೆಬ್ಬೆಟ್ಟು ಮಂಜನನ್ನು ಇಂಟರ್‌ಪೋಲ್ ಹಿಡಿದು ಹಾಕಲಿದೆ.

ನಿವೃಗಿವಲಾರಂಭಿಸಿದ್ದರು. ಹೈದ್ರಾಬಾದ್, ಮಂಗಳೂರು, ಬೆಂಗಳೂರು, ಪುಣೆಗಳ ಅನೇಕ ಹೊಟೇಲಿಯರ್‌ಗಳು, ಸಿನಿಮಾ ಫೈನಾನ್ಶಿಯರ್‌ಗಳು, ಬಿಲ್ಡರ್‌ಗಳಿಗೆ ನಿಖಿಲ್ ಶೆಟ್ಟಿಯ ಬ್ಲಾಕ್‌ಮೇಲ್ ಶುರುವಾಗಿತ್ತು ಕೆಲವೊಮ್ಮೆ ತಾನೇ ರವಿ ಪೂಜಾರಿಯ ಹೆಸರಲ್ಲಿ ಧಮಕಿ ಹಾಕುತ್ತಿದ್ದ. ಇನ್ನೂ ಕೆಲವೊಮ್ಮೆ ಹೇಮಂತ್ ಶೆಟ್ಟಿಯ ಹೆಸರು ಬಳಸುತ್ತಿದ್ದ.

ಬೆಂಗಳೂರಿನ ಇಂದಿರಾನಗರದಲ್ಲಿದ್ದ ಫಿಲ್ಮ್ ಫೈನಾನ್ಶಿಯರ್ ರೋನಿ ಸ್ಕ್ರೂವಾಲ್ಲಾನ ಯು ಟಿವಿ ಕಚೇರಿಯ ಮೇಲೆ ನಡೆದ ದಾಳಿ, ನೈಸ್ ಧಣಿ ಅಶೋಕ್ ಖೇಣಿಗೆ ರವಿ ಪೂಜಾರಿ ಹೆಸರಲ್ಲಿ ಬಂದ ಧಮಕಿ, ಪ್ರೆಸ್ಟೀಜ್ ಬಿಲ್ಡರ್ಸ್, ಗೋಪಾಲನ್ ಮಾಲ್ ಧಣಿ, ಸಕಲೇಶಪುರದ ಕಾಫಿ ಪ್ಲಾಂಟರ್ ವೈರಮುಡಿ ರಾಮಚಂದ್ರನ್‌ನಿಂದ 3 ಕೋಟಿಗೆ ಬ್ಲಾಕ್‌ಮೇಲ್ ಇತ್ಯಾದಿ ಪ್ರಕರಣಗಳಲ್ಲಿ ರವಿ ಪೂಜಾರಿಯ ಹೆಸರಿತ್ತಾದರೂ ಅದರ ಹಿಂದಿರುವುದು ನಿಖಿಲ್ ಶೆಟ್ಟಿಯೇ ಎಂಬ ಗುಮಾನಿಯೂ ಪೊಲೀಸರಿಗಿತ್ತು.

ಈ ಮಧ್ಯೆ ನಿಖಿಲ್ ಶೆಟ್ಟಿಯ ದುಷ್ಟ ಚತುಷ್ಟಯದಲ್ಲೇ ಬಿರುಕು ಸೃಷ್ಟಿಯಾದದ್ದು 2 ಕೋಟಿಯ ಹಪ್ತಾ ಕಚ್ಚಾಟದಲ್ಲಿ. ನೇಪಾಳದ ಕುಬೇರನೊಬ್ಬನಿಗೆ ಸಂತೋಷ್ ಶೆಟ್ಟಿ 2 ಕೋಟಿಯ ಪ್ರೊಟೆಕ್ಷನ್ ಮನಿ ಕೊಡುವಂತೆ ಬ್ಲಾಕ್‌ಮೇಲ್ ಆರಂಭಿಸಿದ್ದ. ಹಾಗೇ ಬಂದ 2 ಕೋಟಿಯನ್ನು ಸಂತೋಷ್ ಶೆಟ್ಟಿ, ವಿಜಯ್ ಶೆಟ್ಟಿ, ನಿಖಿಲ್ ಶೆಟ್ಟಿ ಮತ್ತು ಕೃತಿಕ್ ಶೆಟ್ಟಿ- ಈ ನಾಲ್ವರೂ ಸಮಭಾಗವಾಗಿ ಹಂಚಿಕೊಳ್ಳಲು ಮೊದಲೇ ಒಪ್ಪಂದವಾಗಿತ್ತು. ಆದರೆ ಸಂತೋಷ್ ಶೆಟ್ಟಿ ಮತ್ತು ವಿಜಯ್ ಶೆಟ್ಟಿ ಇತ್ತೀಚೆಗೆ ರವಿ ಪೂಜಾರಿಯಿಂದ ಬೇರ್ಪಟ್ಟು ತಮ್ಮದೇ ಪ್ರತ್ಯೇಕ ಸಿಂಡಿಕೇಟ್ ಕಟ್ಟಿಕೊಳ್ಳಲು ಯತ್ನಿಸುತ್ತಿದ್ದ ಬಗ್ಗೆ ನಿಖಿಲ್‌ಶೆಟ್ಟಿಗೆ ಅಸಹನೆಯಿತ್ತು.

ಬಂದ 2 ಕೋಟಿಯಲ್ಲಿ ನಿನ್ನ ಪಾಲೆಂದು ಬರುವುದು ಕೇವಲ 50 ಲಕ್ಷ ಮಾತ್ರ. ನಿನ್ನ ಪಾರ್ಟನರ್ ಎಂಬ ಒಂದೇ ಕಾರಣಕ್ಕೆ ವಿಜಯ್ ಶೆಟ್ಟಿಗೇಕೆ 50 ಲಕ್ಷ? ಅದನ್ನೂ ಬಾಸ್ ರವಿ ಪೂಜಾರಿಗೆ ಕೊಟ್ಟರಾಯ್ತು. ಮಿಕ್ಕ ಒಂದು ಕೋಟಿಯನ್ನು ನಾನು ಮತ್ತು ಕೃತಿಕ್ ಶೆಟ್ಟಿ ಹಂಚಿಕೊಳ್ಳುತ್ತೇವೆ. ಒಪ್ಪುವುದು ಬಿಡುವುದು ನಿನ್ನಿಷ್ಟ, ಎಂದು ಬಿಟ್ಟ.

ಇದೇ ವಿಷಯದಲ್ಲಿ ಶುರುವಾದ ಮನಸ್ತಾಪ ಅಂತಿಮವಾಗಿ ಸಂತೋಷ್ ಶೆಟ್ಟಿ ಮತ್ತು ನಿಖಿಲ್ ಶೆಟ್ಟಿ ಮಧ್ಯೆ ದುಷ್ಮನಿಗೆ ಕಾರಣವಾಗಿದೆ. ಬಹುಶಃ ರವಿ ಪೂಜಾರಿಯೇ ಸಂತೋಷ್ ಶೆಟ್ಟಿಯ ಬಾಲ ಕತ್ತರಿಸಲು ಆದೇಶಿಸಿರಬೇಕು. ಆ ಹೊತ್ತಿಗೆ ಸಂತೋಷ್ ಶೆಟ್ಟಿ ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ಅವಿತು ಕುಳಿತಿದ್ದ. ಬ್ಯಾಂಕಾಕ್ ಹೊರವಲಯದಲ್ಲಿ ಬಾಡಿಗೆ ಮನೆಯೊಂದರಲ್ಲಿ ಆತ ಇರುತ್ತಿದ್ದದ್ದು ನಿಖಿಲ್‌ಶೆಟ್ಟಿಗೆ ಮಾತ್ರವೇ ಗೊತ್ತಿತ್ತು. ನೇರವಾಗಿ ಇಂಟರ್‌ಪೋಲ್‌ಗೇ ಮಾಹಿತಿಕೊಟ್ಟ ನಿಖಿಲ್‌ಶೆಟ್ಟಿ ಮುಂಬಯಿ ಪೊಲೀಸರು ಮತ್ತು ಇಂಟರ್‌ಪೋಲ್ ಅಧಿಕಾರಿಗಳು ಸೇರಿಕೊಂಡು ಬ್ಯಾಂಕಾಕ್‌ನಲ್ಲಿದ್ದ ಸಂತೋಷ್ ಶೆಟ್ಟಿಯನ್ನು ಎಳೆದು ತರಲು ಕಾರಣನಾಗಿದ್ದ. ಸಂತೋಷ್ ಶೆಟ್ಟಿ ಜೈಲು ಪಾಲಾಗುವುದಕ್ಕೂ ಮುನ್ನ ನಿಖಿಲ್ ಶೆಟ್ಟಿಯ ಪರಮಾಪ್ತ ದೇವಾಡಿಗ ದುಬೈನಲ್ಲಿ ತಲೆ ಮರೆಸಿಕೊಂಡಿದ್ದಾನೆಂಬ ಕ್ಲೂ ಕೊಟ್ಟ.

ಈ ಹೊತ್ತಿಗೆ ಮಂಗಳೂರು ಮತ್ತು ಬೆಂಗಳೂರು ಸಿಸಿಬಿಯ ಪೊಲೀಸರು ನಿಖಿಲ್ ಶೆಟ್ಟಿ ವಿರುದ್ಧ ಇಂಟರ್‌ಪೋಲ್‌ಗೆ ದೂರು ಕೊಟ್ಟಾಗಿತ್ತು. 2012ರ ಫೆಬ್ರವರಿ ಹೊತ್ತಿಗೆ ನಿಖಿಲ್‌ಶೆಟ್ಟಿ ವಿರುದ್ಧ ರೆಡ್‌ಕಾರ್ನರ್ ನೋಟಿಸ್ ಕೂಡ ಜಾರಿಯಾಗಿತ್ತು. 2012 ಫೆಬ್ರವರಿ 2ರಂದು ನಿಖಿಲ್ ಶೆಟ್ಟಿಯನ್ನು ಬಂಧಿಸಿ ದುಬೈ ಪೊಲೀಸರು ಆತನನ್ನು ಭಾರತಕ್ಕೆ ಗಡಿಪಾರು ಮಾಡುವ ರಾಜತಾಂತ್ರಿಕ ಪ್ರಕ್ರಿಯೆಯನ್ನು ಆರಂಭಿಸಿದರು. ಚಿಮ್ಮನೂರು ಜ್ಯುವೆಲ್ಲರ್ಸ್ ದರೋಡೆ ಯತ್ನ, ವಾಮಂಜೂರು ರೋಹಿ ಹತ್ಯೆ, ಸೌರ್ಭಾ ಎಲೆಕ್ಟ್ರಾನಿಕ್ಸ್ ಧಣಿ ಮೇಲೆ ನಡೆದ ದಾಳಿ, ಮುಂಬಯಿ ಅಂಧೇರಿಯಲ್ಲಿ ಬಿಲ್ಡರ್ ಸುಧಾಕರ್ ಶೆಟ್ಟಿಯ ಇಬ್ಬರು ಸಿಬ್ಬಂದಿ ಹತ್ಯೆ ಸೇರಿದಂತೆ ನಿಖಿಲ್ ಶೆಟ್ಟಿ ವಿರುದ್ಧ ಬರೋಬ್ಬರಿ ಅರ್ಧ ಡಜನ್ ಕೇಸುಗಳಿದ್ದವು.

ಅಂತಿಮವಾಗಿ ಜೂನ್ 13ರಂದು ದುಬೈನಿಂದ ಇಂಟರ್‌ಪೋಲ್ ಅಧಿಕಾರಿಗಳ ಮೂಲಕ ದೆಹಲಿಯ ಇಂದಿರಾಗಾಂಧಿ ಇಂಟರ್‌ನ್ಯಾಷನಲ್ ಏರ್‌ಪೋರ್ಟಿಗೆ ನಿಖಿಲ್ ಶೆಟ್ಟಿ ಬಂದಿಳಿಯುತ್ತಿದ್ದಂತೆಯೇ ಮಂಗಳೂರು ಪೊಲೀಸರು ಆತನನ್ನು ವಶಕ್ಕೆ ಪಡೆದಿದ್ದಾರೆ. ಮಂಗಳೂರು ಪೊಲೀಸ್ ಕಮೀಷನರ್ ಮನೀಶ್ ಕರ್ಬೀಕರ್ ತಾವೇ ಖುದ್ದು ಆತನ ಬಾಯಿ ಬಿಡಿಸುತ್ತಿದ್ದಾರೆ. ಆತನ ಸುದೀರ್ಘ ಕಾಲಾವಧಿಯ ಸುಲಿಗೆ ಸಾಮ್ರಾಜ್ಯ, ರವಿ ಪೂಜಾರಿಯ ನಿಗೂಢ ಜಾಲ, ಹೇಮಂತ ಪೂಜಾರಿಯ ಕಾರಸ್ಥಾನ ಮತ್ತು ಆತನಿಂದ ಸುಲಿಗೆಗೊಳಗಾದ ವಿವಿಧ ರಾಜ್ಯಗಳ ಕುಬೇರರ ವಿವರ ಇತ್ಯಾದಿಗಳೆಲ್ಲದರ ಮಾಹಿತಿ ಏನೇನಿದೆಯೋ? ಏನೇನು ಬಾಯಿ ಬಿಡುತ್ತಾನೋ?

ಅಲ್ಲಿಗೆ ಕರ್ನಾಟಕ ಪೊಲೀಸರು ರವಿಪೂಜಾರಿಯ ಒಂದು ಕೈಯನ್ನಂತೂ ಕತ್ತರಿಸಿದಂತಾಗಿದೆ.

● ರಾ.ಸೋಮನಾಥ್

ಕಾವಿ ಪೊಲಿಟಿಕ್ಸ್‌ಗೆ ಸ್ವಾಮಿಯೇ ಬಲಿ!


ಅಥಣಿಯ ಗಚ್ಚಿನಮಠಕ್ಕೆ ಕಚ್ಚೆಹರುಕ!!


ಬರೋಬ್ಬರಿ ನಾಲ್ಕು ಶತಮಾನಗಳಷ್ಟು ಇತಿಹಾಸ ವಿರುವ ಅಥಣಿಯ ಗಚ್ಚಿನಮಠದ ಗ್ರಹಚಾರವೇ ಸರಿ ಇದ್ದಂತಿಲ್ಲ. ಒಂದರ ಮೇಲೊಂದು ಅವಾಂತರಗಳು ಎರಗುತ್ತಲೇ ಇವೆ. ಬೆಳಗಾವಿಯ ಮೂಲೆಯಲ್ಲಿ ತಣ್ಣಗೆ ಮುದುಡಿಕೊಂಡಿದ್ದ ಈ ಮಠಕ್ಕೆ ಬಿಡದಿಯ 'ದಿ ಗ್ರೇಟ್' ಸೆಕ್ಸಾಧೀಶ ನಿತ್ಯಾನಂದನ ನೆರಳು ಅದ್ಯಾವ ಘಳಿಗೆಯಲ್ಲಿ ತಗುಲಿಕೊಂಡಿತೊ ಆಗಿನಿಂದ ಗಚ್ಚಿನ ಮಠ ಪದೇಪದೇ ಸುದ್ದಿಗೆ ಬರುತ್ತಲೇ ಇದೆ. ಅದೂ 'ಸಾಧು'ವಲ್ಲದ ಕಾರಣಗಳಿಗಾಗಿ!

ಗಚ್ಚಿನಮಠದ ಪೀಠಕ್ಕಾಗಿ ಪೈಪೋಟಿಗಿಳಿದ ಹಿರಿ ಮತ್ತು ಕಿರಿ ಸ್ವಾಮಿಗಳ ನಡುವಿನ ಕಾದಾಟ ಕೊನೆಗೂ ದೊಡ್ಡ ಸ್ವಾಮಿಯನ್ನು 'ಲಿಂಗೈಕ್ಯ'ರನ್ನಾಗಿಸುವ ಮೂಲಕ ಕ್ಲೈಮ್ಯಾಕ್ಸ್ ಹಂತಕ್ಕೆ ಬಂದು ತಲುಪಿದೆ. 1986ರಿಂದ ಇಲ್ಲಿಯವರೆಗೆ ಚನ್ನಬಸವಸ್ವಾಮಿ ಇದರ ಮಠಾಧೀಶರಾಗಿದ್ದರು. ಆದರೆ ತೀರಾ ಇತ್ತೀಚೆಗೆ ಈ ಚನ್ನಬಸವಸ್ವಾಮಿ ಬಿಡದಿಯ ಬಿಲ ಹೊಕ್ಕು ನಿತ್ಯಾನಂದನ 'ಸತ್ಸಂಗ' ಮಾಡಿ ಬಂದದ್ದು ದೊಡ್ಡ ಅಲ್ಲೋಲಕಲ್ಲೋಲವನ್ನೇ ಸೃಷ್ಟಿಸಿತ್ತು. ಮಹಾಲಿಂಗೇಶ್ವರ ಮಠವನ್ನು ನಿತ್ಯಾನಂದನಿಗೆ ಮಾರುವುದಕ್ಕಾಗಿಯೇ ಚನ್ನಬಸವಸ್ವಾಮಿ ಹುನ್ನಾರ ನಡೆಸುತ್ತಿದ್ದಾರೆಂಬ ಆರೋಪಗಳು ಭಕ್ತರ ವಲಯದಲ್ಲಿ ಧಾರಾಳವಾಗಿ ಕೇಳಿಬಂದಿದ್ದವು. ಅದರ ಬೆನ್ನಿಗೆ ಶುರುವಾದ 'ಕಾವಿ ಪೊಲಿಟಿಕ್ಸ್' ಇವತ್ತು ಚನ್ನಬಸವ ಸ್ವಾಮಿಯನ್ನೇ ಇನ್ನಿಲ್ಲವಾಗಿಸಿದೆ. ದುರಂತವೆಂದರೆ ಇದಿಷ್ಟೂ ಪ್ರಕರಣದಲ್ಲಿ ಕಿರಿಸ್ವಾಮಿ ಕಚ್ಚೆಹರುಕ ಶಿವಬಸವನ ಜೊತೆಗೆ ಚಿತ್ರದುರ್ಗದ ಮುರುಘಾರಾಜೇಂದ್ರ ಶರಣರ ಹೆಸರೂ ಮಸಿ ಬಳಿದುಕೊಂಡು ನಿಂತಿದೆ.


ಅಥಣಿಯ ಗಚ್ಚಿನಮಠದ ಮೂಲ ಕೆದಕಿದರೆ ನಮ್ಮನ್ನು ಹದಿನಾರನೇ ಶತಮಾನಕ್ಕೆ ಕರೆದೊಯ್ಯುತ್ತದೆ. ಸಂಚಾರಿಯಾಗಿದ್ದ ಶ್ರೀ ರೇವಣಸಿದ್ಧ ಸ್ವಾಮಿಗಳು ಅಥಣಿ ಜನರ ಭಕ್ತಿಗೆ ಮಾರುಹೋಗಿ ಇಲ್ಲಿ ನೆಲೆ ನಿಲ್ಲಲು ನಿರ್ಧರಿಸಿದ್ದೇ ಈ ಮಠದ ಉಗಮಕ್ಕೆ ಕಾರಣವಾಗಿತ್ತು. ಗಚ್ಚಿನ ಮಠ ಎಂಬ ಹೆಸರಿನಲ್ಲಿ ಅಥಣಿ, ಹೆಚ್ಚೆಂದರೆ ಬೆಳಗಾವಿಗೆ ಮಾತ್ರ ಸೀಮಿತವಾಗಿದ್ದ ಇದರ ಪ್ರಚಾರವನ್ನು ಹೆಚ್ಚಿಸಿದ್ದು ಶ್ರೀ ಮುರುಘರಾಜೇಂದ್ರ ಶಿವಯೋಗಿ ಸ್ವಾಮಿಗಳು. ಅವರ ಆಗಮನದ ನಂತರದಲ್ಲಿ ಇದು ಶಿವಯೋಗಿಗಳ ಮಠವೆಂದೇ ಪ್ರಸಿದ್ಧಿ ಪಡೆಯಿತು. ಕಾಲಕ್ರಮೇಣ ಇದು ಚಿತ್ರದುರ್ಗದ ಮುರುಘಾಮಠದ ಶಾಖಾಮಠವಾಗಿಯೂ ಬದಲಾಗಿ ಹೋಯ್ತು. ಹಾಗಾಗಿ ಇದರ ಆಡಳಿತದ ನಿರ್ವಹಣೆ, ಪೀಠಾಧೀಶರ ನೇಮಕದ ಅಧಿಕಾರಗಳೆಲ್ಲ ಮುರುಘಾಮಠಕ್ಕೇ ಸೇರಿದ್ದು. ಇಲ್ಲಿಯವರೆಗೆ ಗಚ್ಚಿನ ಮಠಕ್ಕೆ ಹದಿಮೂರು ಜನ ಪೀಠಾಧೀಶರು ಆಗಿಹೋಗಿದ್ದು, ಇತ್ತೀಚೆಗೆ ವಿವಾದಿತವಾಗಿ ಲಿಂಗೈಕ್ಯರಾದ ಚನ್ನಬಸವ ಸ್ವಾಮಿ ಹದಿನಾಲ್ಕನೇ ಪೀಠಾಧಿಪತಿ.

ಅಷ್ಟಕ್ಕೂ ಈ ಚನ್ನಬಸವ ಸ್ವಾಮಿಯು ಸ್ವಚ್ಛ ಮಠಾಧೀಶ ಎನ್ನುವಂತಿರಲಿಲ್ಲ. ಮಠವನ್ನು ಎತ್ತರಕ್ಕೇರಿಸಿ, ಸಮಾಜಮುಖಿಗೊಳಿಸುವ ಅವಕಾಶಗಳಿದ್ದೂ ಪರೋಕ್ಷವಾಗಿ 'ರಿಯಲ್ ಎಸ್ಟೇಟ್' ದಂಧೆಗಿಳಿಯುವ ಮೂಲಕ ಕಾವಿಯ ಕಿಮ್ಮತ್ತನ್ನೇ ಕನಿಷ್ಠಗೊಳಿಸಿದ್ದರು. ಮೂಲತಃ ವಿಜಾಪುರ ಜಿಲ್ಲೆಯ ಕಾಜಿಬೀಳಗಿಯವರಾದ ಚೆನ್ನಬಸವ ಸ್ವಾಮಿ ಪ್ರಾಥಮಿಕ ಶಿಕ್ಷಣ ಮುಗಿಸುವಷ್ಟಕ್ಕೇ ಸುಸ್ತಾಗಿ ಹೋಗಿದ್ದರೇನೊ, ಜೀವನೋಪಾಯಕ್ಕೆ ಅಂತ ಆರಿಸಿಕೊಂಡದ್ದು ಈ ಕಾವಿ ಸಂಸ್ಕೃತಿಯನ್ನು. ಹಾವೇರಿಯ ಅಗಡಿ ಮಠದಲ್ಲಿ ಸ್ವಲ್ಪ ದಿನ ವ್ಯವಹರಿಸಿಕೊಂಡಿದ್ದ ಇವರನ್ನು 1986ರಲ್ಲಿ ಧಾರವಾಡ ಮುರುಘಾಮಠದ ಮಹಾಂತ ಸ್ವಾಮಿಗಳು ಗಚ್ಚಿನಮಠದ ಪೀಠಾಧೀಶರನ್ನಾಗಿ ನೇಮಿಸಿ ಅಧಿಕಾರ ವಹಿಸಿಕೊಟ್ಟಿದ್ದರು. ಮಠಾಧೀಶನಾಗಿ ಸಮಾಜಮುಖಿ ಕಾರ್ಯಗಳಲ್ಲಿ ಮಠವನ್ನು ತೊಡಗಿಸುವುದಿರಲಿ, ಸ್ವತಃ ಮಠದ ಏಳ್ಗೆಗೂ ಇವರು ಶ್ರಮಿಸಲಿಲ್ಲ. ಇವರ ಅವಧಿಯಲ್ಲಿ ಮಠ ಆರಕ್ಕೇಳಲಿಲ್ಲ, ಮೂರಕ್ಕಿಳಿಯಲಿಲ್ಲ ಎನ್ನುವಂತಾಯ್ತು. ಸರ್ಕಾರದ ಅಕ್ಷರದಾಸೋಹದ ಯೋಜನೆಯೊಂದನ್ನು ಬಿಟ್ಟು ಮಠದ ಕಾಣಿಕೆ ಶೂನ್ಯ! ಅದನ್ನಾದರೂ ಸಮರ್ಪಕವಾಗಿ ನಿರ್ವಹಿಸಲು ಚನ್ನಬಸವ ಸ್ವಾಮಿಗೆ ಆಗಿರಲಿಲ್ಲ.


ಶಿವಬಸವ ಸ್ವಾಮಿ


ಚನ್ನಬಸವ ಸ್ವಾಮಿ

ಕೊನೆಗೊಮ್ಮೆ ರಿಯಲ್ ಎಸ್ಟೇಟ್ ದಂಧೆಗೂ ಧುಮುಕಿದ ಚನ್ನಬಸವ ಸ್ವಾಮಿ ತನ್ನದೇ ಆದ ಪುಡಿ ಪಟಾಲಮ್ಮಿಗೆ ಸೀಮಿತವಾಗಿಬಿಟ್ಟಿದ್ದರು. ಅಲ್ಲದೆ ತನ್ನ ತಮ್ಮನ ಮಗ ಗುರುಲಿಂಗನಿಗೆ ಮಠದಲ್ಲಿ ಪ್ರಾಶಸ್ತ್ಯ ನೀಡುತ್ತಾ ಬಂದದ್ದು ಅವರ ಮೇಲಿನ ಗೌರವವನ್ನು ಭಕ್ತರಲ್ಲಿ ಮತ್ತಷ್ಟೂ ಕಡಿಮೆಗೊಳಿಸಿತ್ತು. ಆತನಿಗೇ ಪೀಠ ಪಟ್ಟ ಕಟ್ಟಿಬಿಡುತ್ತಾರೇನೊ ಎನ್ನುವಷ್ಟರಮಟ್ಟಿಗೆ ಕುಟುಂಬ ಪಾಳೇಗಾರಿಕೆಗೂ ಆಸ್ಪದ ಮಾಡಿಕೊಟ್ಟಿದ್ದರು.


ಮುರುಘಾ ಶರಣರು

ಇಂತಿಪ್ಪ ಸ್ವಾಮಿ, ಅದೊಮ್ಮೆ ಬಿಡದಿಯ ನಿತ್ಯಾನಂದನೊಂದಿಗೆ ಮಾತುಕತೆ ನಡೆಸಿ ಬಂದದ್ದು ತೀವ್ರ ಅನುಮಾನಗಳಿಗೆ ಎಡೆಮಾಡಿಕೊಟ್ಟಿತ್ತು. ಮುಕ್ಕಾಲು ಪಾಲು ರಿಯಲ್ ಎಸ್ಟೇಟ್ ಸ್ವಾಮಿಯಾಗಿಯೇ ಬದಲಾಗಿದ್ದ ಚನ್ನಬಸವ ಸ್ವಾಮಿಗಳು ಗಚ್ಚಿನ ಮಠದ ಒಡೆತನವಿರುವ ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದ ಮಹಾಲಿಂಗೇಶ್ವರ ಮಠವನ್ನು ನಿತ್ಯಾನಂದನಿಗೆ ಮಾರಾಟ ಮಾಡಲು ಓಡಾಡುತ್ತಿದ್ದಾರೆ ಎಂಬ ಆರೋಪಗಳು ದಟ್ಟವಾಗಿ ಕೇಳಿಬಂದಿದ್ದವು. ಇದಕ್ಕೆ ಪ್ರತಿಯಾಗಿ ಹಲವಾರು ಪ್ರತಿಭಟನೆಗಳೂ ನಡೆದಿದ್ದವು.

ಚನ್ನಬಸವ ಸ್ವಾಮಿಯ ಇಂತಹ ಅವಾಂತರಗಳನ್ನು ಕಾಣುತ್ತಾ ಬಂದಿದ್ದ ಚಿತ್ರದುರ್ಗದ ಮುರುಘಾ ರಾಜೇಂದ್ರ ಶರಣರು, ನಿತ್ಯಾನಂದನ ಭೇಟಿ ಪ್ರಕರಣದ ಕಾರಣಕ್ಕೇ ಪೀಠ ತ್ಯಜಿಸುವಂತೆ ಚನ್ನಬಸವ ಸ್ವಾಮಿಗೆ ಆಗ್ರಹಿಸಿದ್ದರು. ಅಲ್ಲದೆ ಅದಕ್ಕೆ ಎರಡು ತಿಂಗಳ ವಾಯ್ದೆಯನ್ನೂ ನಿಗದಿ ಮಾಡಿದ್ದರು. ಆದರೆ ಈ ನಡುವೆ ಗಚ್ಚಿನ ಮಠಕ್ಕೆ ತನ್ನ ತಮ್ಮನ ಮಗನನ್ನೇ ಚನ್ನಬಸವ ಸ್ವಾಮಿಗಳು ಉತ್ತರಾಧಿಕಾರಿಯನ್ನಾಗಿಸುತ್ತಾರೆ ಎಂಬ ಪುಕಾರು ಎದ್ದಿದ್ದರಿಂದ ಮುರುಘಾ ಶರಣರೇ ಶಿವಬಸವ ಎಂಬುವನನ್ನು ಅಥಣಿಯ ಮಠಕ್ಕೆ ಪೀಠಾಧೀಶನನ್ನಾಗಿ ನಿಯೋಜಿಸಿ ಫರ್ಮಾನು ಹೊರಡಿಸಿದ್ದರು.


ಈ ಶಿವಬಸವ ಸ್ವಾಮಿಯದ್ದೇ ಒಂದು ಕರಾಳ ಇತಿಹಾಸವಿದೆ. ಕಚ್ಚೆಹರುಕ, ಕೀಚಕ ಎಂಬೆಲ್ಲಾ ಉಪನಾಮಗಳೂ ಈ ಕಿರಿಸ್ವಾಮಿಗೆ ತಗುಲಿಕೊಂಡಿವೆ. ಈತ ಹಾವೇರಿ ಜಿಲ್ಲೆಯ ಚಿಕ್ಕಬೆಡಗಿ ಗ್ರಾಮದವನು. 2008ರಲ್ಲಿ ಹಾವೇರಿಯ ಹೊಸಮಠದಲ್ಲಿದ್ದಾಗ, ಅಲ್ಲಿನ ಶಿಕ್ಷಣ ಸಂಸ್ಥೆಯಲ್ಲಿ ಓದಲು ಬಂದಿದ್ದ ಬಿ.ಎಡ್ ಯುವತಿಯನ್ನು ಪುಸಲಾಯಿಸಿ, ಆಕೆಯೊಂದಿಗೆ ದೈಹಿಕ ಸಂಬಂಧ ಹೊಂದಿದ್ದು ಬಯಲಾಗಿ ದೊಡ್ಡ ರಾದ್ಧಾಂತವೇ ಸೃಷ್ಟಿಯಾಗಿತ್ತು. ನಂತರ ಅವನನ್ನು ಹೊಸದುರ್ಗ ಮಠಕ್ಕೆ ಮುಖ್ಯಸ್ಥನನ್ನಾಗಿ ನೇಮಕ ಮಾಡಲಾಗಿತ್ತು.

ಅಂತಹ ಒಬ್ಬ ಅಯೋಗ್ಯನನ್ನು ಮುರುಘಾ ಶರಣರು ಅದ್ಯಾವ ಕಾರಣಕ್ಕೆ ಗಚ್ಚಿನಮಠದ ಉತ್ತರಾಧಿಕಾರಿಯನ್ನಾಗಿಸಿದ್ದು ನಿಜಕ್ಕೂ ಆಘಾತಕಾರಿ ಸಂಗತಿ. ಖುದ್ದು ಮುರುಘಾ ಶರಣರೇ ಪೀಠ ತ್ಯಜಿಸಲು ಗಡುವನ್ನು ನೀಡಿದ್ದರೂ ಈ ಶಿವಬಸವಸ್ವಾಮಿ ಅದೊಂದು ರಾತ್ರಿ ಸುಮಾರು ನಲವತ್ತು ಪುಂಡರನ್ನು ಚಿತ್ರದುರ್ಗದಿಂದ ಅಥಣಿಗೆ ಕಳುಹಿಸಿ ನಡುರಾತ್ರಿಯಲ್ಲೆ ಮಠದಲ್ಲಿದ್ದ ಪಾತ್ರೆ, ಬಟ್ಟೆ, ಅಕ್ಕಿ ಬೇಳೆಕಾಳುಗಳನ್ನೆಲ್ಲ ಬೀದಿಗೆ ಚೆಲ್ಲಾಡುವಂತೆ ಮಾಡಿದ್ದ. ಶಿವಬಸವನ ಈ ದಾಂಧಲೆಗೆ ಗಚ್ಚಿನ ಮಠ ಆಡಳಿತ ಮಂಡಳಿಯ ಕೆಲ ಹಲಾಲುಕೋರರೂ ಸಾಥ್ ನೀಡಿದ್ದರು. ಅನರ್ಹ ಹಳೇ ಸ್ವಾಮಿಯನ್ನು ಖಾಲಿಯೇನೊ ಮಾಡಿಸಬೇಕಿತ್ತು ಆದರೆ ಕಾವಿ ತೊಟ್ಟವರ ಈ 'ಮಾಫಿಯಾ ಸ್ಟೈಲ್' ಭಕ್ತರಲ್ಲಿ ಹೇಸಿಗೆ ಹುಟ್ಟಿಸುವಂತದ್ದು.

ಇಷ್ಟೆಲ್ಲಾ ಹಗ್ಗ-ಜಗ್ಗಾಟದ ಹೈಡ್ರಾಮಾದ ನಡುವೆಯೇ ದಿನಾಂಕ 13.06.2013ರಂದು ಚನ್ನಬಸವ ಸ್ವಾಮಿ ಹಠಾತ್ತನೇ ಹೃದಯಾಘಾತದಿಂದ ಸಾವನ್ನಪ್ಪಿದ್ದು ಪ್ರಕರಣಕ್ಕೆ ಹೊಸತಿರುವು ನೀಡಿದೆ. ಹೊಸ ಸ್ವಾಮಿ ಶಿವಬಸವನ ಟಾರ್ಚರ್ ಮತ್ತು ಮಠದೊಳಗೆ ತಪ್ಪಿಹೋಗುತ್ತಿದ್ದ ತಮ್ಮ ಪಾರುಪತ್ಯದ ಬಗ್ಗೆ ವಿಪರೀತ ಚಿಂತೆಗೀಡಾದದ್ದೇ ಚನ್ನಬಸವ ಸ್ವಾಮಿಗಳಿಗೆ ಹೃದಯಾ ಘಾತವಾಗಲು ಕಾರಣ ಎಂದು ಭಕ್ತರು ಆರೋಪಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮುರುಘಾ ಶರಣರಿಂದಲೂ ಸ್ವಾಮಿಯ ಮೇಲೆ ಒತ್ತಡ ಬರುತ್ತಿದ್ದುದಾಗಿ ತಿಳಿದು ಬಂದಿದೆ. ಚನ್ನಬಸವ ಅಂತ್ಯಸಂಸ್ಕಾರದ ದಿನ ನೆರೆದಿದ್ದ ಭಕ್ತರು ಇದಕ್ಕೆಲ್ಲಾ ಶಿವಬಸವ ಸ್ವಾಮಿಯೇ ಕಾರಣ ಎಂದು ದೂರಿದ್ದಲ್ಲದೆ ಇತ್ತೀಚೆಗಷ್ಟೆ ಆತ ಉತ್ತರ ಭಾರತದ ಪ್ರವಾಸದಲ್ಲಿದ್ದಾಗ ಒಬ್ಬ ಮಹಿಳೆಯೊಂದಿಗೆ ಅಸಭ್ಯ ಭಂಗಿಯಲ್ಲಿ ಇದ್ದಾಗ ತೆಗೆದಿದ್ದ ಫೋಟೋವನ್ನು ಪ್ರದರ್ಶಿಸುತ್ತಾ ಯಾವುದೇ ಕಾರಣಕ್ಕೂ ಅಂತಿಮ ವಿಧಿವಿಧಾನ ನಡೆಸಲು ಶಿವಬಸವನಿಗೆ ಅವಕಾಶ ನೀಡುವುದಿಲ್ಲವೆಂದು ಪಟ್ಟುಹಿಡಿದಿದ್ದರು.

ಅಧಿಕಾರ ಗ್ರಹಣದ ದೃಷ್ಟಿಯಿಂದ ಅಂತಿಮ ಹಂತಕ್ಕೆ ಬಂದಿರುವಂತೆ ಕಂಡುಬಂದರೂ ಗಚ್ಚಿನಮಠದ ಗೊಂದಲ ದಿನೇದಿನೇ ಕಗ್ಗಂಟಾಗುತ್ತಾ ಸಾಗುತ್ತಿದೆ. ಈಗಾಗಲೇ ಸಾಕಷ್ಟು ಪ್ರಶ್ನೆಗಳು ಮನೆ ಮಾಡಿರುವ 'ಪೀಠ' ಪ್ರಕರಣಕ್ಕೆ ಹಿರಿ ಸ್ವಾಮಿಯ ದಿಢೀರ್ ಸಾವೇ ದೊಡ್ಡ ಪ್ರಶ್ನಾರ್ಥಕ ಚಿಹ್ನೆಯಾಗಿ ಕೂತಿದೆ. ಅದೇನೇ ಇರಲಿ, ಶತಮಾನಗಳಷ್ಟು ಪರಂಪರೆಯಿರುವ ಗಚ್ಚಿನಮಠಕ್ಕೆ 'ಹಾಟ್' ಅಯೋಗ್ಯನನ್ನು ಮಠಾಧೀಶನನ್ನಾಗಿಸೋದು ಎಷ್ಟು ಸರಿ? ಮುರುಘಾ ಶರಣರು ಮರುಚಿಂತನೆ ಮಾಡಿಯಾರೆ...

● ಮಧುಬಾಲಾ


ಮಠದ ಸಾಮಾನುಗಳನ್ನು ಹೊರಗೆ ಎಸೆದಿರುವುದು



KAS ಹಗರಣ

ಗೋನಾಳ್ ಭೀಮಪ್ಪನಿಗೆ ಕಾದಿದೆ ಜೈಲು

ಕರ್ನಾಟಕ ಲೋಕಸೇವಾ ಆಯೋಗದ ಇತಿಹಾಸದಲ್ಲೇ ಕಂಡು ಕೇಳರಿಯದಷ್ಟು ಭ್ರಷ್ಟಾಚಾರ ನಡೆಸಿ ಈಗತಾನೇ ನಿವೃತ್ತನಾಗಿರುವ ಮಾಜಿ ಅಧ್ಯಕ್ಷ ಗೋನಾಳ್ ಭೀಮಪ್ಪ ಜೈಲು ಸೇರುವ ದಿನ ದೂರವಿದ್ದಂತಿಲ್ಲ.

2011ರ ಬ್ಯಾಚ್‌ನ ಕೆಎಎಸ್ ನೇಮಕಾತಿಯಲ್ಲಿ ಗೋನಾಳ್ ಭೀಮಪ್ಪ ಮತ್ತು ಗ್ಯಾಂಗ್ ನಡೆಸಿರುವ ಹಗರಣದ ಅಗಲ, ವಿಸ್ತಾರ ನೋಡಿ ಶಾಕ್ ಆಗಿರುವ ಸರ್ಕಾರ ಈಗ ಸಿಐಡಿ ತನಿಖೆಗೆ ಆದೇಶಿಸಿದೆ.

ಈಗಾಗಲೇ 1998, 1999 ಹಾಗೂ 2004ರ ಕೆಎಎಸ್ ನೇಮಕಾತಿಗಳು ಭಾರಿ ವಿವಾದ ಸೃಷ್ಟಿಸಿ ಸಿಐಡಿ ತನಿಖೆ ಹಾಗೂ ಕೋರ್ಟ್ ಕೇಸ್‌ಗಳ ಜಂಜಾಟದಲ್ಲಿ ಸಿಲುಕಿವೆ. ಸಾವಿರಾರು ಉದ್ಯೋಗಾಕಾಂಕ್ಷಿಗಳನ್ನು ಅತಂತ್ರ ಸ್ಥಿತಿಗೆ ದೂಡಿ ನರಳಿಸುತ್ತಿವೆ.

ಕಲೀಲ್ ಮಹಮದ್ ಮತ್ತವರ ಗೆಳೆಯರ ತಂಡ ಈ ಮೂರು ಬ್ಯಾಚ್‌ಗಳ ನೇಮಕಾತಿಯಲ್ಲಿ ಏನೆಲ್ಲಾ ಹಗರಣಗಳಾಗಿವೆ ಎಂಬುದನ್ನು ಇಂಚಿಂಚೂ ಪತ್ತೆ ಹಚ್ಚಿ ಸಾರ್ವಜನಿಕರ, ಕೋರ್ಟ್ ಹಾಗೂ ಸಿಐಡಿ ಪೊಲೀಸರ ಗಮನಕ್ಕೆ ದಾಖಲೆ ಸಹಿತ ತಂದಿದ್ದಾರೆ. ಆದರೆ ಇದರಿಂದ ಕೆಪಿಎಸ್‌ಸಿ ಮುಖ್ಯಸ್ಥರು ಯಾವ ಪಾಠವನ್ನೂ ಕಲಿಯದೆ 2011ರ ಬ್ಯಾಚ್‌ನ ನೇಮಕಾತಿಯಲ್ಲೂ



ಲಂಚಾವತಾರ ಮುಂದುವರೆಸಿದ್ದರು. ಈ ಬ್ಯಾಚ್‌ನ ಪೂರ್ವಭಾವಿ ಪರೀಕ್ಷೆಗಳು 2012ರ ಏಪ್ರಿಲ್‌ನಲ್ಲೂ ಹಾಗೂ ಮುಖ್ಯ ಪರೀಕ್ಷೆಯು 2012ರ ಡಿಸೆಂಬರ್‌ನಲ್ಲೂ ನಡೆದವು. ನಂತರ 2013ರ ಮಾರ್ಚ್‌ನಲ್ಲಿ ಮುಖ್ಯ ಪರೀಕ್ಷೆಯ ಫಲಿತಾಂಶ ಪ್ರಕಟವಾಯಿತು.

ಆಮೇಲೆ ಬಾಕಿ ಇದ್ದಿದ್ದೇ ಅಭ್ಯರ್ಥಿಗಳ ವ್ಯಕ್ತಿತ್ವ ಪರೀಕ್ಷೆ. ಇಂಟರ್‌ವ್ಯೂ ಎಂಬ ಈ ನಾಟಕಕ್ಕೆ 200 ಅಂಕಗಳಿರುತ್ತವೆ. ರಾಜ್ಯ ವಿಧಾನಸಭಾ ಚುನಾವಣೆಗಳು ಘೋಷಣೆಯಾದ ಸಮಯದಲ್ಲೇ ಕೆಪಿಎಸ್‌ಸಿಯು ಅತ್ಯಂತ ತರಾತುರಿಯಲ್ಲಿ ಈ ಇಂಟರ್‌ವ್ಯೂ ನಾಟಕ ನಡೆಸಲು ಹೊರಟಿತ್ತು. ಇದಕ್ಕೆ ಚೇರ್‌ಮೆನ್ ಗೋನಾಳ್ ಭೀಮಪ್ಪನೇ ಕಾರಣ. ಈತ ಮೇ 11 ರಂದು ನಿವೃತ್ತನಾಗುವುದಿತ್ತು, ಹಾಗಾಗಿ ತನಗೆ ಸಿಗುವ ಕಾಲಾವಕಾಶದಲ್ಲೇ ಆದಷ್ಟು ಜನರ ಸಂದರ್ಶನ ನಡೆಸಿ ಡೀಲ್ ಕುದುರಿಸಿಕೊಂಡು ಜಾಸ್ತಿ ಮಾರ್ಕ್ಸ್ ನೀಡುವ ಸ್ಕೀಂ ತಯಾರಿಸಿದ ಭೀಮಪ್ಪ ಈಗ ಸಿಕ್ಕಿಬಿದ್ದಿದ್ದಾನೆ. ಕೆಪಿಎಸ್‌ಸಿ ಮೆಂಬರ್‌ಗಳಾಗಿರುವ ಡಾ. ಕೃಷ್ಣಪ್ರಸಾದ್, ರಂಗಮೂರ್ತಿ, ಡಾ. ಎಂ.ಮಹಾದೇವ್, ಡಾ. ಮಂಗಳಾ ಶ್ರೀಧರ್, ಡಾ. ಎಚ್.ಡಿ. ಪಾಟೀಲ್, ನಿವೃತ್ತ ಐಎಎಸ್ ಅಧಿಕಾರಿಗಳು ಹಾಗೂ ಕೆಪಿಎಸ್‌ಸಿ ಮೆಂಬರ್‌ಗಳಾಗಿರುವ ಕನಿರಾಂ, ವಿದ್ಯಾಶಂಕರ್, ಡಾ. ದಯಾಶಂಕರ್, ಡಾ. ಪಾರ್ಶ್ವನಾಥ್ ಮುಂತಾದವರ ಸಹಕಾರದೊಂದಿಗೇ ನಡೆದಿರುವ ಈ ಹಗರಣಕ್ಕೆ ಸಂಬಂಧಿಸಿದ ಕೆಲ ದಾಖಲೆಗಳನ್ನೂ ಇಲ್ಲಿ ಪ್ರಕಟಿಸಲಾಗಿದೆ.

ಇಂಟರ್‌ವ್ಯೂ ಗೋಲ್‌ಮಾಲ್

ಲಂಚದ ಮೊತ್ತ ಎಷ್ಟು ಎಂಬುದರ ಆಧಾರದ ಮೇಲೆ ಅಭ್ಯರ್ಥಿಗಳಿಗೆ ಕೊಡಬೇಕಾದ ಅಂಕ ಎಷ್ಟು ಎಂಬುದು ನಿರ್ಧಾರವಾಗುವ ಪ್ರಕ್ರಿಯೆಗೆ ಕೆಪಿಎಸ್‌ಸಿಯು ಇಂಟರ್‌ವ್ಯೂ ಎನ್ನುತ್ತದೆ.

ಲಿಖಿತ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದವರು ಲಕ್ಷಾಂತರ ರೂಪಾಯಿ ಲಂಚ ನೀಡಲು ತಯಾರಿದ್ದರೆ ಅಂತವರನ್ನು ಹೆಚ್ಚು ಅಂಕ ಪಡೆದಿರುವ ಅಭ್ಯರ್ಥಿಗಳ ಮಟ್ಟಕ್ಕೆ ತರುವ ದುರವಸ್ಥೆ ಇಲ್ಲಿದೆ. ಅದೇ ರೀತಿ ಲಿಖಿತ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಪಡೆದವರೇನಾದರೂ 'ಹೇಗೂ ನಾವು ಟಾಪ್ ರ್‍ಯಾಂಕ್‌ನಲ್ಲಿದ್ದೇವೆ. ಲಂಚ ಯಾಕೆ ಕೊಡಬೇಕೆಂದು' ಸುಮ್ಮನಿದ್ದು ಬಿಟ್ಟರೆ, ಡೀಲ್ ಕುದುರಿಸಿಕೊಳ್ಳದೆ ಇಂಟರ್‌ವ್ಯೂಗೆ ಹೋದರೆ ಅಂತವರ ಸ್ಥಿತಿ ಕಾಲಕಸ.

ಇಂತಹ ಪ್ರತಿಭಾವಂತರಿಗೆ ಇಂಟರ್‌ವ್ಯೂನಲ್ಲಿ ಕಡಿಮೆ ಅಂಕ ನೀಡಿ ತುಳಿಯುವ ವಿದ್ಯೆ ಕೆಪಿಎಸ್‌ಸಿ ಮೆಂಬರ್‌ಗಳಿಗೆ ಕರಗತವಾಗಿದೆ.

ಕೆಪಿಎಸ್‌ಸಿ ಮೆಂಬರ್‌ಗಳ ಬಂಡತನ ಅದ್ಯಾವ ಮಟ್ಟಕ್ಕಿದೆ ಎಂದರೆ ಲಿಖಿತ



ಲಿಖಿತ ಪರೀಕ್ಷೆಯಲ್ಲಿ ಕಡಿಮೆ, ಇಂಟರ್‌ವ್ಯೂನಲ್ಲಿ ಹೆಚ್ಚು ಅಂಕ ಪಡೆದಿರುವವರು.

ನೋಂದಣಿ ಸಂಖ್ಯೆ	ಹೆಸರು	ಲಿಖಿತ ಪರೀಕ್ಷೆ ಅಂಕ (1800ಕ್ಕೆ)	ಶೇಕಡಾ	ಸಂದರ್ಶನದ ಅಂಕಗಳು (200ಕ್ಕೆ)	ಶೇಕಡ
10296	ಜಯಪ್ಪ	543	30.16	150	75
14443	ಪರಮೇಶಕುಮಾರ್. ವಿ	550	30.55	150	75
13467	ಈರಪ್ಪ ಡಿ. ಪಾಟೀಲ್	651.5	36.19	150	75
16464	ಹೂವಪ್ಪ ವಾಲಿ	687	38.16	150	75
12285	ಹೊನ್ನೇ ಗೌಡ ಎಂ.ಪಿ.	713.5	39.63	150	75
15006	ಬಸವರಾಜಪ್ಪ ವಿ.ಎನ್.	744	41.33	150	.75
10066	ಆನಂದ ಕುಮಾರ ಜಿ.	765.5	42.52	150	75
12962	ಅಂಬಿಕಾ ಎಂ.ಆರ್.	772	42.88	150	75
11206	ಮಹೇಶ್‌ಕುಮಾರ್ ಹೊಳ್ಳ	789	43.83	150	75
14460	ಚೇತನ್ ನಾಯ್ಕ್	822	45.66	150	75
12243	ಕಮಲಾ ಭಾಯಿ ಬಿ.	822.5	45.69	150	75
14277	ಗೀತಾ ಜಿ.	823	45.72	150	75
12356	ಕಾವೇರಿ	826	45.88	150	75
13482	ಅಜಿತ್‌ಕುಮಾರ್ ಜಿ.ಎ.	826.5	45.91	150	75
13020	ಅನಿತಾ ಕೋಡಪುರ	826.5	45.91	150	75
13286	ಆಯಿಷಾ ಖಾನಂ	826.5	45.91	150	75
16806	ಅಬ್ದುಲ್ ಗಫೂರ್	832	46.22	150	75
10163	ಮಂಜಾ ನಾಯ್ಕ್ ಆರ್.	832	46.22	150	75
10515	ಕೃಷ್ಣಮೂರ್ತಿ ಆರ್.	845	46.94	150	75
10523	ಮಾಧ್ವನಂದ	852.5	47.36	150	75
16697	ಆನಂದ್ ಹೊಸೂರ್	852.5	47.36	150	75
10197	ಗದಿಲಿಂಗಪ್ಪ ಎ.	854.5	47.47	150	75
11328	ಗೌತಮ್ ಎ.	858	47.66	150	75
12139	ಬಸವರಾಜ ಯತಾನೂರ್	859.5	47.75	150	75
13927	ಜಗದೀಶಾಚಾರ್ ಜಿ.ವಿ.	863	47.94	160	75
12520	ಗಾಯತ್ರಿ ಸಿ.ಎಚ್.	868	48.22	150	75
13042	ಜಯಣ್ಣ	870	48.33	150	75
10338	ಧನಂಜಯ ಡಿ.ಬಿ.	870	48.33	150	75
14072	ಗೋವಿಂದರಾಜು ವಿ.	871.5	48.41	150	75
14118	ನೀಲಗಂಗಾ	875.5	48.63	150	75
13793	ಕಲೀಂ ಇ.	878	48.77	150	75
11317	ಕಲಾ	883.5	49.8	150	75
16090	ಜಯಿದಾಳಿ ಜಮದಾರ್	886	49.22	150	75
14335	ಹರೀಶ್‌ಕುಮಾರ್ ಬಿ.ವಿ.	891	49.50	150	75
16950	ಗೋಪಾಲ್	892	49.55	150	75
16323	ಬಾಹುಬಲಿ ಹಶ್ಯೆ	897.5	49.86	150	75
13342	ಚೇತನ್‌ಕುಮಾರ್ ಎಂ.ಎಸ್.	899	49.94	150	75

ವಂಚನೆಗೊಳಗಾದವರು

ಹೆಸರು	ಲಿಖಿತ ಪರೀಕ್ಷೆ ಮಾರ್ಕ್ಸ್ (1800ಕ್ಕೆ)	ಸಂದರ್ಶನ ಮಾರ್ಕ್ಸ್ (200ಕ್ಕೆ)
ಎನ್. ರಘು.	1078.5	75
ಕೌಸರ್ ರೇಶ್ಮಾ	1064.5	50
ಚಿದಾನಂದ ಸ್ವಾಮಿ	1062.0	50
ಮಹೇಶ್ ಮಾಲಗತ್ತಿ	1054.5	55
ಹರೀಶ್ ವೈ.ಎನ್.	1054.5	60
ಬಸವಣ್ಣ ಎ.ಜಿ.	1054.5	65
ಶಿಲ್ಪಾನಾಗ್	1049.5	60
ಶಿವಾನಂದ್‌ಮದಾರಖಂಡಿ	1048.5	55
ನವೀನ್‌ಪ್ರಸಾದ್ ಕಟ್ಟಿಮಣಿ	1048.0	60
ಆನಂದ್ ಕುಮಾರ್	1045.0	80
ಕಲ್ಪಾಶ್ರೀ ಸಿ.ಆರ್.	1043.5	60
ಆರ್ ಪ್ರಸಾದ್ ಎಸ್.ಐ.	1043.0	55
ಪೂಜಿತಾ ಕೆ.ಬಿ.	1040.5	80
ಅಜಯ್. ಜಿ	1040.0	55
ರಮೇಶ್ ದೊಡ್ಡಮನಿ	1039.5	50
ಅಶೋಕ್ ತೇಲಿ	1039.0	60
ಕಿರಣ್. ಜಿ	1037.0	50
ರಾಕೇಶ್ ಇ.ಎಸ್.	1037.0	55
ರಮ್ಯ ಸಿ.ಆರ್.	1036.5	50
ಮಧುಚಂದ್ರ ಬಿ.ಆರ್.	1033.0	60
ಭಾಗ್ಯಶ್ರೀ	1033.0	60
ಕಿರಣ್ ಎನ್.ಬಿರಾದಾರ್	1031.0	50
ನಿಶ್ಚೈ ಎನ್.ಕೆ.	1030.0	65
ಸೋಮಶೇಖರ ಎನ್.ಎಸ್.	1023.5	60
ಆರ್. ಮಂಜುಳಾ	1023.0	50
ಮಂಜುನಾಥ ಎನ್.	1022.5	70
ವಿಜಯ ಕುಮಾರ್.ಎಸ್.	1022.0	85
ಮುರಳಿಧರ್ ಸಿ.	1019.5	75
ಸುಮನ್ ಶಿವಶಂಕರ್	1019.0	50
ಪೂರ್ಣಿಮಾ ಎನ್.	1012.0	65
ಪರಮೇಶ್ವರ ಎಂ.ಎಸ್.	1011.0	60
ಡಾ. ಮೈತ್ರಿ	1009.0	75
ಕಿರಣ್ ಎಸ್.	1008.5	
ಪ್ರದೀಪ್ ಕುಮಾರ್	1007.5	50
ಕರುಣಾಕರ	1003.5	60
ಕುನಾಲ್ ಕೆ.	1003.5	70
ರಘುನಾಥ್‌ಗೌಡ ಎಂ.ಎಸ್.	1002.0	60
ರಾಜು ಎಸ್.ಕೆ.	1001.5	75
ಕಿರಣ್‌ಕುಮಾರ್ ಬಿ.ಎಸ್.	1001.0	60
ಅಂಬರೀಷ್	1001.0	80


[K]PSC ಸದಸ್ಯೆ ಮಂಗಳಾ ಶ್ರೀಧರ್

[ಬ್]ರಾಹ್ಮಣರಾ-ನಾಯಕ ಜನಾಂಗವಾ?



[ಬಿ]ಜೆಪಿ ಸರ್ಕಾರವಿದ್ದಾಗ ಕರ್ನಾಟಕ ಲೋಕಸೇವಾ [ಆ]ಯೋಗದ ಮೆಂಬರ್ ಆಗಿ ನೇಮಕಗೊಂಡಿರುವ ಬಿಜೆಪಿ [ಯ] ಮಂಗಳಾ ಶ್ರೀಧರ್ ತಾನು 'ನಾಯಕ' ಜಾತಿಗೆ [ಸೇರಿ]ದವರೆಂದು ಹೇಳಿಕೊಂಡಿದ್ದಾರೆ!

[ಆದ]ರೆ 'ಲಂಕೇಶ್'ಗೆ ಈಗ ಸಿಕ್ಕಿರುವ ಕೆಲ ದಾಖಲೆಗಳು [ಬ್]ರಾಹ್ಮಣ ಜನಾಂಗದವರಾಗಿದ್ದು ಸುಳ್ಳು ಜಾತಿ ಪತ್ರ [ನೀಡಿ] ಪರಿಶಿಷ್ಟ ಪಂಗಡದ ಸೌಲಭ್ಯ [ವನ್ನು] ದುರುಪಯೋಗ ಮಾಡಿ[ಕೊಂಡಿ]ರುವ ಸಾಧ್ಯತೆಯನ್ನು ತೋರುತ್ತಿವೆ.



[ಮ]ಂಗಳಾ ಶ್ರೀಧರ್ ಈಗ್ಗೆ ಹತ್ತು [ವರ್ಷ]ಗಳ ಹಿಂದೆ ಬಿಬಿಎಂಪಿ [ಚುನಾ]ವಣೆಗೆ ಸ್ಪರ್ಧಿಸಿ ಗೆದ್ದು, ನಂತರ [...]ರ ಅಸೆಂಬ್ಲಿ ಚುನಾವಣೆಯಲ್ಲಿ [ನಾ]ರಾಯನಪುರ ಕ್ಷೇತ್ರದಿಂದ ನಿಂತು [ಸೋ]ತಿದ್ದರು. ಆಮೇಲೆ ಮುಖ್ಯಮಂತ್ರಿ [ಯಡಿ]ಯೂರಪ್ಪನ ಕೃಪೆಯಿಂದ ರಾಜ್ಯ [ಎಸ್‌ಸಿ]-ಎಸ್‌ಟಿ ಅಭಿವೃದ್ಧಿ ನಿಗಮದ [ಅಧ್ಯಕ್ಷೆ]ಯಾಗಿ ಇದೊಂದೆಡೆ ಇರಲಿ.

ಆದರೆ ಈಕೆ ಶಾಲಾದಿನಗಳಿಂದ ಆರಂಭಿಸಿ ಈಗ ಕೆಪಿಎಸ್‌ಸಿ ಸದಸ್ಯತ್ವ ಗಿಟ್ಟಿಸಿಕೊಂಡ ಪ್ರತಿ ಹಂತದಲ್ಲೂ ತಾನೊಬ್ಬ ಪರಿಶಿಷ್ಟ ಪಂಗಡಕ್ಕೆ ಸೇರಿದವರೆಂದೇ ಬಿಂಬಿಸಿಕೊಂಡು ಬಂದಿದ್ದಾರೆ. ಅದಕ್ಕೆ ಪೂರಕವಾದ ದಾಖಲೆಗಳನ್ನು ಪಡೆದು ಬಳಸುತ್ತಾ ಬಂದಿದ್ದಾರೆ.

ಆದರೆ 'ಲಂಕೇಶ್' ಕೈಗೆ ಸಿಕ್ಕಿರುವ ಇನ್ನೊಂದಿಷ್ಟು ದಾಖಲೆಗಳು ಬೇರೆಯದೇ ಕತೆ ಹೇಳುತ್ತಿವೆ.

ಮುನಿಯಪ್ಪನ ಕತೆ

ಮಂಗಳಾರ ತಾಯಿ ಇಂದುಮುಖಿ ಯಾನೆ ಇಂದುಮತಿ ಎಂಬುವರು ಕರಾವಳಿ ಮೂಲದವರಾಗಿದ್ದು ಬ್ರಾಹ್ಮಣ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಈ ಇಂದುಮುಖಿಯು ಅನೇಕ ವರ್ಷ ಕಾಲ ಬೆಂಗಳೂರಿನ ಜಯನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಹೆಡ್‌ನರ್ಸ್ ಆಗಿ ಕೆಲಸ ಮಾಡುತ್ತಿದ್ದರು. ಆಗ ಬಿ.ಎಲ್. ಮುನಿಯಪ್ಪ ಎಂಬ ಖಾಸಗಿ ಶಾಲಾ ಮಾಲೀಕನೊಬ್ಬನ ಸ್ನೇಹ ಬೆಳೆಸಿದ ಇಂದುಮುಖಿ ನಂತರ ಆತನೊಂದಿಗೇ ಜೀವನ ನಡೆಸಿದರು.

ಈ ಮುನಿಯಪ್ಪ ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿ ಮತ್ತು ಈ ಮಹಾನುಭಾವನಿಗೆ ಅಷ್ಟರಲ್ಲಾಗಲೇ ಮೂವರು ಪತ್ನಿಯರಿದ್ದರೆಂದು ಹೇಳಲಾಗಿದೆ. ಬೆಂಗಳೂರಿನ ಎಸ್‌ಜೆ ಪಾಳ್ಯದಲ್ಲಿ ಕೆಜೆ ಕಾನ್ವೆಂಟ್ ನಡೆಸುತ್ತಿದ್ದ ಮುನಿಯಪ್ಪನನ್ನು ಮಂಗಳಾರವರ ಶಾಲಾದಾಖಲೆಗಳಲ್ಲಿ ಗಾರ್ಡಿಯನ್ ಅರ್ಥಾತ್ ಪೋಷಕ ಎಂದೇ ನಮೂದಿಸಲಾಗಿದೆ. ಇದರರ್ಥ ಮುನಿಯಪ್ಪ ಮಂಗಳಾರಿಗೆ ಜನ್ಮ ನೀಡಿದ ತಂದೆಯಲ್ಲ ಎಂದಾಯಿತು.

ಈ ಅನುಮಾನವನ್ನು ಇನ್ನಷ್ಟು ಬಲಪಡಿಸುವ ಇನ್ನೊಂದು ದಾಖಲೆಯೂ ಇದೆ. ಮಂಗಳಾರ ತಾಯಿ ಇಂದುಮುಖಿ ಮಾಡಿಸಿಕೊಂಡಿರುವ ರೇಷನ್ ಕಾರ್ಡಿನಲ್ಲಿ ಮುನಿಯಪ್ಪನ ಹೆಸರಿಲ್ಲ. ಅದರ ಬದಲಾಗಿ ಇಂದುಮುಖಿಯೇ ಅವರ ಕುಟುಂಬದ ಮುಖ್ಯಸ್ಥೆ ಎಂಬಂತೆ ದಾಖಲಾಗಿದೆ. ಜೊತೆಗೆ ಆಕೆಯ ಮಕ್ಕಳಾದ ವಿಜಯಚಂದ್ರ, ಉದಯಚಂದ್ರ, ಮದನಚಂದ್ರ ಹಾಗೂ ಮಂಗಳಾರ ಹೆಸರುಗಳಿವೆ.

ಅಷ್ಟೇ ಅಲ್ಲದೆ....

ಕೆ. ಪುರುಷೋತ್ತಮ ಕಾಮತ್ ಎಂಬ ನಾಲ್ಕನೇ ಗಂಡುಮಗುವಿನ ಹೆಸರೂ ಈ ರೇಷನ್ ಕಾರ್ಡಿನಲ್ಲಿದೆ.

ಮಂಗಳಾರ ನಿಜವಾದ ಜಾತಿ ಯಾವುದೆಂಬ ಅನುಮಾನ ಬರುವುದು ಇಲ್ಲೇ....!

ಇಡೀ ಇಂಡಿಯಾದಲ್ಲಿ ಪರಿಶಿಷ್ಟ ಪಂಗಡದವರಲ್ಲಿ 'ಕಾಮತ್' ಎಂಬ ಹೆಸರು ಇಲ್ಲವೇ ಇಲ್ಲ. ಮೇಲ್ನೋಟಕ್ಕೆ ಗೊತ್ತಾಗುವಂತೆ 'ಕಾಮತ್' ಪದ ಬ್ರಾಹ್ಮಣ ಜಾತಿಗೆ ಸಂಬಂಧಿಸಿದ್ದು.


ಇದರರ್ಥ ಇಷ್ಟೆ.

ಮಂಗಳಾ ಮತ್ತವರ ತಾಯಿ ಸೇರಿದಂತೆ ಆಕೆಯ ಸೋದರರೆಲ್ಲಾ ಬ್ರಾಹ್ಮಣ ಜಾತಿಗೆ ಸೇರಿದವರು. ಆದರೆ ಯಾವಾಗ ಇಂದುಮುಖಿ ಪರಿಶಿಷ್ಟ ಪಂಗಡದ ಬಿ.ಎಲ್. ಮುನಿಯಪ್ಪನ ಜೊತೆ ಬದುಕಲು ಶುರು ಮಾಡಿದರೋ ಆಗ ಆ ಪಂಗಡಕ್ಕಿರುವ ಮೀಸಲಾತಿಯ ಸೌಲಭ್ಯಗಳನ್ನು ಬಳಸಿಕೊಳ್ಳಲು ಈ ಮಂಗಳಾ ಕೂಡ ತಾನು ಎಸ್‌ಟಿ ಎಂದು ಸುಳ್ಳು ಮಾಹಿತಿ ನೀಡಿದ್ದಾರೆ. ಮಂಗಳಾರ ಶಾಲಾ ದಾಖಲೆಗಳಲ್ಲಿ ತಂದೆಯ ಉದ್ಯೋಗ ಎನ್ನುವ ಕಾಲಂನಲ್ಲಿ 'ಪತ್ರಕರ್ತ' ಎಂದು ನಮೂದಿಸಿದ್ದಾರೆ. ಆದರೆ ಮುನಿಯಪ್ಪ ಪತ್ರಕರ್ತನಲ್ಲ. ಹಾಗಾದರೆ ಮಂಗಳಾರ ಪತ್ರಕರ್ತ ತಂದೆ ಯಾರು? ಪುರುಷೋತ್ತಮ ಕಾಮತ್ ಮಂಗಳಾರ ಸೋದರ ಹೇಗಾಗುತ್ತಾನೆ?

ಮುಖ್ಯಮಂತ್ರಿ ಸಿದ್ದರಾಮಯ್ಯ ಈಗ ಕೆಪಿಎಸ್ ನೇಮಕಾತಿಯಲ್ಲಿ ನಡೆದಿರುವ ಭ್ರಷ್ಟಾಚಾರಗಳ ಬಗ್ಗೆ ಸಿಐಡಿ ತನಿಖೆಗೆ ಆದೇಶಿಸಿದ್ದಾರೆ.

ಇದರೊಂದಿಗೆ ಕೆಪಿಎಸ್‌ಸಿ ಮೆಂಬರ್ ಮಂಗಳಾ ಶ್ರೀಧರ್‌ರವರ ಅಸಲಿ ಜಾತಿಯ ಬಗ್ಗೆಯೂ ತನಿಖೆಗೆ ಆದೇಶಿಸುವುದು ಉತ್ತಮ.

ಮಂಗಳಾ ಶ್ರೀಧರ್‌ರವರು ನಾಯಕ ಸಮುದಾಯಕ್ಕೆ ಸೇರಿದವರಲ್ಲ, ಅದರ ಬದಲಾಗಿ ಆಕೆ ಬ್ರಾಹ್ಮಣ ಸಮುದಾಯದವರು ಎಂಬುದಾಗಿ ಕರ್ನಾಟಕ ವಾಲ್ಮೀಕಿ ನಾಯಕ ಮಹಾ ಸಂಘವು ಲಿಖಿತ ದೂರೊಂದನ್ನು ಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್‌ಗೆ ನೀಡಿದೆ. ಈ ಶಾಸನಬದ್ಧ ಸಂಸ್ಥೆಯು ದೂರನ್ನು ಕುರಿತು ಒಂದು ವಸ್ತುನಿಷ್ಠ ತನಿಖೆ ನಡೆಸುವುದು ಸೂಕ್ತವೆನಿಸುತ್ತದೆ.



ಮಂಗಳಾರ ಶಾಲಾ ಪತ್ರದಲ್ಲಿ ST ಎಂದು ನಮೂದಿಸಿರುವುದು

Application for Admission

ST

The Headmaster/ Headmistress .... School

Name of the pupil in full (Block letters): B.M. Mangala [MANGALA]

Boy or Girl: Girl

Date of birth: 19-9-74

Date of birth (in words): Nineteen nine thousand nine hundred Seventy

Place of birth: Village / Town: Bangalore South / Taluk: / District: Bangalore

Father's name: B.L. Muniyappa — Living/ Not living

Mother's name: Indumuki — Living/ Not living

Educational level of Father: MA


Educational level of Mother: BA

Father's occupation (ತಂದೆಯ ಉದ್ಯೋಗ): Journalist

Mother's occupation (ತಾಯಿಯ ಉದ್ಯೋಗ)

Parent's annual income (ತಂದೆ ತಾಯಿಯ ವಾರ್ಷಿಕ ಆದಾಯ)

Number of dependents (ಅವಲಂಬಿಸಿಕೊಂಡಿರುವವರ ಸಂಖ್ಯೆ)



ರೇಷನ್‌ಕಾರ್ಡ್‌ನಲ್ಲಿ ಮಂಗಳಾರ ಸೋದರ 'ಪುರುಷೋತ್ತಮ್ ಕಾಮತ್' ನ ಹೆಸರಿದೆ

Document no VIII

17 DEC

GAS card

Indumathi

Vijayachandra

Uday chandra

...ಮಲ್ಲಿ ಜುಜುಬಿ 500, 600 ಅಂಕ ತೆಗೆದವರಿಗೂ, [ಅವ]ರಿಗೆ ಉದ್ಯೋಗ ಸಿಗುವ ಗ್ಯಾರಂಟಿ ಇಲ್ಲದಿದ್ದರೂ [...] ಹಿಂದು ಇಂಟರ್‌ವ್ಯೂನಲ್ಲಿ 150ರ ತನಕ ಅಂಕ [ನೀಡ]ಲಾಗಿದೆ.

[ಇ]ದಂತೆ ಕಡಿಮೆ ಅಂಕ ಪಡೆದ ಅಭ್ಯರ್ಥಿಗಳ [...]ಗಳನ್ನು ಪರಿಗಣಿಸಿ ಲಿಖಿತ ಪರೀಕ್ಷೆಯಲ್ಲಿ ಹೆಚ್ಚು [ಅಂಕ] ಪಡೆದವರನ್ನು ಓವರ್‌ಟೇಕ್ ಮಾಡುವಂತೆ [ಮಾಡಿ]ಕೊಳ್ಳುವ ಇನ್ನೊಂದು ವಂಚಕ ವಿಧಾನವನ್ನು [ಗೋನಾ]ಳ್ ಭೀಮಪ್ಪ ಪರಿಚಯಿಸಿದ್ದಾನೆ. ಕೆಪಿಎಸ್‌ಸಿ [...] ಈಗಾಗಲೇ ಮಾಜಿ ಅಧ್ಯಕ್ಷ [...] ಎಸ್. ಕೃಷ್ಣ ಜೈಲಿಗೆ ಹೋಗಿ [ಬಂದಿ]ದ್ದಾನೆ. ಈಗ ಬಹುಶಃ ಅವನಿಗಿಂತ [...] ಗೋನಾಳ್ ಭೀಮಪ್ಪನ ಸರದಿ [...] ಕಾಣುತ್ತದೆ.



[...] ಇಂಟರ್‌ವ್ಯೂ ಗೋಲ್‌ಮಾಲ್ [...] ನಡೆದಿದೆ ಎಂಬುದನ್ನು, ಸಾಬೀತು [...] ಅಭ್ಯರ್ಥಿಗಳ ಪಟ್ಟಿಯನ್ನು, [...] ರಿಜಿಸ್ಟರ್ ನಂಬರ್, [...] ಹಾಗೂ [...] ಪಡೆದ ಅಂಕಗಳ ಸಹಿತ 'ಲಂಕೇಶ್' ಇಲ್ಲಿ ಪ್ರಕಟಿಸುತ್ತಿದೆ.

ಸಿಐಡಿ ಗಮನಿಸಲಿ

ಈ ಪಟ್ಟಿಯಲ್ಲಿನ ಅಂಶಗಳನ್ನೇ ಆಧಾರವಾಗಿಟ್ಟುಕೊಂಡರೆ ಸಾಕು. ಕೆಪಿಎಸ್‌ಸಿಯ ಬ್ರಹ್ಮಾಂಡ ಭ್ರಷ್ಟಾಚಾರ ಗೋಚರವಾಗುತ್ತದೆ.

ಮಾಜಿ ಅಧ್ಯಕ್ಷ ಗೋನಾಳ್ ಭೀಮಪ್ಪ ಖುದ್ದಾಗಿ ನಡೆಸಿರುವ ಇಂಟರ್‌ವ್ಯೂನಲ್ಲಿ ಏನೇನು ಎಷ್ಟೆಷ್ಟು ಗೋಲ್‌ಮಾಲ್ ನಡೆದಿದೆ ಎಂಬುದಕ್ಕೆ ಈ ಪಟ್ಟಿಯೇ ಸಾಕ್ಷಿಯಾಗಿದೆ.

ಅಡ್ವಾಣಿ-ಸಂತೋಷ್ ಲಾಬಿ

ಡಾ. ಮಂಗಳಾ ಶ್ರೀಧರ್‌ಗೆ ಕೆಪಿಎಸ್‌ಸಿ ಸದಸ್ಯತ್ವ ನೀಡುವಂತೆ ಯಡಿಯೂರಪ್ಪನ ಮೇಲೆ ಪ್ರಭಾವ ಬೀರಿದ್ದೇ ಬಿಜೆಪಿ ಕಾರ್ಯದರ್ಶಿ RSS ಸಂತೋಷ್!

ಅಷ್ಟೇ 2011 ರ ಕೆಪಿಎಸ್ ನೇಮಕಾತಿಯಲ್ಲೂ ತಮ್ಮ ಪರಿಚಿತ 'ಬ್ರಾಹ್ಮಣ' ಅಭ್ಯರ್ಥಿಗಳ ಪರವಾಗಿ ಈ ಸಂತೋಷ್ ಲಾಲ್ ಕೃಷ್ಣ ಅಡ್ವಾನಿ ತನಕ ಹೋಗಿ ರೆಕಮೆಂಡ್ ಮಾಡಿಸಿರುವ ಸಂಗತಿಯೂ ಕೇಳಿಬರುತ್ತಿದೆ.

ಭಾವನಾ ಭಟ್ ಮತ್ತು ವಂದನಾ ಭಟ್ ಎಂಬ ಸೋದರಿಯರ ಕತೆ ಇದು. ಜೊತೆಗೆ ಭಾವನಾಳ ಪತಿ ಸೂರಜ್ ಎಂಬಾತನೂ ಇದರ ಫಲಾನುಭವಿಯಾಗಿದ್ದಾನೆ.

ಈ ಭಾವನಾಳ ರಿಜಿಸ್ಟರ್ ನಂಬರ್ 14017 ಆಗಿದ್ದು ಲಿಖಿತ ಪರೀಕ್ಷೆಯಲ್ಲಿ 1016 ಅಂಕ ಪಡೆದಿದ್ದಾಳೆ. ಈಕೆಗೆ ಇಂಟರ್‌ವ್ಯೂನಲ್ಲಿ (ಸಂಖ್ಯೆ 95) 200 ಕ್ಕೆ 140 ಅಂಕ ನೀಡಿ ತಹಶೀಲ್ದಾರ್ ಹುದ್ದೆ ಸಿಗುವಂತೆ ಮಾಡಲಾಗಿದೆ.

ಭಾವನಾಳ ಗಂಡ ಸೂರಜ್ ಲಿಖಿತ ಪರೀಕ್ಷೆಯಲ್ಲಿ 1089.5 (ರಿಜಿಸ್ಟರ್ ನಂ. 13699) ಅಂಕ ಪಡೆದಿದ್ದು ಈತನಿಗೆ ಇಂಟರ್‌ವ್ಯೂನಲ್ಲಿ (ಸಂಖ್ಯೆ 729) 150 ಅಂಕ ದಯಪಾಲಿಸಿ ಅಸಿಸ್ಟೆಂಟ್ ಕಮೀಷನರ್ ಹುದ್ದೆಗೆ ತರಲಾಗಿದೆ.

ಇನ್ನು ಭಾವನಾಳ ತಂಗಿ ವಂದನಾ ಭಟ್‌ಗೂ ಅಸಿಸ್ಟೆಂಟ್ ಕಮಿಷನರ್ ಹುದ್ದೆ ಸಿಕ್ಕಿದೆ. ವಂದನಾ ಲಿಖಿತ ಪರೀಕ್ಷೆಯಲ್ಲಿ 1106.5 ಅಂಕ (ರಿಜಿಸ್ಟರ್ ನಂ. 14647) ಗಳಿಸಿದ್ದು ಇಂಟರ್‌ವ್ಯೂನಲ್ಲಿ 150 ಅಂಕ ನೀಡಲಾಗಿದೆ (ಸಂಖ್ಯೆ 765). ಕೆಪಿಎಸ್‌ಸಿಯಲ್ಲಿ ಈ [...] ಎಂಬಾತನ ಕುಟುಂಬದ ನಾಲ್ವರಿಗೆ ಇದೇ ರೀತಿ, ಸಹಕೂಲ ಕಲ್ಪಿಸಿ ಅದೊಂದು ಹಗರಣವಾಗಿತ್ತು. ಈಗ ಭಾವನ-ವಂದನಾ ಹಾಗೂ ಸೂರಜ್ ಎಂಬ ಒಂದೇ ಕುಟುಂಬದವರಿಗೆ ದೊಡ್ಡ ಹುದ್ದೆಗಳು ದಕ್ಕುವಂತೆ ಲಾಬಿ ನಡೆದಿದೆ.

ಲಿಖಿತ ಪರೀಕ್ಷೆಯಲ್ಲಿ 1000 ಕ್ಕೂ ಹೆಚ್ಚು ಅಂಕ ಪಡೆದಿದ್ದರೂ ಹಣ ನೀಡದಿದ್ದ, ಪ್ರಭಾವ ಇರದಿದ್ದ ನಿಷ್ಪಾಪಿಗಳಿಗೆ ಇಂಟರ್‌ವ್ಯೂನಲ್ಲಿ ಜುಜುಬಿ 50, 60 ಅಂಕ ನೀಡಿರುವ ಕೆಪಿಎಸ್‌ಸಿ ಮೆಂಬರ್‌ಗಳು ಈ RSS ಹಿನ್ನೆಲೆಯ ಸೋದರಿಯರಿಗೆ ಇಂಟರ್ ವ್ಯೂನಲ್ಲಿ ನೂರೈವತ್ತು ಅಂಕ ನೀಡಿ ಅನುಕೂಲ ಮಾಡಿಕೊಟ್ಟಿದ್ದಾರೆ.

ಸಿಐಡಿ ತನಿಖೆದಾರರು ಈ ಕುಟುಂಬದ ಅಭ್ಯರ್ಥಿಗಳ ಲಿಖಿತ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಒಮ್ಮೆ ಚೆಕ್ ಮಾಡುವುದೊಳಿತು.

ಸಿಐಡಿ ಅಧಿಕಾರಿಗಳು ಗೋನಾಳ್ ಭೀಮಪ್ಪ ಮಂಗಳಾ ಶ್ರೀಧರ್ ಸೇರಿದಂತೆ ಇಡೀ ಟೀಂನವರ ಆಸ್ತಿ ಪಾಸ್ತಿಗಳು, [...] ಫೋನ್ ಕಾಲ್ ರೆಕಾರ್ಡ್‌ಗಳನ್ನು ಪತ್ತೆ ಹಚ್ಚಿದರೆ...

ಈ ಭಸ್ಮರ ತಂಡ ಜೈಲಿಗೆ ಹೋಗುವುದಲ್ಲದೆ ನೊಂದವರಿಗೆ ನ್ಯಾಯ ಸಿಗಲು ಸಾಧ್ಯ.

● [illegible]

'ಕ್ರೌಡ್ ಎಂದರೆ ಕಿರಿಕಿರಿ; ಕಾವ್ಯವೇ ನನ್ನ ಶಕ್ತಿ'

ಎಚ್.ಎಸ್. ಮುಕ್ತಾಯಕ್ಕ

ಕರ್ನಾಟಕದ ಜನಪರ ಸಾಹಿತ್ಯ-ಸಾಂಸ್ಕೃತಿಕ ಪರಂಪರೆ, ಚಿಂತನೆಗಳಿಗೆ ದನಿಗೂಡಿಸಿದವರ ಸಂದರ್ಶನ ಮಾಲಿಕೆ ಇದು. ಆಧುನಿಕ ಕನ್ನಡದ ಪ್ರಮುಖ ಕವಿಯತ್ರಿ ಎಚ್.ಎಸ್. ಮುಕ್ತಾಯಕ್ಕನವರ ಬದುಕು ಹಾಗೂ ಬರಹ ಕುರಿತಂತೆ ಯುವ ಲೇಖಕ ಆರೀಫ್ ರಾಜಾ ನಡೆಸಿರುವ ಸಂದರ್ಶನ ಇಲ್ಲಿದೆ.

ಆರಾ: ಮೊದಲಿಗೆ, ಶಾಂತರಸರ ಮಗಳಾಗಿ ನೀವು ಅನುಭವಿಸಿದ ನಿಮ್ಮ ಬಾಲ್ಯದ ಕುರಿತು ಸ್ವಲ್ಪ ಹೇಳಿ..

ಮು: ನಾನು ಹುಟ್ಟಿದ್ದು ಕೊಪ್ಪಳದಲ್ಲಿ, ನಮ್ಮ ಅಮ್ಮ ಟೀಚರ್ ಇದ್ರು. ಆದ್ರೆ ಅಪ್ಪ ಇಲ್ಲೆ ರಾಯಚೂರಲ್ಲೆ ಕೆಲ್ಸಮಾಡ್ತಿದ್ರು. ಆಮೇಲೆ ಅಮ್ಮನಿಗೆ ರಾಯಚೂರಿಗೆ ವರ್ಗಾ ಆಯ್ತು, ಆದ್ದರಿಂದ ನನ್ನ ಬಾಲ್ಯ ಶಿಕ್ಷಣದಿಂದ ಹಿಡಿದು ಪದವಿ ಶಿಕ್ಷಣದವರೆಗೆ ಇಲ್ಲೇ ಕಲ್ತದ್ದು. ಮುಂದೆ ಎಮ್.ಎ. ಮಾತ್ರ ಧಾರವಾಡದಾಗ ಮಾಡ್ಕೊಂಡೆ. ನಮ್ತಂದೆ ತಾಯಿ ಇಬ್ರೂ ಶಿಕ್ಷಕ ವೃತ್ತೀಲಿದ್ರು. ಅಂಥ ಹೇಳಿಕೊಳ್ಳುವಂಥ ಶ್ರೀಮಂತಿಕೆ ಏನೂ ಇರ್ಲಿಲ್ಲ, ಹಾಗಂತ ಅಷ್ಟೊಂದು ಬಡತನಾನೂ ಇರ್ಲಿಲ್ಲ, ಒಂಥರ ಮಧ್ಯಮ ಸ್ಥಿತಿ. ಹಿಂಗಿರೋವಾಗ ನಮ್ಗೆ ಅಂಥ ದೊಡ್ಡ ಆಸೆಗಳೇನೂ ಇರ್ಲಿಲ್ಲ, ಅದನ್ನ ನಮ್ತಂದೆ ತಾಯಿ ಬೆಳಿಯೋಕೂ ಬಿಡ್ಲಿಲ್ಲ, ಇದ್ದದ್ರಲ್ಲೇ ತೃಪ್ತಿಯಿಂದ ಬಾಳೋದನ್ನು ಅವ್ರು ಹೇಳಿಕೊಡ್ತಿದ್ರು.

ಅಪ್ಪ ಕವಿಯಾದ್ದರಿಂದ ಮನಿಗೆ ಯಾವಾಗ್ಲು ಕವಿಗಳು, ಕಲಾವಿದರು, ಸಂಗೀತಗಾರರು, ನಾಟಕಕಾರರು ಬಹಳಷ್ಟು ಜನ ಬರುತ್ತಿದ್ರು, ಈ ಭಾಗದಲ್ಲಿ ವೃತ್ತಿರಂಗಭೂಮಿಯ ನಾಟಕಗಳನ್ನಾಡಿದಾಗ ಕಲಾವಿದರೆಲ್ಲಾ ನಮ್ಮನಿಗೆ ಬಂದೇ ಹೋಗವ್ರು. ನಾವು ನಾಲ್ಕು ಜನ ಮಕ್ಳು. ನಾನು,ಇಬ್ರು ತಮ್ಮಂದ್ರು ಒಬ್ಬ ತಂಗಿ. ಅಪ್ಪ ಯಾವುದೇ ಕಾರ್ಯಕ್ರಮ ಆದ್ರೂ ನಮ್ಮನ್ನೆಲ್ಲ ಕರ್ಕೊಂಡು ಹೋಗುತ್ತಿದ್ದ. ಹಿಂಗಾಗಿ ನಮ್ಗೆ ಬೇಕೊ ಬೇಡ್ವೋ ಕಲಾವಿದರ, ಕವಿಗಳ, ಗಾಯಕರ ಹಾಡು, ಮಾತು, ಕಾವ್ಯ, ಸಾಹಿತ್ಯದ ಚರ್ಚೆಗಳು ನಮ್ಮ ಕಿವಿ ಮೇಲೆ ಬೀಳ್ತಿದ್ವು. ಹಿಂಗಾಗಿ ನನಗೆ ಅರಿವಿಲ್ಲದೆ ಅಭಿರುಚಿ ಒಲವು ತಾನಾಗೇ ಮೂಡಿದ್ವು. ಆದ್ರೆ ನಾನು



ಚಿಕ್ಕ ಹುಡುಗಿ ಆಗಿದ್ದಾಗ ಬಹುಶಃ ಐದಾರನೆ ತರಗತಿಯಲ್ಲಿ ಓದೊವಾಗ ಅಪ್ಪ ಯಾವುದಾದ್ರು ಊರಿಗ ಹೋಗಿ ಬರೋವಾಗ, ಕತೆಗಳ ಪುಸ್ತಕಗಳನ್ನು ತಂದು ಕೊಡ್ತಿದ್ದ. ನನಗೆ ಆಟ ಆಡೋದಂದ್ರೆ ಇಷ್ಟ, ಹಾಗಾಗಿ ಓದೋ ಇಷ್ಟ ಆಗ್ತಿದ್ದಿಲ್ಲ, ಆಗೆಲ್ಲಾ ಅಪ್ಪ 'ನಿನಗ ಸಿನಿಮಾ ತೋರಸ್ತೀನಿ, ಆಟದ ಸಾಮಾನು ಕೊಡುಸ್ತೀನಿ, ತಿನ್ನಾಕ ಕೊಡುಸ್ತೀನಿ' ಅಂತೆಲ್ಲಾ ಆಮಿಷ ತೋರ್ಸಿ ನನ್ನನ್ನು ಕತೆ ಓದಾಕ ಹಚ್ಚುತ್ತಿದ್ದ. ಹೀಗೆ ಓದೋ ಸಂಸ್ಕಾರ ಶುರು ಆಯ್ತು.

ಆರಾ: ಕುತೂಹಲಕ್ಕೆ ಕೇಳ್ತಿದಿನಿ. ನಿಮ್ಮ ತಂದೆಯವರು ಒಬ್ಬ ಕವಿ ಅಂತ ನಿಮ್ಮ ಅರಿವಿಗೆ ಬಂದದ್ದು ಯಾವ ವಯಸ್ಸಿನಲ್ಲಿ? ಯಾಕಂದ್ರೆ ಕುವೆಂಪು ಎಷ್ಟೋ ದೊಡ್ಡ ಕವಿ ಆಗಿದ್ದರೂ ತೇಜಸ್ವಿಯವರಿಗೆ ಅವರ ಬಾಲ್ಯದಲಿ ಒಬ್ಬ ಅಪ್ಪ ಮಾತ್ರ ಆಗಿ ಕಂಡಿದ್ರು..

ಮು: ನನಗೆ ಅಪ್ಪ ಕವಿ ಅಂತೇನು ಗೊತ್ತಿರಲಿಲ್ಲ, ಆದ್ರೆ ಏನೋ ವಿಶೇಷ ವ್ಯಕ್ತಿ ಬೇರೆಯವರಿಗಿಂತ ಭಿನ್ನ ಆದಾರೆ ಅನ್ನಿಸ್ತಿತ್ತು, ಯಾಕಂದ್ರೆ ಬೇರೆಯವರ ಮನೆಗೆ ಬರಲಾರದಷ್ಟು ಜನ ನಮ್ಮನಿಗೆ ಬರ್ತಿದ್ರು, ಇದೆಲ್ಲ ನನಗೆ ಐದಾರನೇ ವಯಸ್ಸಿಗೇ ಅರಿವಿಗೆ ಬಂದಿತ್ತು.

ಮುಂದೆ ನಾನು ಅಪ್ಪ ತಂದು ಕೊಟ್ಟ ಕತೆಗಳನ್ನ ಓದೋಕೆ ಶುರು ಮಾಡಿದ ಮೇಲೆ ನಾನು ಓದಿದ ಕತೆಯನ್ನು ರಾತ್ರಿ ಅಪ್ಪ ಮನಿಗೆ ಬಂದಮ್ಯಾಲೆ ಹೇಳಬೇಕಿತ್ತು, ಆರಂಭದಲ್ಲಿ ಆಮಿಷಗಳಿಗಾಗಿ ಓದುತ್ತಿದ್ದ ನಾನು ಬರುಬರುತ್ತಾ ಅದನ್ನೆಲ್ಲಾ ಮೀರಿ ಕತೆ ಓದುವುದಕ್ಕೆ ಅಡಿಕ್ಟ್ ಆಗಿಬಿಟ್ಟೆ.

ಅಪ್ಪ ಯಾವುದಾದ್ರು ಊರಿಗೆ ಹೋಗಿಬಂದರೆ 'ಯಾವ ಕತೆ ಪುಸ್ತಕ ತಂದಿ?' ಅಂತ ಕೇಳ್ತಿದ್ದೆ. ಆತ 'ನೀನೊಂದು ಪುಸ್ತಕದ ದೆವ್ವ' ಅಂದುಬಿಡ್ತಿದ್ರು. ಹಿಂಗ ಏಳೆಂಟನೇ ತರಗತಿಯಿಂದಲೇ ಓದೋ ಗೀಳು ಅಂಟಿಬಿಟ್ಟಿತು. ನಮ್ಮ ತಾಯಿಗೆ ಸಾಹಿತ್ಯದ ಓದು ಅಂದ್ರೆ ಇಷ್ಟ ಇದ್ರೂ ಕೂಡ ಶಾಲೆ ಪುಸ್ತಕ ಓದು ಮೊದ್ಲು ಅಂತ ಹೇಳ್ತಿದ್ಳು, ಆದ್ರೆ ನಾನು ಶಾಲೆ ಪುಸ್ತಕದಲ್ಲಿ ಕತೆ ಪುಸ್ತಕ ಇಟ್ಟು ಅಮ್ಮನಿಗೆ ಗೊತ್ತಾಗದಂಗ ಓದುತ್ತಿದ್ದೆ. ಅಪ್ಪನಿಗೆ ಇದು ಗೊತ್ತಾದ್ರೂ ಏನೂ ಅಂತಿದ್ದಿಲ್ಲ, 'ನೀನು ಮುಂದ ನೋಡಿ ಓದು. ನಾನೇನು ನಿಮ್ಮಮ್ಮಗ ಹೇಳೋದಿಲ್ಲ' ಅಂತಿದ್ದ. ನಾನೊಬ್ಬ ಕವಯಿತ್ರಿ ಆಗ್ಬೇಕು ಅಂತ ಅವರಿಗೆ ಆಸೆ ಇತ್ತು, ನಾನು ಓದಿದ ಪುಸ್ತಕಗಳೆ ನನ್ನನ್ನು ಸಾಹಿತ್ಯ ರಚನೆಗೆ ಆಕರ್ಷಿಸಿದವು.



ಮುಂದೊಂದು ದಿನ ನನ್ನ ಬದುಕು ಅನಿರೀಕ್ಷಿತ ತಿರುವು ಪಡೆದುಕೊಂಡಾಗ ಪುಸ್ತಕಗಳೇ ನನ್ನ ಪಾಲಿನ ಸಂಗಾತಿಗಳಾದವು, ಒಂಟಿತನದಲ್ಲಿ ಗೆಳೆಯರಾದವು.

ಆರಾ: ನೀವು ನಿಮ್ಮ ಬರವಣಿಗೆಯನ್ನು ಆರಂಭಿಸಿದ್ದು ಕವಿತೆಯ ಮೂಲಕ. ನಿಮ್ಮ ಮೊದಲ ಕವಿತೆ ಪ್ರಕಟವಾದದ್ದು ಯಾವಾಗ? ಪ್ರಕಟವಾದಾಗಿನ ನಿಮ್ಮ ಅನುಭವ ಎಂಥದ್ದು?

ಮು: ಅಷ್ಟಾಗಿ ನೆನಪಿಲ್ಲ, ಆದ್ರೆ ಅಪ್ಪ ಸತ್ಯ ಸ್ನೇಹಿ ಪ್ರಕಾಶನದಿಂದ ಹೊರತರುತ್ತಿದ್ದ ಪತ್ರಿಕೆಯಲ್ಲಿ ಅನ್ಸುತ್ತೆ.

ಆದ್ರೆ ಅದು ಪ್ರಕಟವಾದ ಮಾತ್ರಕ್ಕೆ ನನಗೆ ಹೇಳುವಂತ ಸಂತೋಷವೇನೂ ಆಗಲಿಲ್ಲ, ಯಾಕಂದ್ರೆ ಅದರೊಳಗ ಪ್ರೂಫ್ ಮಿಸ್ಟೇಕ್ ಇದ್ವು. ನಾನು ಬರೆಯಲು ಆರಂಭಿಸಿದ್ದು ಬಹುತೇಕ ನನ್ನ ಏಳೆಂಟನೇ ತರಗತಿಯಲ್ಲಿ, ಸಣ್ಣಸಣ್ಣ ಕವಿತೆಗಳನ್ನು ಬರೆಯಲು ಆರಂಭಿಸಿದ ನಾನು ಅಪ್ಪನಿಗೆ ತೋರಿಸಿದಾಗ ಅವರು ಅವುಗಳನ್ನು ಎಂದೂ ತಿದ್ದುತ್ತಿರಲಿಲ್ಲ, ಬದಲಿಗೆ ನೀನಿನ್ನೂ ಭಾಳಾ ಬರೆಯೋದೈತಿ ಅನ್ನುತ್ತಿದ್ದರು. ಹೇಗೆ ಬರೆಯಬೇಕೊ ಅದನ್ನು ಹೇಳಿದರು. ಆದರೆ ಹೇಗೆ ಬರೆಯಬಾರದು ಎಂಬುದನ್ನು ಹೇಳಿ ನನ್ನಲ್ಲಿ ಭಯ ಮೂಡಿಸಲಿಲ್ಲ.

ಆರಾ: ನಿಮ್ಮ ಮೊದಲ ಸಂಕಲನ 'ನಾನು ಮತ್ತು ಅವನು' 83ರಲ್ಲಿ ಬಂತು. ಕನ್ನಡ ಸಾಹಿತ್ಯದಲ್ಲಿ ಅದು ಬಂಡಾಯದ ಕಾಲ. ಆದರೆ ನಿಮ್ಮ ಕಾವ್ಯದಲ್ಲಿ ಬಂಡಾಯದ ಯಾವ ಅಂಶಗಳೂ ಇಲ್ಲ, ಅತ್ಯಂತ ಮೋಹಕವಾದ ವೈಯಕ್ತಿಕ ಶೈಲಿಯಲ್ಲಿ ನಿಮಗೆ ಬರೆಯಲು ಹೇಗೆ ಸಾಧ್ಯವಾಯಿತು. ಏಕೆಂದರೆ ಮಹಿಳಾ ಬರಹಗಾರರೇ ಕಡಿಮೆ ಇದ್ದ ಬರಗಾಲದೊಳಗೆ ತೇಜಸ್ವಿಯಂಥ ಲೇಖಕರು ನಳಿನಿ ದೇಶಪಾಂಡೆ ಎಂದು ಹೆಸರಿಟ್ಟುಕೊಂಡು ಬರೆಯುತ್ತಿದ್ದ ಜರೂರತ್ತಿನ ಸಂದರ್ಭದಲ್ಲಿ ಅಂದಿನ ಸಾಹಿತ್ಯಲೋಕ ನಿಮ್ಮ ಕಾವ್ಯವನ್ನು ಹೇಗೆ ಸ್ವೀಕರಿಸಿತು?

ಮು: ಅಪ್ಪ ನನಗೆ 'ನೀನು ನಿನಗೆ ಅನಿಸೋ ವಿಷಯವನ್ನು ಮುಕ್ತವಾಗಿ ಬರಿ. ಮಡಿವಂತಿಕೆ ಬೇಕಿಲ್ಲ, ಪ್ರೇಮ, ಕಾಮ, ಲೈಂಗಿಕತೆ ಯಾವುದೇ ವಿಷಯವಾಗಲಿ ಮುಕ್ತವಾಗಿ ಬರಿ' ಅನ್ನೊ ಧೈರ್ಯ ಕೊಡ್ತಿದ್ರು, ಆ ಕಾಲಕ್ಕೆ ಪ್ರತಿಭಾ ನಂದಕುಮಾರರ 'ನಾವು ಹುಡುಗಿಯರೇ ಹೀಗೆ' ಕೃತಿ ಬಂದಿತ್ತು, ಸವಿತಾ ನಾಗಭೂಷಣ ಕೂಡ ಉತ್ತಮವಾಗಿ ಬರೀತಿದ್ರು. ನನ್ನ ಸಂಕಲನವನ್ನು ಅಂದು ಬಹಳ ಜನ ಮೆಚ್ಚಿದ್ರು. ನೂರಾರು ಅಭಿಮಾನಿಗಳು ಪತ್ರ ಬರೆದು ಪ್ರತಿಕ್ರಿಯಿಸಿದರು. ಸಾಹಿತಿಗಳು ಒಳ್ಳೆಯ ಪ್ರಯತ್ನ ಅಂತ ಹೇಳಿ ಪ್ರೋತ್ಸಾಹಿಸಿದರು. ಆ ಕೃತಿಯನ್ನು ಓದಿದ ಜನ ನಾನು ಹೇಗಿದಿನಿ ಅಂತ ನೋಡೋಕೂ ಬರ್ತಿದ್ರು. ಒಟ್ಟಾರೆ ಅದೊಂದು ಉತ್ತಮ ಸ್ವಾಗತ.

ಆರಾ: 'ನಾನು ಮತ್ತು ಅವನು' ಕೃತಿ ಆದಮೇಲೆ 'ನೀವು ಕಾಣಿರೇ ನೀವು ಕಾಣಿರೇ' ಸಂಕಲನ ಬಂತು, ಅದಕ್ಕೆ ರಾಮಚಂದ್ರ ಶರ್ಮ ಅವರು ಮುನ್ನುಡಿ ಬರೀತಾ 'ಈ ಥರದ ಕಾವ್ಯ ಕನ್ನಡಕ್ಕೆ ಅಪರೂಪದ್ದು. ಪಶ್ಚಿಮದಲ್ಲಿಯ ಕನ್ಫೆಶ್ಯನಲ್ ಕಾವ್ಯ ಪರಂಪರೆಯ ಶೈಲಿ ಇದಾಗಿದ್ದು ಸಿಲ್ವಿಯಾ ಪ್ಲಾಥ್ ಮುಂತಾದವರ ಕಾವ್ಯದಂತಿದೆ' ಎಂದು ಮೆಚ್ಚಿದ್ದಾರೆ. ಕೆಲ ಬಿಡಿ ಪದ್ಯಗಳನ್ನು ಸ್ವತಃ ಇಂಗ್ಲಿಷಿಗೂ ಅನುವಾದಿಸಿದ್ದಾರೆ. ನನ್ನ ಪ್ರಶ್ನೆ, ಈ ಬಗೆಯ ಅಭಿವ್ಯಕ್ತಿ ಕ್ರಮವೊಂದನ್ನು ನೀವು ಹೇಗೆ ಸಾಧಿಸಿಕೊಂಡಿರಿ?

ಮು: ಮುಖ್ಯವಾಗಿ ಉರ್ದು ಒಂದು ಸಂಗೀತಮಯ ಭಾಷೆ. ಮನೇಲಿ ಅಪ್ಪ ಶೇರ್, ಶಾಯಿರಿಗಳನ್ನು ಓದುತಿದ್ರು ವಿವರಿಸ್ತಿದ್ರು. ಮೇಲಾಗಿ ಆ ಭಾಷೆಯ ಸಂಸ್ಕಾರಕ್ಕೆ ಮನಸೋಲಲು ಕಾರಣ ನಾನು ರಾಯಚೂರಿನಲ್ಲಿ ಬೆಳೆದದ್ದು ಕೂಡ. ಹೀಗಾಗಿ ಉರ್ದುವಿನ ಲಯ, ಮಾಧುರ್ಯ ನನ್ನ ಬರವಣಿಗೆಗೂ ಇಳಿದುಬಂತು. ನನ್ನ ಪ್ರಕಾರ ಕಾವ್ಯವೆಂದರೇನೆ ಮೋಹಕತೆ. ಅದು ಹಾಗೆನೇ ಅಭಿವ್ಯಕ್ತಗೊಳ್ಳಬೇಕೆ ಹೊರತು ಉದ್ದೇಶಪೂರ್ವಕವಾಗಿ ಅದನ್ನು ರೊಕ್ಷಗೊಳಿಸಬಾರದು. ವೈಯಕ್ತಿಕವಾದ ನನ್ನ ನಂಬಿಕೆ ಏನೆಂದರೆ ಅನುಭವ ಎಂಥದ್ದೇ ಆಗಿರಲಿ ಅದನ್ನು ಮೆಲುದನಿಯಲ್ಲೂ ಹೇಳಲು ಸಾಧ್ಯವಿದೆ ಅನ್ನಿಸುತ್ತೆ.

ಆರಾ: ನೀವೊಬ್ಬ ಸ್ತ್ರೀವಾದಿಯಾಗಿ 'ಇಂದಿನ ಸ್ತ್ರೀವಾದದ' ಬೆಳವಣಿಗೆಯನ್ನು ಯಾವ ರೀತಿ ನೋಡುತ್ತೀರಿ?

ಮು: ನನ್ನ ಪ್ರಕಾರ ಸ್ತ್ರೀವಾದಿ ಎಂದಕೂಡಲೆ ಪುರುಷ ದ್ವೇಷಿಯಾಗಬೇಕಾಗಿಲ್ಲ, ಅದು ಪ್ರಕೃತಿಗೆ ವಿರುದ್ಧವಾದದ್ದು. ಸ್ತ್ರೀ ವಾದವೆಂಬುದು ಹೆಣ್ಣನ್ನು ಹೆಣ್ಣಾಗಿ ಕಾಣಿಸುವ ದೃಷ್ಟಿ ಹೊಂದಿರಬೇಕು. ಸ್ತ್ರೀಯ ಅಸ್ಮಿತೆ, ಅನನ್ಯತೆ, ವಿಮೋಚನೆಯ ಹೋರಾಟಗಳೆಲ್ಲವೂ ಗಂಡನ್ನು ಜೊತೆಮಾಡಿಕೊಂಡೇ ನಡೆಯಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ.


ಆರಾ: ನನ್ನ ಪ್ರಕಾರ ಸ್ತ್ರೀವಾದದಲ್ಲಿ ಎರಡು ಬಗೆ. ಮೇಲ್ವರ್ಗದ ಮಹಿಳೆಯ ಸ್ತ್ರೀವಾದ. ಕೆಳವರ್ಗದ ಮಹಿಳೆಯ ಸ್ತ್ರೀವಾದ. ಇವೆರಡೂ ಬೇರೆ ಬೇರೆ ನೆಲೆಗಟ್ಟು ಹಾಗೂ ಉದ್ದೇಶಗಳನ್ನು ಹೊಂದಿರುವಂಥವು. ಉದಾಹರಣೆಗೆ ಒಬ್ಬ ದಲಿತ ಮಹಿಳೆಯ ವಿಮೋಚನಾ ಹೋರಾಟ ಇಬ್ಬಗೆಯದು. ಒಂದು ಹೆಣ್ಣಾಗಿ ಹುಟ್ಟಿದ್ದಕ್ಕಾಗಿ, ಇನ್ನೊಂದು ಜಾತಿಯ ನೆಲೆಯಲ್ಲಿ, ಇದನ್ನು ನಮ್ಮ ಕನ್ನಡ ಸ್ತ್ರೀವಾದಿ ವಿಮರ್ಶೆ ಗುರುತಿಸಿದೆಯೇ?

ಮು: ನೀ ಹೇಳಿದಂಗ ಈ ವರ್ಗ-ಜಾತಿ ಶೋಷಣೆಯನ್ನು ಇಟ್ಟುಕೊಂಡು ಸ್ತ್ರೀ ಸಂವೇದನೆಯ ಗುರುತಿಸುವಿಕೆ ಕನ್ನಡದ ಸಂದರ್ಭದಲ್ಲಿ ಅಗತ್ಯದಷ್ಟು ಆಗಿಲ್ಲ ಅಂತ ನನ್ನ ಭಾವನೆ. ಆದರೆ ಸಾಧ್ಯತೆಗಳಂತೂ ಇವೆ, ಆಗಬೇಕು.

ಆರಾ: ನಿಮ್ಮ ಇಷ್ಟದ ಬರವಣಿಗೆ ಬಗ್ಗೆ ಹೇಳಿ.

ನುಡಿಗನ್ನಡಿ
ಸಾಹಿತಿ-ಕಲಾವಿದ-ಚಿಂತಕರ
ಸಂದರ್ಶನ

• ಆರೀಫ್ ರಾ



ಹಲವು ದಶಕಗಳ ಹಿಂದೆ ಮುಕ್ತಾಯಕ್ಕ

ಮು: ನನ್ನ ಬದುಕು ಹಾಗು ಬರಹದ ಮೆ
ದೊಡ್ಡ ಪ್ರಭಾವ ಬೀರಿದ ಲೇಖಕಿ ಎಂದರೆ ಅಮ
ಪ್ರೀತಮ್. ಕನ್ನಡದಲ್ಲಿ ನನಗೆ ಲಂಕೇಶ್ ಬರವ
ಕಂಬಾರರ ಕಾವ್ಯ, ಚಂಪಾ ನಾಟಕ, ದೇವನೂರರ ಕತೆ
ಇಷ್ಟ. ವಾರಿಗೆಯವರಲ್ಲಿ ಪ್ರತಿಭಾ ಕಾವ್ಯ ಸೇ
ಇತ್ತೀಚಿನವರಲ್ಲಿ ಲಲಿತಾ ಸಿದ್ಧಬಸವಯ್ಯನವರು ಚೆ
ಬರಿತಿದ್ದಾರೆ.

*ಆರಾ: ಹೊಸ ತಲೆಮಾರಿನ ಸಾಹಿತ್ಯದ ಕುರಿತು ನಿ
ಅಭಿಪ್ರಾಯವೇನು?*

ಮು: ಈಗಿನವರಲ್ಲಿ ಓದು ಕಡಿಮೆ. ದಿಢೀರ್
ಬಯಸುತ್ತಿದ್ದಾರೆ. ಸಾಹಿತ್ಯ ಲೋಕದಲ್ಲಿ ಆ ಥರದ ದಿಢ
ಮ್ಯಾಜಿಕ್ ಏನೂ ನಡೆಯೋದಿಲ್ಲ, ಇಲ್ಲಿ ಪ್ರತಿಭೆಯ
ಪರಿಶ್ರಮ, ಶ್ರದ್ಧೆ ಹಾಗೂ ತಪಸ್ಸಿನಂತಹ ತಾಳ್ಮೆಯ ಅವ
ಬಹಳ ಅದಾ. ಅಂಥವರೇನಾದ್ರೂ ಇದ್ರೆ ಬೇರೇನಾ
ದಾರಿ ನೋಡ್ಕೊಳ್ಳೋದು ಒಳ್ಳೇದು.

*ಆರಾ: ಬರಹದಲ್ಲಿ 'ಸಾಮಾಜಿಕತೆ' ಕುರಿತು
ಹೇಳ್ತೀರಿ?*

ಮು: ಇದ್ರೆ ತಾನೇ ಬರ್ತದ. ಉದ್ದೇಶಪೂ
ಎಳೆದು ತರೋದ್ರಲ್ಲಿ ಅರ್ಥ ಇಲ್ಲ, ಬರವಣಿಗೆ ಅನ್ನೋ
ಒಂದು ಮಾನವೀಯ ಸಾಧ್ಯತೆ ಆದ್ರಿಂದ ಎಲ್ಲಾ ರೀತಿ
ಬರವಣಿಗೆನೂ ನನ್ನ ಪ್ರಕಾರ ಸಾಮಾಜಿಕನೇ.

*ಆರಾ: ನೀವೆಲ್ಲೂ ಹೊರಗೆ ಬರೋದಿ
ಕಾರ್ಯಕ್ರಮಗಳಲ್ಲಿ ಭಾಗವಹಿಸೋದಿಲ್ಲ ಅನ್ನೋ ಆರೋ
ಇದೆಯಲ್ಲ...*

ಮು: ಯಾಕೋ ಗೊತ್ತಿಲ್ಲ, ನನಗೆ ಮೊದಲಿನಿಂದ
ಕ್ರೌಡ್ ಕಂಡ್ರೆ ಕಿರಿಕಿರಿ ಆಗುತ್ತೆ. ಆದರೆ ಅಪ್ಪನಿಗೆ
ಇಲ್ಲ ಅಂದ್ರೆ ನಡೀತಿರ್ಲಿಲ್ಲ, ಆತನಿಗೆ ಯಾವಾಗ
ಸುತ್ತಮುತ್ತ ಜನ ಇರಬೇಕು. ಜನ... ಜನ...

*ಆರಾ: ಮತ್ತೆ ನೀವು ಕಾಲೇಜಲ್ಲಿ ಪಾಠ
ಮಾಡ್ತೀರಿ?*

ಮು: ಹೊಟ್ಟೆಪಾಡು ಮಾಡಬೇಕಲ್ಲಪ್ಪ (ನಗು).

*ಆರಾ: ನೀವು ಫ್ರೀವರ್ಸ್ ಕವಿತೆಯಿಂದ ಗಝ
ಹೊರಳಿದವರು. ಪ್ರಸ್ತುತ ಏನು ಬರಿತಿದಿ
ಗದ್ಯವನ್ನೇನಾದ್ರೂ...*

ಮು: ಇಲ್ಲ ಇಲ್ಲ, ನನಗ ಗದ್ಯ ಒಗ್ಗದ ಪ್ರ
ಕಾವ್ಯವೇ ನನ್ನ ಶಕ್ತಿ, ಗಝಲ್‌ಗಳನ್ನು ಬರ್ದಿದೀನಿ. ಮ
ದ್ವಿಪದಿಗಳನ್ನು ಪ್ರಕಟಿಸೋ ಆಸೆ ಇದೆ. ಗಝಲ್ ಬರ
ಬಹಳ ಶಕ್ತಿ ಬೇಕು. ಗಝಲ್ ಎಷ್ಟು ನವಿರೋ ಅ
ಕಷ್ಟಕರವಾದದ್ದು. ಒಂದೊಂದು ದ್ವಿಪದಿಯೂ ಹ
ಮುಕ್ತ ಛಂದಸ್ಸಿನ ಕವಿತೆಯೇ ಆಗಬಲ್ಲಷ್ಟು ಭಾವದ ತೀ
ನಿರೀಕ್ಷಿಸುತ್ತವೆ. ಜೊತೆಗೆ ಛಂದಸ್ಸೂ ಗೊತ್ತಿರಬೇಕು.

...ರಂಗ-ಅಂತರಂಗ

ಕರ್ನಾಟಕದಲ್ಲಿ ರಂಗಭೂಮಿ ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿರುವ ರಂಗ ತಂಡಗಳ ಪರಿಚಯ ಮಾಲಿಕೆ ಇದು. ನಾಡಿನ ಉದ್ದಗಲಕ್ಕೂ ವ್ಯಾಪಿಸಿರುವ ನಾಟಕ ಆಡುವ-ನೋಡುವ ಗೀಳು ಸಿನಿಮಾ ಹಾಗೂ ಟಿವಿಗಳ ಪ್ರಭಾವಗಳನ್ನೂ ಮೀರಿ ಈಗಲೂ ಜೀವಂತವಾಗಿದೆ. ಹೊಸ ನಟರು, ನಿರ್ದೇಶಕರು, ರಂಗ ವಿನ್ಯಾಸಗಾರರು, ನಾಟಕ ಬರೆಯುವವರು ಕಾಣಿಸಿಕೊಳ್ಳುತ್ತಿದ್ದಾರೆ. ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಮುಖ್ಯ ಭಾಗವಾಗಿರುವ ನಾಟಕ ಕ್ಷೇತ್ರದ ಆಗುಹೋಗುಗಳನ್ನು, ಸಾಧಕರನ್ನು ಪರಿಚಯಿಸುವ ಈ ಲೇಖನ ಮಾಲೆ ಈ ವಾರದಿಂದ ಆರಂಭವಾಗುತ್ತಿದೆ. ನಿಮಗೆ ಪರಿಚಯವಿರುವ, ಒಡನಾಡಿರುವ ರಂಗತಂಡಗಳ ಬಗ್ಗೆ ನೀವೂ ಬರೆದು ಕಳುಹಿಸಬಹುದು. ನಿಮ್ಮ ಬರಹ ನಾನೂರು ಪದಗಳ ಮಿತಿಯಲ್ಲಿರಲಿ.



ಜೊತೆಗಿರುವನು ಚಂದಿರ

ಹೊಸಪೇಟೆಯ ಕನ್ನಡ ಕಲಾಸಂಘ

ಕನ್ನಡ ರಂಗಭೂಮಿಯ ಸ್ಮೃತಿ ಸರಣಿಗಳಲ್ಲಿ ಅದೆಷ್ಟೋ ಭಾಷೆಗಳ ಬಾಂಧವ್ಯ ... ಸಂಚಯಗಳೆಲ್ಲಾ ಹಾದುಹೋಗಿವೆ. ನೆರೆನಾಡ ಸಾಹಿತ್ಯ, ಜೀವನ ಕ್ರಮ ... ಸಂಸ್ಕೃತಿ ಕಥನಗಳು ಎಗ್ಗಿಲ್ಲದೇ ಹೊಸ ರಂಗ ರೂಪಗಳಾಗಿ ಸೊಬಗಿಸಿವೆ.

...ಬಳ್ಳಾರಿ ಜಿಲ್ಲೆ; ತುಂಗಭದ್ರೆ ಡ್ಯಾಮ್‌ನ ತಟದಲ್ಲಿ ಉದಯಿಸಿ ಬೆಳಗುತ್ತಿರುವ, ...ಭೂಮಿಯ ಬಲು ಮುಖ್ಯವಾದ ಒಂದು ತಂಡ 'ಕನ್ನಡ ಕಲಾ ಸಂಘ'. ...1953 ರಿಂದ 1958 ರವರೆಗೆ ತುಂಗಭದ್ರಾ ಅಣೆಕಟ್ಟಿನ ನಿರ್ಮಾಣ ನಿಮಿತ್ತ ಆಂಧ್ರ, ತಮಿಳುನಾಡು ಹಾಗು ಕೇರಳ ರಾಜ್ಯಗಳಿಂದ ವಲಸೆ ಬಂದಂತಹ ಸಾವಿರಾರು ಕುಟುಂಬಗಳು ತುಂಗಭದ್ರಾ ಡ್ಯಾಂನಲ್ಲಿ ತಳವೂರಿದವು.

1960ರಲ್ಲಿ ಅಂದಿನ ಮೈಸೂರು ರಾಜ್ಯ ಮತ್ತು ಆಂಧ್ರ ರಾಜ್ಯಗಳ ಒಡೆತನದಿಂದ ತುಂಗಭದ್ರಾ ಸ್ಟೀಲ್ ಪ್ರಾಡಕ್ಟ್ಸ್ ಲಿಮಿಟೆಡ್ ಎಂಬ ಸರ್ಕಾರಿ ಸ್ವಾಮ್ಯದ ಉದ್ದಿಮೆ ಉದಯವಾಯಿತು. ಈ ಉದ್ದಿಮೆಯಲ್ಲಿ ಕೆಲಸ ಮಾಡುತ್ತಿದ್ದ ಎಂ.ಕಾಳಪ್ಪ, ದೇವದಾಸ್, ಪಿ.ರಾಮಯ್ಯ, ಎಂ.ಎಸ್.ರಾಮಚಂದ್ರ, ಎಸ್.ಕೆ.ಅರಸ್, ಲಕ್ಷ್ಮೀಪತಿ, ರುದ್ರಪ್ಪ ಕೆ.ಆರ್.ಭಟ್, ಡಬ್ಲ್ಯೂ.ಹೆಚ್.ನಾಗರಾಜ್, ವೈ.ಡಿ.ಪ್ರಹ್ಲಾದ್, ಸಾಲ್ಮನಿ ಸೋಮಪ್ಪ ದಿ|| ಎಂ ಶಂಕರಗೌಡ ಮುಂತಾದವರ ಆಸಕ್ತಿಯಿಂದಾಗಿ 'ಕನ್ನಡ ಕಲಾ ಸಂಘ'ವು 1964ರಲ್ಲಿ ತುಂಗಭದ್ರಾ ಡ್ಯಾಂನಲ್ಲಿ ಸ್ಥಾಪಿತವಾಗಿ ಕನ್ನಡ ಸಾಂಸ್ಕೃತಿಕರಂಗದಲ್ಲಿ ತನ್ನ ಪುಟವನ್ನು ತೆರೆದುಕೊಂಡಿತು.

ಕರ್ನಾಟಕದ ಹವ್ಯಾಸಿ ರಂಗಭೂಮಿಯಲ್ಲಿ ಕನ್ನಡ ಕಲಾ ಸಂಘದ ಸಾಧನೆ ಅಪಾರ. ಈಗ್ಗೆ ನಾಲ್ಕು ದಶಕಕ್ಕೂ ಮೇಲ್ಪಟ್ಟು ವಿಭಿನ್ನ ಪ್ರಾಕಾರದ ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ಹಾಸ್ಯ, ಅಸಂಗತ ನಾಟಕಗಳನ್ನು ಸಂಘದ ಕಲಾವಿದರು ಪ್ರದರ್ಶಿಸಿದ್ದಾರೆ. ಸಂಘದ ಕಲಾವಿದರು ಅಭಿನಯಿಸಿದ ನಾಟಕಗಳು ರಾಜ್ಯ ಹಾಗು ರಾಷ್ಟ್ರಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಹಲವಾರು ಪ್ರಶಸ್ತಿ ಪಾರಿತೋಷಕಗಳನ್ನು ಪಡೆದುಕೊಂಡಿವೆ.


ಸ್ಥಾಪನೆ: ೧೯೬೪

ಆರಂಭದಲ್ಲಿ ತಂಡದ ಸದಸ್ಯರೇ ನಾಟಕ ರಚಿಸಿ, ತಾವೇ ನಿರ್ದೇಶಿಸಿ ಪ್ರದರ್ಶಿಸುತ್ತಿದ್ದರೂ ನಂತರ ಹವ್ಯಾಸಿ ರಂಗಭೂಮಿಯ ಕೆಲವು ಉತ್ತಮ ನಿರ್ದೇಶಕರನ್ನು ಕರೆಯಿಸಿ ನಾಟಕವಾಡುವ ಪರಿಪಾಠ ಶುರುವಾಯಿತು. ಇಲ್ಲಿ ತಯಾರಾದ ಹೆಚ್ಚಿನ ನಾಟಕಗಳಲ್ಲಿ ಧಾರವಾಡದ ರಂಗಕರ್ಮಿ ಧನಂಜಯ ಕುಲಕರ್ಣಿ ಅವರದ್ದೇ ಸಿಂಹಪಾಲು; ಅವರು ನಿರ್ದೇಶಿಸಿದ ಹೂಲಿ ಶೇಖರ್ ಅವರ 'ದಫನ್', 'ರಾಕ್ಷಸ', ಅಜ್ಗರ್ ವಜಾಹತ್ ಅವರ 'ರಾವೀ ನದಿಯ ದಂಡೆಯಲ್ಲಿ' (ಅನುವಾದ: ಇಟಗಿ ಈರಣ್ಣ), ಜಯಂತ ಕಾಯ್ಕಿಣಿಯವರ 'ಜೊತೆಗಿರುವನು ಚಂದಿರ', ಚಂದ್ರಶೇಖರ ಕಂಬಾರರ 'ನಾಯಿ ಕಥೆ' ನಾಟಕಗಳು ಅಪಾರ ಜನಮನ್ನಣೆ ಗಳಿಸಿದವಷ್ಟೇ ಅಲ್ಲದೆ ಮುಂಬೈ ಕರ್ನಾಟಕ ಸಂಘವು ನಡೆಸುವ ಕುವೆಂಪು ಸ್ಮಾರಕ ನಾಟಕ ಸ್ಪರ್ಧೆಯಲ್ಲಿ 1999, 2000 ಮತ್ತು 2001 ವರ್ಷಗಳಲ್ಲಿ ಸತತವಾಗಿ ಮೂರು ಬಾರಿಯೂ ಪ್ರಥಮ ನಾಟಕ ಪ್ರಶಸ್ತಿಗಳನ್ನು ಬಾಚಿಕೊಂಡಿವೆ.

ತಮ್ಮ ಬಿಡುವಿನ ... ಯಲ್ಲಿ ನಾಟಕವಾಡಿದರೂ ಸಂಘವು ಆಡಿದ ಎಲ್ಲ ನಾಟಕಗ... ಯಾವುದೇ ವೃತ್ತಿಪರ ರಂಗ...ತಂಡಗಳಷ್ಟೇ ಶಿಸ್ತನ್ನು ತನ್ನ ತಾಲೀಮು...ಲ್ಲೆ, ರಂಗ ಪ್ರಸ್ತುತಿಗಳಲ್ಲಿ ಬಿಂಬಿಸುತ್ತಾ ಬಂದಿದೆ.

ತನ್ನ ರಂಗ ಪ್ರತಿ ಪ್ರಸ್ತುತಿಗಳ ಮುಖಾಂತರ, ತನ್ನ ಸುತ್ತ ಮುತ್ತಲ ಜನರನ್ನು ಎಚ್ಚ...ಸುವ ಹಾಗೆಯೇ ಮುದನೀಡುವ ಕನ್ನಡ ಕಲಾ ಸಂಘ... ಪ್ರಯತ್ನ ಪ್ರಶಂಸನೀಯವಾದದ್ದು.

ರಂಗಭೂಮಿಯ ಪ... ...ತರ ಇಂದಿನ ಹೊಸ ಸಾಂಸ್ಕೃತಿಕ ... ಗೆ ಇಂತಹ ರಂಗತಂಡಗಳದ್ದೇ ಸಾರಥ್ಯವೆಂಬು... ...ಲ್ಲ.



● ನರ... ...ಮಯ್ಯ

"ಸಾವಿರದ ಒಂಬೈನೂರ ತೊಂಬತ್ತೆರಡರಲ್ಲಿ ಎಂಜಿನಿಯರ್ ಆಗಿ ನಾನು ... ಡ್ಯಾಮ್‌ಗೆ ಬಂದೆ. ಒಂದು ಸುಸಜ್ಜಿತವಾದ ಗ್ರಂಥಾಲಯ, ವಾಚನಾಲಯ ... ಬೀಚಿ ರಂಗತಾಲೀಮು ಕೊಠಡಿಗಳನ್ನು ನಿರ್ಮಿಸಿದೆವು. ಸಂಘಕ್ಕೊಂದು ...ಮು ನೆಲೆಯಾಯಿತು. ಹಾಗೆಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ...ತ್ರ ದಾನಿಗಳ ಸಹಯೋಗದಿಂದ ಸ್ಪಾಟ್‌ಲೈಟ್‌ಗಳು, ಕರ್ಟನ್‌ಗಳು, ಸಂಗೀತ ...ಪ್ಯಗಳು, ಧ್ವನಿಸಲಕರಣೆಗಳು, ಕುರ್ಚಿಗಳು ಹೀಗೆ ತಂಡಕ್ಕೆ ಬೇಕಾದ ಅಗತ್ಯ ...ರಣೆಗಳನ್ನು ಖರೀದಿಸಿದೆವು. ನಂತರದ ದಿನಗಳಲ್ಲಿ ತುಂಗಭದ್ರಾ ಮಂಡಳಿಯ ...ಯಿಂದಲೇ ಮತ್ತೊಂದು ನಿವೇಶನ ಪಡೆದು, ಡ್ಯಾಮ್ ಕಟ್ಟಿ ಉಳಿದಿದ್ದ ... ಕಬ್ಬಿಣಗಳಿಂದ 'ಪಂಪಾ ರಂಗಮಂದಿರ' ವೆಂಬ ಸುಸಜ್ಜಿತವಾದ ಬಯಲು ...ಮಂದಿರವನ್ನು ನಿರ್ಮಿಸಿದೆವು; ಅದೀಗ ಹೊಸಪೇಟೆಯಲ್ಲೇ ಏನು ಬಳ್ಳಾರಿ ...ಯಲ್ಲೇ ಒಂದು ಪ್ರತಿಷ್ಠಿತ ರಂಗಮಂದಿರವೆನಿಸಿದೆ.

...ಕನ್ನಡ ಕಲಾ ಸಂಘದೊಡನೆ ಅಭಿನಯಿಸಿದ, ಕಳೆದ ...ಯೊಂದು ಘಳಿಗೆಯೂ ನನ್ನ ಜೀವನದ ಸಾರ್ಥಕದ ...ಗಳೆಂದು ಆನಂದಿಸುತ್ತೇನೆ, 'ದಫನ್' ನಾಟಕವನ್ನು ...ರಿ ಜಿಲ್ಲೆಯ ಹಳ್ಳಿಗಳಲ್ಲಿ ಸುತ್ತಿ 36 ಪ್ರದರ್ಶನಗಳನ್ನು ...ದ ಆ ದಿನಗಳನ್ನು ನೆನೆದರೇ ರೋಮಾಂಚನವಾಗುತ್ತದೆ.'



-ನರೇಂದ್ರ ಬಾಬು, ಹಿಂದಿನ ಕಾರ್ಯದರ್ಶಿ, ಕನ್ನಡ ಕಲಾ ಸಂಘ

'ಶುರುವಿನ ದಿನಗಳಲ್ಲಿ ನಾವೆಲ್ಲಾ ಒಂದೋ ನಾವೇ ರಚಿಸಿ ನಿರ್ದೇಶಿಸಿದ ನಾಟಕಗಳನ್ನೇ ಪ್ರದರ್ಶಿಸುತ್ತಿದ್ದೆವು ಇಲ್ಲವೇ ನಮ್ಮ ಪಕ್ಕದ ರಾಜ್ಯ ಆಂಧ್ರದ ತೆಲುಗು ನಾಟಕಗಳನ್ನು ನಾವೇ ಕನ್ನಡಿಸಿ ಆಡುತ್ತಿದ್ದೆವು. ಅವುಗಳಲ್ಲಿ ನಾನೇ ಬರೆದು ಆಡಿಸಿದ 'ಜೈ ಮೈಲಾರಲಿಂಗ', ಆರ್.ಎನ್ ಕುಲ್ಕರ್ಣಿಯವರ 'ಸಾಷ್ಟಾಂಗ ನಮಸ್ಕಾರ', ತೆಲುಗಿನ ಹರಿನಾಥರ 'ಅಂತ್ಯವಲ್ಲ ಆರಂಭ', ಯಂಡಮೂರಿ ವೀರೇಂದ್ರನಾಥರ 'ಅಂತರ' (ನಿಶ್ಶಬ್ದಂ ನೀಕೂ ನಾಕೂ ಮಧ್ಯ), ಪಲ್ಲೇಟಿ ಕುಲಶೇಖರ ಅವರ 'ಅನುಬಂಧವೋ ಅಣುಬಂಧವೋ' (ಅಣುಬಂಧಂ) ಮುಖ್ಯವಾದವು.



ನಮಗಾಗಿ ಧನಂಜಯ ಕುಲ್ಕರ್ಣಿಯವರು ಆಡಿಸಿದ ಹೂಲಿ ಶೇಖರ್ ಅವರ ರಾಕ್ಷಸ ರಂಗ ನಾಟಕವನ್ನು ರಂಗದಿಂದಲೇ ಯಥಾವತ್ತಾಗಿ ತೆಲುಗಿಗೆ ಅನುವಾದಿಸಿ, ಆಂಧ್ರದ ಪ್ರಸಿದ್ಧ ನಂದಿ ನಾಟಕೋತ್ಸವದಲ್ಲಿ ಆಡಿದ್ದು ನಮ್ಮ ಹೆಮ್ಮೆ. ಅಲ್ಲದೇ ಅದೇ ನಾಟಕವನ್ನು ಪ್ರತಿ ವರ್ಷವೂ ಅಕ್ಕಿನೇನಿ ನಾಗೇಶ್ವರರಾವ್ ಅವರ ಜನ್ಮದಿನದಂದು ನಡೆವ ಅವರದೇ ಹೆಸರಿನ ನಾಟಕೋತ್ಸವದಲ್ಲಿ ಅವರೆದುರೇ ಅಭಿನಯಿಸಿ ಅವರ ಮೆಚ್ಚುಗೆಗೆ ಪಾತ್ರವಾದ ಕ್ಷಣ ಮರೆಯಲಾರದಂಥದ್ದು.


ಹೊಸಪೇಟೆಯ ಪ್ರಜ್ಞಾವಂತ ಪ್ರೇಕ್ಷಕರು ಸದಾ ನಮ್ಮ ನಾಟಕಗಳನ್ನು ನೋಡಿ, ವಿಮರ್ಶಿಸಿ, ಆನಂದಿಸಿದ್ದಾರೆ. ಅವರ ಸಹಕಾರದಿಂದ ಕನ್ನಡ ಕಲಾ ಸಂಘವು ಸದಾ ಹುರು... ತನ್ನ ರಂಗ ಚಟುವಟಿಕೆಗಳನ್ನು ನಡೆಸಿಕೊಂಡುಹೋಗುತ್ತಿ...

-ರಾಜು ಕುಲಕರ್ಣಿ... ತಂಡದ ಹಿರಿಯ ಮತ್ತು ಪ್ರಮುಖ ನಿರ್ದೇಶಕ

'ಸಾವಿರದ ಒಂಬೈನೂ... ತೊಂಬತ್ತೊಂಬತ್ತು ಅನ್ನಿಸುತ್ತ ಸಂಘವು ಮಾಡುತ್ತಿದ್ದ 'ದಫನ್' ...ಟಕಕ್ಕಾಗಿ ಹಾಡುಗಾರನೊಬ್ಬನನ್ನು ಹುಡುಕುತ್ತಿದ್ದರು. ಆರ್ಕೆಸ್ಟ್ರಾ... ಹಾಡುತ್ತಿದ್ದ ನನಗೆ ಕರೆಬಂತು. ಅಂದು ಕನ್ನಡ ಕಲಾಸಂಘಕ್ಕೆ ಸೇರಿಕೊಂಡ ... ನಂತರ ಬೆಳೆದದ್ದು, ಖ್ಯಾತಿಗಳಿಸಿದ್ದು ನಟನಾಗಿ. 'ದಫನ್' 'ಜೊತೆಗಿರುವ... ...ಂದಿರ', 'ರಾವೀ ನದಿಯ ದಂಡೆಯಲ್ಲಿ', 'ರಾಕ್ಷಸ', 'ನಾಯಿ ಕಥೆ' ಮುಂ... ನಾಟಕ ಗಳಲ್ಲಿ ಮುಖ್ಯ ನಟನಾಗಿ ಅಭಿನಯಿಸಿ ಹಲವು ಬಾರಿ '... ನಟ' ಪ್ರಶಸ್ತಿ ಪಡೆದುಕೊಂಡಿದ್ದೇನೆ. ಆದಕ್ಕಿಂತ ... ಖುಷಿ ಹೇಳಿ? ರಂಗಭೂಮಿಯ ನಂಟು ಸಹ... ನನ್ನ ವೈಯಕ್ತಿಕ ಬದುಕಿನಲ್ಲಿ ಚೇತೋಹಾರಿ ಸಂಚ...ನ್ನೇ ಮೂಡಿಸಿದೆ. ಆದಕ್ಕೆ ನಾನು ನನ್ನ ಕನ್ನಡ ಕಲಾ ...ಘಕ್ಕೆ ಚಿರಋಣಿ.'



-ಚಂದ್ರಶೇಖರ್, ತಂಡದ ಪ್ರಮುಖ ನಟ ಹಾಗೂ ಗಾಯಕ



- ಪಿ. ಅಣ್ಣಪ್ಪ ಪ್ರಭು, ಬೆಂಗಳೂರು

...ಆಷಾಢಮಾಸದಲ್ಲಿ ನವವಿವಾಹಿತ ಹುಡುಗಿ ...ತವರುಮನೆಗೆ ಹೋಗಲು ಕಾರಣ?

...ಅದೆಂಥಾ ಯುದ್ಧವೇ ಆದರೂ 'ಕದನ ವಿರಾಮ' ...ಅಂತ ಒಂದು ಬೇಕಲ್ಲ ಅಣ್ಣಪ್ಪ.

- ಲಕ್ಷ್ಮೀಕಾಂತ ಮಿರಾಜಕರ್, ಶಿಗ್ಗಾವಿ

...ಬಿಗ್‌ಬಾಸ್ ಮನೆಯೊಳಗೆ ಯಡ್ಡಿ ಮತ್ತು ಶೋಭಾ ...ಇಬ್ಬರೂ ಇದ್ದಿದ್ದರೆ...?

... ಕನಿಷ್ಠ ನಾಲ್ಕು ಜನರ ಕಪಾಳಕ್ಕಾದರೂ ಯಡ್ಡಿ ...ಬಾರಿಸುತ್ತಿದ್ದರು.

- ನಾಗ

...ಗುತ್ತಿಗೆ ಪತ್ರಕರ್ತರ ದಯನೀಯ ಸ್ಥಿತಿಗೆ ಪರಿಹಾರ ...ಗೊತ್ತುಂಟಾ ?

...ಇದು ಬಜೆಟ್‌ಗಳು ಗುತ್ತಿಗೆ ಪಡೆದಿದ್ದ ಪತ್ರಕರ್ತರ ...ಪಾಡು.

- ನಿರಂಜನ್ ಪಾಟೀಲ್, ಹುಣಸನಹಳ್ಳಿ

...ಗುರುಳ್ಳಾ, ಸಿಜೇಧಿಸಿದಾಗಲೇ ಕಡ್ಡಿಪುಡಿ ಸಿನಿಮಾ ...?

ಇದು ಸಿದ್ದರಾಮಯ್ಯಗೆ ದುನಿಯಾ ಸೂರಿ ಮಾಡಿರುವ ಚಾಲೆಂಜ್.

- ಡೌಟ್ ರವಿ, ಬೆಂಗಳೂರು

ನಿರ್ದೇಶಕ ಗುರು ಪ್ರಸಾದರ 'ಸ್ಪೆಷಾಲಿಟಿ' ಏನು?

ಕಲ್ಪನೆ-ವಾಸ್ತವಗಳ ವ್ಯತ್ಯಾಸ ತಿಳಿಯದೆ 'ಮಠ' ಸೇರುವ ದಾರಿ ಹಿಡಿದಿರುವುದು.

- ಪ್ರಕಾಶ್, ಶಿವಮೊಗ್ಗ

ಕಾಂಗ್ರೆಸ್ ಸರ್ಕಾರದ ಹೊಸ ಮಂತ್ರಿಗಳು ಅಧಿಕಾರಿಗಳಿಗೆ ಹೊಡೆಯಕ್ಕೆ ಹೋಗುತ್ತಿದ್ದಾರಲ್ಲ?

ಬಿಜೆಪಿ ಸರ್ಕಾರವಿದ್ದಾಗ ಬರೀ ದುಡ್ಡು 'ಹೊಡೆದು' ಗೊತ್ತಿದ್ದ ಅಧಿಕಾರಿಗಳ ಗೂಣಗಾಟವಿದು.

- ಜಾವೀದ್, ಮಂಡ್ಯ

ಚಂದ್ರೇಗೌಡರ ಕಟ್ಟೇಪುರಾಣಕ್ಕೆ ಏನಾಯಿತು?

ಲೋಕಸಂಚಾರ ಮುಗಿಸಿ ಬಂದಿದ್ದಾರೆ. ಮುಂದಿನ ವಾರದಿಂದ ಸಿಗುತ್ತಾರೆ.

- ಬಿರಾದಾರ್, ಅಥಣಿ

ಅಕಾಡೆಮಿ ಸ್ಥಾನಗಳಿಗೆ ಲಾಬಿ ನಡೆಸುತ್ತಿರುವ ಸಾಹಿತಿ-ಬುದ್ಧಿಜೀವಿಗಳನ್ನು ನೋಡಿ ಸಚಿವೆ ಉಮಾಶ್ರೀ ಕಂಗಾಲಾಗಿದ್ದಾರಂತೆ.

ರಾಜೀನಾಮೆ ಕೇಳಿದರೂ ಜಾಗ ಬಿಡದವರನ್ನು ನೋಡಿ ಶಾಕ್ ಆದ ಸುದ್ದಿಯೂ ಇದೆ.

- ರಾಜೀವ್, ಬಳ್ಳಾರಿ

ದೋನಿ ಈಗ ಶ್ರೀಮಂತ ಕ್ರೀಡಾಪಟುವಂತೆ?

ಕ್ರಿಕೆಟ್‌ಗೇ ದೋಖಾ ಕೊಟ್ಟರೆ ಇದೆಲ್ಲಾ ಸಾಧ್ಯ.

- ಸಾಧನಾ, ಕೊಪ್ಪಳ

ಸಂಜಯ್ ದತ್‌ನನ್ನು ಜನ ಮರೆತೇಬಿಟ್ಟಂತೆ ಕಾಣುತ್ತಲ್ಲ?

ಹಾಗಂತ ಸಂಜಯ್ ದತ್‌ಗೆ ತನ್ನ ತಪ್ಪು ಮರೆಯಲು ಸಾಧ್ಯವೆ?

- ರಂಗನಾಥ್, ಮೈಸೂರು

ಸಿದ್ದರಾಮಯ್ಯನವರ ಹೊಸ ಬಜೆಟ್ ಹೇಗಿರುತ್ತೋ...?

ಜೀರಿಗೆ ಪೆಪ್ಪರ್‌ಮೆಂಟ್ ತರಾ...!

- ಕಾವ್ಯದೇವಿ, ಹುಬ್ಬಳ್ಳಿ

ನಾನೊಂದು ಖಂಡಕಾವ್ಯ ಬರೆದಿದ್ದೇನೆ ಕಳುಹಿಸಲೇ?

ಕಳಿಸು... ಖಡ್ಗ ನಮ್ಮ ಹತ್ತಿರ ತಾನೆ ಇರೋದು.

- ಹೆಸರಿಲ್ಲ

ಪ್ರೀತಿ ಯಾರಿಗೂ ಮೋಸ ಮಾಡಲ್ಲ, ಆದರೆ ಪ್ರೀತಿಸೋರು ಯಾಕೆ ಮೋಸ ಮಾಡ್ತಾರೆ?

ಪ್ರೀತಿನ ಪ್ರೀತಿಸಬೇಕಾದಷ್ಟು ಪ್ರೀತಿಸದೆ ಹೋದಾಗ ಮೋಸ ಹುಟ್ಟುತ್ತೆ.

- ...

ಉದಯ ... ತಪ್ಪನ್ನು ... ಅವರ 'ಲಂಕೇಶ್'ನಲ್ಲಿ ... ಎನ್ನುತ್ತೀರಲ್ಲ ...

ಇದರಲ್ಲಿ ... ...

ಮಾಯಾಮೃಗ

ಇತ್ತೀಚೆಗೆ ಒರಿಸ್ಸಾ ರಾಜ್ಯದ ರಾಯಗಢ್ ಜಿಲ್ಲೆಯಲ್ಲಿ ಆದಿವಾಸಿಗಳು ವಾಸಿಸುವ ಹಾಡಿಗಳಿಗೆ ಭೇಟಿ ನೀಡಿದಾಗ ಡಾ. ಸಬಿಹಾ ಭೂಮಿಗೌಡ ಕಂಡ 'ಬದುಕಿನ ಕಥನ'ದ ಎರಡನೇ ಭಾಗ ಇಲ್ಲಿದೆ.

ಅಷ್ಟರಲ್ಲಿ ಭಗವಾನ್ "ಹೂಂ... ಏನ್ ಅಂತಿದ್ದೆ... ಕಂಪ್ನಿಯವ್ರು ಬೇರ್ಬೇರೆ ವೇಷ ತೊಟ್ಕೊಂಡು ನಮ್ ಹಾಡಿಗೆ ಬಂದಿದ್ರು. ಮೊದ್ಲು ಒಂದಿಬ್ರು ಅಧಿಕಾರಿಗಳು ಶಾಕ್ ರೀಕಾದ ಡ್ರೆಸ್ ಮಾಡ್ಕೊಂಡು, ಕೈಲಿ ದಫ್ತರ್ ಹಿಡ್ಕೊಂಡು ಮನೆಮನೆಗೆ ಬಂದ್ರು. ಮನೇಲಿರೋ ಜನ, ಜಾನುವಾರು, ಮನೆ ಕಟ್ಟ, ಬಾಗ್ಲು ವಸ್ತು-ಒಡ್ವೆ. . . ಹೀಗೆ ಒಂದೊಂದನ್ನೂ ಬರ್ಕೋತಾ ಹೋದ್ರು. ಅದು ಯಾಕ್ ಅಂತ ನಮ್ಮ ಹಿರಿಯರ್ಗೆ ಏನೂ ತಿಳ್ದಿರ್ಲಿಲ್ಲ. ಅಧಿಕಾರಿಗಳ್ನ ಇದೆಲ್ಲಾ ಯಾಕ್ ಕೇಳ್ತಿದ್ದೀರಿ ಅಂತ ಯಾರೋ ಕೇಳ್ದಾಗ 'ಸರ್ಕಾರಕ್ಕೆ ನಿಮ್ ಸ್ಥಿತಿ-ಗತಿ ಬಗ್ಗೆ ವರದಿ ಮಾಡೋಕೆ ಬಂದಿದ್ದೀವಿ. ಇದನ್ನ ಬರ್ದು ಸರ್ಕಾರಕ್ಕೆ ಕೊಟ್ರೆ, ನಿಮ್ಗೆ ಅವ್ರಿಂದ ಸಹಾಯ ಸಿಗತ್ತೆ ನೀವ್ ಮಾಹಿತಿ ಕೊಡ್‌ದಿದ್ರೆ ನಿಮ್ ಸ್ಥಿತಿ ಸುಧಾರ್ಸಲ್ಲ, ನೀವ್ ಹೀಗೇ ಇರ್ಬೇಕಾಗತ್ತೆ'ಅಂದ್ರು. ನಮ್ಗೆ ಅವ್ರ ಬಗ್ಗೆ ಅನುಮಾನ ಬಂತು. ಯಾಕಂದ್ರೆ ಸರ್ಕಾರಿ ಅಧಿಕಾರಿಗಳ್ ಥರಾ ಇವ್ರ ಡ್ರೆಸ್ ಕಾಣೆಸ್ತಿರ್ಲಿಲ್ಲ. ಅವ್ರು ವರ್ಷದಲ್ಲಿ ಯಾವಾಗ್ಲೊ ಒಮ್ಮೆಬಂದು, ಏನೋ ಕಾಟಾಚಾರ್ಕೆ ಬರ್ಕೊಂಡು ಹೋದ್ರೆ, ಮತ್ತೆ ನಮ್ ಹಾಡೀ ಕಡೆಗೆ ತಲೆ ಹಾಕ್ತಿರ್ಲಿಲ್ಲ. ಸರ್ಕಾರದಿಂದಾಗ್ಲಿ ಸರ್ಕಾರಿ ನೌಕರರಿಂದಾಗ್ಲಿ ನಮ್ ಹಾಡಿಯ ಕಾನಿಶ್‌ಮಾರಿ ಮಾಡ್ತಿರೋ ಇವ್ರ ರೀತಿ ಸಹಜವಾಗೇ ಅನುಮಾನ ತಂದಿತ್ತು. ಪತ್ತೆ ಮಾಡಿದ್ರೆ ಅವ್ರೆಲ್ಲ ಅಲ್ಯುಮೀನಿಯಂ ಕಂಪ್ನಿ ನೌಕರ್ರು ಅಂತ ತಿಳೀತು. ಅದು ಮುಗೀತಿದ್ದಂತೆ ಏಳೆಂಟು ಮಂದಿ ಇಂಜಿನಿಯರ್ರು ನಮ್ ಊರ ಸರ್ವೆಗೆ ಅಂತ ಬಂದ್ರು. ಆಗಂತೂ ಅವ್ರ ಬಗ್ಗೆ ಆಕ್ರೋಶ ಹುಟ್ಟಿ, ಅವ್ರನ್ನೆಲ್ಲ ಹಿಡ್ಕೊಂಡು ಬಂದು ಊರಲ್ಲಿ ಸಿಕ್ಕಾಪಟ್ಟೆ ಹೊಡೆದ್ವಿ. ಕೊನೆಗೆ ಪೊಲೀಸ್ ಜೀಪ್ ಬಂದು ಅವರ್ನ ಬಿಡ್ಸಿಕೊಂಡು ಹೋಯ್ತು. ಅವ್ರಿಗೆ ನಮ್ಮವ್ರು ಕೊಟ್ಟ ಶಿಕ್ಷೇನ ಈಗ ನೆನಿಸಿಕೊಂಡ್ರೆ ನಗು ಬರುತ್ತೆ' ಎಂದಾಗ ಅಲ್ಲಿದ್ದ ಕೆಲವರ ಮುಖದಲ್ಲೂ ನವಿರಾದ ನಗು ಸುಳಿದಾಡುತ್ತಿದ್ದುದು ಗಮನಕ್ಕೆ ಬಂದಿತು. ಅಷ್ಟರಲ್ಲಿ ಒಬ್ಬ ಹುಡುಗ ಬಂದು, ಭಗವಾನ್‌ನ ಕಿವಿಯಲ್ಲಿ ಏನೋ ಉಸುರಿದ. ಅದನ್ನು ಕೇಳಿ 'ಈಗ ಬರ್ತೀನಿ' ಎಂದು ಮಾತನ್ನು ಅಲ್ಲೇ ಮುಗಿಸಿ ಭಗವಾನ್ ಹೊರಟ. ಅವನ ಸನ್ನೆಯನ್ನು ಗಮನಿಸಿ ಅಲ್ಲಿದ್ದ ನಾಲ್ಕಾರು ಯುವಕರೂ ಅವನ ಹಿಂದೆಯೇ ಹೊರಟುಬಿಟ್ಟರು. ಕುಳಿತವರಲ್ಲೇ ಗುಜುಗುಜು ಆರಂಭವಾಯಿತು.

ಅರ್ಧಗಂಟೆ ಕಾದರೂ ಭಗವಾನನ ಸುಳಿವಿಲ್ಲ. ಎಲ್ಲರೂ ಒಬ್ಬೊಬ್ಬರಾಗಿ ಏಳುತ್ತಿದ್ದಂತೆ, ನಾವೂ ಹಾಡಿಯಲ್ಲಿ ಓಡಾಡಿಕೊಂಡು ಬರೋಣವೆಂದು ಹೊರಟೆವು. ದೇಬರಂಜನ್ ಮತ್ತು ರವಿ ನಮಗೆ ಜೊತೆಯಾದರು. ಎಲ್ಲರ ಪ್ರಶ್ನಾರ್ಥಕ, ಕುತೂಹಲದ ನೋಟವನ್ನು ಎದುರುಗೊಳ್ಳುತ್ತ ನಾವು ಸಾಗಿದರೆ, ದೇಬರಂಜನ್ ಮತ್ತು ರವಿ ಎಲ್ಲರ ನಮಸ್ಕಾರಗಳಿಗೆ ಉತ್ತರಿಸುತ್ತ ಸಾಗಿದರು. ಸುತ್ತಲೂ ಬೆಟ್ಟಸಾಲು. ಮಧ್ಯೆ ಕಿಬ್ಬಿಯಂತಿರುವ ಜಾಗದಲ್ಲಿ ಜನ ಕೃಷಿ ಮಾಡಿದ್ದರು. ರಾಗಿ, ಭತ್ತ, ಗೋವಿನ ಜೋಳದ ಸಸಿಗಳು ವಿವಿಧ ಮಟ್ಟದಲ್ಲಿ ಬೆಳೆದುನಿಂತಿದ್ದವು. ಒಂದೇ ಗದ್ದೆಯಲ್ಲಿದ್ದ ಪೈರುಗಳಲ್ಲಿ ಕೆಲವು ಪೌಷ್ಟಿಕವಾಗಿದ್ದರೆ, ಕೆಲವು ಎರಡೇ ಸಾಲಿನ ತೆನೆ ಹೊತ್ತುನಿಂತಿದ್ದವು. ಯಾವ ರಾಸಾಯನಿಕ ಗೊಬ್ಬರವನ್ನೂ ಬಳಸದ, ಬೆಳೆದುದರಲ್ಲೇ ತೃಪ್ತಿಪಡುವ ಅವರ ಕೃಷಿ ವಿಧಾನ ಕಂಡು ಅಚ್ಚರಿಯಾಯಿತು. ಅಲ್ಲಿನ ಜನರಿಗೆ ಇರುವುದಕ್ಕಿಂತ ಇಲ್ಲದ ಸವಲತ್ತುಗಳೇ ... . ಆದರೂ ಅದಕ್ಕಾಗಿ ಅವರಲ್ಲಿ ಕೊರಗಿಲ್ಲ. 'ಇಂದು ಇಂದ್‌ಗೆ ನಾಳೆ ನಾಳೆಗೇ' ಎಂದು ಹಾಡಿಕೊಂಡು ಬದುಕುವ ರೀತಿ ಅವರದು. ರವಿ ಏನೋ ಗುನುಗುತ್ತಿದ್ದ. ಒಳ್ಳೆಯ ಕಂಠವೂ ಇತ್ತು, ದಾರಿ ಉದ್ದಕ್ಕೂ ಸುಮ್ಮನೆ ನಡೆಯುವ ಬದಲು ಹಾಡು ಕೇಳಿಕೊಂಡು ಹೋಗೋಣವೆಂದು ಹಾಡಲು ಒತ್ತಾಯಿಸಿದೆವು.

ದೇಶ ನುಂಗದಂತಾರೆ ಈ

ಸರಕಾರದವ್ರು ಜಾಗಾನೇ ಕೊಡದಿಲ್ಲಂತಾರೇ ||ದೇಶ||

ರಾಜಕೀಯದವ್ರು ಬತ್ತಾರೆ

ಓಟು ಕೇಳಲು ಬತ್ತಾರೆ

ಓಟು ಪಡೆದು ಸೀಟಿಗೋಗ್ಗಿ

ದೇಶ ತಮ್ಮದಂತಾರೆ ||ದೇಶ ನುಂಗದಂತಾರೆ||

ಇದೆಲ್ಲಾ ಸಮೂಹವಾಗಿ ಹಾಡಿದಾಗಲೇ ಅದಕ್ಕೆ ಒಂದು ಗತ್ತು ಬರೋದು ಎಂದು ರವಿ ಹಾಡಿನಿಂದ ಮಾತಿಗೆ ಹೊರಳಿಕೊಂಡ.

ಪಟ್ಟಣದ ರವಿ ಆದಿವಾಸಿಯ ಹುಡುಗಿಯನ್ನು ಪ್ರೇಮಿಸಿದ ಸ್ವಾರಸ್ಯಕರ ಕಥೆ ಕೇಳುತ್ತ ಸಾಗುತ್ತಿದ್ದಂತೆ, ತನ ಪರಿಚಯದವರ ಹಟ್ಟಿ ಎದುರಾಯಿತು. 'ಅವರು ಊಟಕ್ಕೆ ಕರೆದರೆ ಒಪ್ಪಬೇಡಿ' ಎಂಬ ಎಚ್ಚರಿಕೆ ನುಡಿ ನಡುವೆಯೇ ತೂರಿ ಬಂದಿತು. 'ಯಾಕೆ?' ಎಂಬ ನಮ್ಮ ಪ್ರಶ್ನೆಗೆ ದೇಬರಂಜನ್ ಹೋರಾಟದ ಸಂದರ್ಭವೊಂದನ್ನು ನೆನಪಿಸಿಕೊಂಡ. ಹೋರಾಟದ ಮಾತಿನಲ್ಲೇ ತಲ್ಲೀನರಾಗಿದ್ದ ಜನರು, ಸೂರ್ಯ ನಡುನೆತ್ತಿಯಿಂದ ಇಳಿಯತೊಡಗಿದಾಗ, ಬಂದವರಿಗೆಲ್ಲಾ ಊಟ ನೀಡಬೇಕೆಂದು ನೆನಪಿಸಿಕೊಂಡು, 'ಉಣ್ಣುತ್ತೀರಾ?' ಎಂದರಂತೆ. ಹೊಟ್ಟೆ ಚುರುಗುಟ್ಟುತ್ತಿದ್ದ ದೇಬರಂಜನ್ ಮತ್ತಿತರರು ಆ ಕರೆಗೇ ಕಾದಿದ್ದವರಂತೆ ಒಪ್ಪಿದರು. ಆದರೆ ಅರ್ಧ ಗಂಟೆ ಕಳೆದರೂ ಊಟವೂ ಇಲ್ಲ, ಅಡುಗೆಯ ಪರಿಮಳವೂ ಇಲ್ಲವಾದಾಗ, ಕುತೂಹಲ ಮತ್ತು ಅಸಹನೆಯಿಂದ ಇವರು ಒಳಹೋಗಿ ನೋಡಿದರೆ, ಆಗಿನ್ನೂ ಒನಕೆಯಿಂದ ಭತ್ತಕುಟ್ಟಿ, ತೌಡು ತೂರುತ್ತಿದ್ದರಂತೆ! ಅದನ್ನು ನೆನಪಿಸಿಕೊಂಡು ದೇಬರಂಜನ್ ಮುಂದಾಗಿ ನಮ್ಮನ್ನು ಎಚ್ಚರಿಸಿದ್ದ.

ಆ ಮನೆಯೊಡೆಯ ವಯಸ್ಸಲ್ಲಿ ತೀರಾ ಹಿರಿಯನಾಗಿದ್ದ. ಅವರ ಆಚಾರ-ವಿಚಾರದ ಕುರಿತು ಸಂದರ್ಶನ ಮಾಡುವ ಉತ್ಸಾಹ ನಮ್ಮದು. ಆತನೋ ಒಂದು ದೊಡ್ಡ ತಂಬಿಗೆಯಲ್ಲಿ ಏನನ್ನೋ ತುಂಬಿಸಿಕೊಂಡು ತಂದು, ಎಲ್ಲರಿಗೂ ಒಂದೊಂದು ಲೋಟ ಮುಂದಿಟ್ಟ. 'ಮಹುವಾ ಎಂಬ ಹೂವಿನಿಂದ ಮಾಡಿದ ಪಾನೀಯ, ಕುಡಿಯಿರಿ' ಎಂದು ಒತ್ತಾಯಿಸಿದ. ಲೋಟ ಮುಖದೆಡೆಗೆ ತರುತ್ತಿದ್ದಂತೆ ಹೂವಿನ ಪರಿಮಳ ಹಿತವಾಗಿತ್ತು; ರುಚಿ ಎಂಥದೋ ಬೇರನ್ನು ಕುದಿಸಿ ತೆಗೆದಂತಿತ್ತು. ನಮ್ಮ ಮುಖಭಾವ ವೀಕ್ಷಿಸುತ್ತ ಕುಳಿತಿದ್ದ ಹಿರಿಯನನ್ನು ಕಂಡು, ಒಲ್ಲೆ ಎನ್ನಲಾಗದೆ ಕುಡಿದದ್ದಾಯ್ತು. ಅವರ ಅತಿಥಿ ಸತ್ಕಾರದ ಒಂದು ವಿಧವೇ ಮಹುವಾ ಪಾನೀಯ ನೀಡೋದು ಎಂದು ತಿಳಿಯಿತು.

ಊರ ಕೆಲ ಯುವಕರಿಗೆ ಕಂಪೆನಿಯ ವಾಚ್‌ಮನ್‌ಗಳು ಯದ್ವಾತದ್ವಾ ಹೊಡೆದಿದ್ದಾರೆಂದೂ, ಕೆಲವರಿಗೆ ತುಂಬ ಪೆಟ್ಟಾಗಿದೆ ಎಂದೂ, ಭಗವಾನ್ ಅದಕ್ಕಾಗಿ ನಡುವಲ್ಲಿ ಎದ್ದುಹೋದ ಎಂಬುದೂ ಅರಿವಾದದ್ದು ನಮಗೆ ಅಲ್ಲಿಯೇ. ಹೊಡೆದವರೂ ಹೊಡೆಸಿಕೊಂಡವರೂ ಇಬ್ಬರೂ ಆದಿವಾಸಿಗಳೇ. ಕಂಪೆನಿಯ ಅಧಿಕಾರಿವರ್ಗ ತಮ್ಮ ಈವರೆಗಿನ ಸೋಲನ್ನು, ನಷ್ಟವನ್ನು ತುಂಬಿಸಿಕೊಳ್ಳುವ ವಿಧಾನದಲ್ಲಿ ಆದಿವಾಸಿಗಳ ವಿರುದ್ಧ ಆ ಜನಾಂಗದ ಕೆಲವರನ್ನೇ ಎತ್ತಿಕಟ್ಟಿರುವುದೂ ಒಂದಾಗಿತ್ತು. ಮಹಾತ್ಮರು ಕಲಿಸಿದ ಒಡೆದು ಆಳುವ ನೀತಿ ಇಂದಿಗೂ ಪರಿಣಾಮಕಾರಿಯಾಗಿ ಚಲಾವಣೆಯಾಗುತ್ತಿದೆ.

"ಆದಿವಾಸಿಗಳು ನಿಸ್ಸಹಾಯಕರು ಅಂದುಕೊಂಡಿದ್ವಿ. ಅವರೊಳಗೂ ಪ್ರತಿರೋಧ ಹೇಗೆ ಪ್ರಜ್ವಲಿಸಿದೆ ಅಂತ ಈಗ ಭಗವಾನ್ ಮಾತನಾಡುವಾಗಲೇ ತಿಳಿದಿದ್ದು."

"ಅವ್ರು ಅಮಾಯಕರು; ನಿರುಪದ್ರವಿಗಳು. ಆದ್ರೆ ತಮ್ಮ ಬದುಕಿಗೇ ಬೆಂಕಿ ಬೀಳ್ತಿದೆ ಅಂತ ಗೊತ್ತಾದಾಗ ಸಿಡಿದೆದ್ದವರು. ಅವರನ್ನ ಎಚ್ಚರಿಸೋದು ಒಂದು ಹಂತದ ಕೆಲಸವಾದ್ರೆ ಅವರ ಸಿಟ್ಟು, ಆವೇಶ, ಪ್ರತಿರೋಧದ ರೀತಿಗಳ್ನ ನಿಯಂತ್ರಿಸೋದು ನಮ್ಗೆ ಇನ್ನೊಂದ್ ದೊಡ್ಡ್ ಕೆಲ್ಸ ಆಗಿತ್ತು. ಅವ್ರಿಗೆ ಸರಕಾರ, ಪೊಲೀಸ್ ವ್ಯವಸ್ಥೆ, ಅಲ್ಲಿಯ ಕಾನೂನು ಯಾವ್ದೂ ಗೊತ್ತಿಲ್ಲ, ಸಿಕ್‌ಸಿಕ್ಕವ್ರನ್ನ ಹಿಗ್ಗಾಮುಗ್ಗಾ ಎಳೆದಾಡಿ, ಸಿಕ್ಕದ್ರಲ್ಲಿ ಹೊಡೆದ್ ಬಿಡ್ತಿದ್ರು."

"ಹೌದಾ? ಆ ಥರಾ ಏನ್ ಆಗಿತ್ತು?"

"ಕಂಪೆನಿಯ ಗಣಿಗಾರಿಕೆಗೆ ಈ ಊರಿನವ್ರ ವಿರೋಧ ದೊಡ್ಡದಾಗ್ತಾ ಹೋದಾಗ ಇಲ್ಲೊಂದು ಪೊಲೀಸ್ ಸ್ಟೇಷನ್ ತಂದು, ನಿಯಂತ್ರಿಸ್ಬೇಕು ಅಂತ ಸರಕಾರ ಪ್ರಯತ್ನ ಮಾಡಿತ್ತು, ಇಲ್ಲಿ ಕಳ್ಳತನ, ಕೊಲೆ-ಸುಲಿಗೆ, ದರೋಡೆ ಏನೂ ನಡೆದಿಲ್ಲ, ನಡೆಯೂದು ಇಲ್ಲ, ನಮ್ಗೆ ಪೊಲೀಸ್ ಸ್ಟೇಷನ್ ಬೇಡ ಅಂತ ಜನ್ರು ತಿರುಗಿಬಿದ್ರು. ಒಂದ್ ದಿವ್ಸ ಎಸ್ಪಿ, ಡಿಸಿ, ಚೀಫ್ ಸೆಕ್ರೆಟರಿ, ಒಂದಿಬ್ರು ರಾಜಕಾರಣಿಗಳು ಸ್ಟೇಷನ್‌ಗೆ ಜಾಗ ನೋಡೋಕೆ ಬಂದಿದ್ರಂತೆ. ಇವ್ರು ಗುಂಪುಗುಂಪಾಗಿ ಹೋಗಿ ಅವ್ರ ಮೇಲೆ ಸಗಣಿ ನೀರ್ ಎರಚಿ, ಅವ್ರ ಬಟ್ಟೆ ಕಿತ್ತಾಕಿ, ಸಿಕ್ಕಸಿಕ್ಕದ್ರಲ್ಲಿ ಅವರ್ನೆಲ್ಲಾ ಹೊಡೆದು...."

"ನಿಜವಾಗ್ಲೂ....ಆಮೇಲೇನಾಯ್ತು?"

"ಅವರ್‍ಯಾರೂ ಇಂಥಾ ಪ್ರತಿರೋಧ ನಿರೀಕ್ಷೆನೇ ಮಾಡಿರ್ಲಿಲ್ಲ....ಬಂದ ದಾರಿಗೆ ಸುಂಕ ಇಲ್ಲ ಅನ್ನೋ ಹಾಗೆ ವಾಪಸ್ ಹೋದ್ರಂತೆ.... ಇದು ಸರಕಾರದ ಮಟ್ಟದಲ್ಲೂ ದೊಡ್ಡ್ ಚರ್ಚೆ ಆಯ್ತು. ಕೆಲವ್ರನ್ನ ಬಿಟ್ರೆ ಉಳಿದಂತೆ ಎಲ್ಲ ಜನ್ರು ಗಣಿಗಾರಿಕೆಗೆ ಒಪ್ಪಿದ್ದಾರೆ ಅಂತ ಸರ್ಕಾರಕ್ಕೆ ಸುಳ್ಳು ವರದಿ ಕೊಟ್ಟಿದ್ರು. ನಾಕೈದು ಜನ್ರು ವಿರೋಧ ಮಾಡಿದ್ರೆ ಇಷ್ಟೆಲ್ಲ ಹೇಗೆ ಸಾಧ್ಯ ಅಂತ ಅಧಿಕಾರಿಗಳ್ನ ಸರಕಾರದ್ ಮಟ್ಟದಲ್ಲಿ ಪ್ರಶ್ನೆ ಮಾಡಿದ್ರು. ಆದ್ರೂ ರಾಜಕೀಯದವ್ರೇ ಇದ್ರಲ್ಲಿ ಲಾಭದಾಸೆಗೆ ಸೇರಿದ್ದಾರಲ್ಲ, ಹೀಗಾಗಿ....."

"ಅವ್ರ ಕಾನೂನು ಯಾರಿಗ್ ಬೇಕು? ನಮ್ಮನ್ ನಮ್ಮವ್ರಿಂದ್ಲೇ ಹೊಡಿಸ್ತಾರಲ್ಲ! ನಮ್ಮಲ್ಲಿ ಭಿನ್ನಭಾವ ಇರ್ಲಿಲ್ಲ. ಈಗ ನಾವ್‌ನಾವೇ ಕಚ್ಚಾಡ್ಕೊಳ್ಳೊ ಹಾಂಗೆ ಮಾಡಿಟ್ರು. ಅವ್ರ ವಂಶ ನಿರ್ವಂಶ ಆಗ್ಲಿ...ಅವ್ರ ಕೈಗೆ ನಾಗರ ಕಡೀಲಿ..." ಯಾರ ಮಾತೆಂದು ನೋಡಿದರೆ, ತೇವಗೊಂಡ ಕಣ್ಣುಗಳಿಂದ ಊರಿನ ಹಿರಿಯರೊಬ್ಬರು ಹೇಳುತ್ತಿದ್ದರು.

"ಯಾರ್ ಬಗ್ಗೆ ಇವ್ರು ಹೇಳ್ತಿರೋದು?"

"ಕಂಪೆನಿಯವ್ರು ತಳಊರೋಕೆ ಈಗ್ಗೆ 8 ವರ್ಷದ್ ಹಿಂದೆ ಜನಾಭಿಪ್ರಾಯ ಸಂಗ್ರಹದ ಕೆಲಸ ಆರಂಭಿಸಿದ್ರು. ಜಿಲ್ಲಾಧಿಕಾರಿ ಕಚೇರಿಗೇ ಜನರನ್ನ ಕರ್ಕೊಂಡು ಹೋಗಿ, ಅದಕ್ಕೆ ಒಪ್ಪಿಗೆ ಇದೆ ಅಂತ ಹೇಳಿಸೋ ಕೆಲ್ಸಕ್ಕೆ ಪ್ರತಿಗ್ರಾ... ಒಬ್ಬೊಬ್ಬ ಕಮ್ಯುನಿಕೇಟರ್ ಮತ್ತು ಮೋಟಿವೇಟರ್ ... ನೇಮಕ ಮಾಡಿದ್ರು. ಅವ್ರೆಲ್ಲ ಈ ಹಳ್ಳಿಯ ಯುವ... ಅಲ್ಪಸ್ವಲ್ಪ ಶಾಲೆ ಕಲಿತು, ಎಡಬಿಡಂಗಿಗಳಾದ ಯುವ... ಈ ಯಜಮಾನಿಕೇನ ಕಂಪೆನಿಯವ್ರು ಕೊಟ್ರು. ... ಕಂಪೆನಿ ಪರವಾಗಿ ಜನ್ರನ್ನ ಪುಸಲಾಯಿಸೋ ಕೆಲ್ಸ ಮಾಡಿ... ಕಂಪೆನಿ ಗಣಿಗಾರಿಕೆ ಮಾಡೋಕೆ ನಮ್ ಒಪ್ಗೆ ... ಅಂತ ಹೇಳಿಸಿದ್ರೆ ತಲೆಗೆ ಇಷ್ಟಿಷ್ಟು ಅಂತ ಕಮ್ಯುನಿಕೇಟ... ಕಂಪೆನಿಯವ್ರು ದುಡ್ಡು ಕೊಡೋರು. ಪಟ್ಟಣ... ಅದುವರೆಗೆ ನೋಡದ ಜನರು, ಅದನ್ನ ನೋಡ್ದ ಹ... ಆಯ್ತು ಅಂತ ಕೆಲವ್ರು, ಕಂಪೆನಿಯವ್ರು ಕೊಡ್ತೋ ಭ... ಊಟ, ಸಿನಿಮಾ ನೋಡೋ ಅವಕಾಶಕ್ಕಾಗಿ ಕೆ... ಅವ್ರು ನೀಡೋ ಹಣದ ಆಸೆಗೆ ಮತ್ತೆ ಕೆ... ಮೋಟಿವೇಟರ್ ಜೊತೆ ಡಿಸಿ ಕಚೇರಿಗೆ ಹೋಗಿ ಬಂ...

"ಎಷ್ಟು ಜನ ಹೀಗೆ ಹೋದವ್ರು?"

"ಹೋದವ್ರಲ್ಲಿ ಎಲ್ರೂ ಈ ಗ್ರಾಮಗಳವರಲ್ಲ. ... ಇರೋದು 24 ಹಳ್ಳಿಗಳು. ಇವರಲ್ಲಿ ಕೆಲವು ... ಹೋಗಿದ್ರು. ಮತ್ತೆ ಯಾರ್‍ಯಾರ್ನೋ ಸಿಕ್‌ಸಿಕ್ಕವ್ರನ್ನ ... ಊರವ್ರು ಅಂತ ಹೇಳಿ ಡಿಸಿಗೆ ತೋರ್ಸಿದ್ದೇ ಹೆಚ್ಚು. ಅವ್ರ... ಸತ್ಯಾಂಶ ಬೇಕಿರ್ಲಿಲ್ಲ. ಇದೆಲ್ಲಾ ನಡೀವಾಗ ಊ... ಸಹಜವಾಗಿ ಸಂಘರ್ಷಗಳು ಹೆಚ್ತಾ ಹೋದ್ವು. ಇದನ... ಭಗವಾನ್‌ನಿಂದ್ಲೇ ಕೇಳಿದ್ರೆ ಚೆಂದ. ನಾನು ಎಷ್ಟ... ಹೊರಗಿನವ್ನು" ಎಂದ ದೇಬರಂಜನ್.

"ಇಲ್ಲ ಕಣೆ, ದೇಬರಂಜನ್, ರವಿ ಅವ್ರಂಥ ಕೆ... ಸ್ನೇಹಿತ್ರೆಲ್ಲ ತಮ್ಮ ಯೌವನ, ಬೆವರು, ಖಾಸಗಿ ಬದ... ಎಲ್ಲಾನೂ ಹಳ್ಳಿಗಳ ಹೋರಾಟಕ್ಕೆ ಬಸ್ಸಿದ್ದಾರೆ. ಭಗವಾ... 'ಮಾಯಾರೂಪ' ಅಂತ ಕಂಪೆನಿಯವ್ರ ಕೆಲ್ಸಕ್ಕೆ ಕರ... ಅದು ನಿಜ. ಮೊದ್ಲು ಗ್ರಾಮೀಣ ಅಭಿವೃದ್ಧಿ ಸಂಘ ಅಂ... ಅನಂತ್ರ ಅಭಿವೃದ್ಧಿಗಾಗಿ ವ್ಯವಹಾರ ಸಂಸ್ಥೆಗಳ ಒಕ್ಕ... ಅಂತ, ಗ್ರಾಮ್‌ಸಭಾ ಅಂತ, ಹೀಗೇ ಹತ್ತಾರು ಮಾರುವ... ತೊಟ್ಟು ಗಣಿಗಾರಿಕೆ ಕಂಪೆನಿಗಳು ತಳ ಊರೋ... ಪ್ರಯತ್ನಪಟ್ಟು ಸೋಲು ಕಂಡ್ವು. ಜನ್ರೂ ಹೋರ... ಹೈರಾಣಾದ್ರು. ಈಗ್ಗೆ ಎಂಟು ವರ್ಷದ್ ಹಿ... ಆದಿವಾಸಿಗಳು ಗಣಿಗಾರಿಕೆ ವಿರೋಧಿಸಿ ಮೆರವ... ಮಾಡಿದ್ರು. ಹತ್ತು ಸಾವ್ರ ಜನರು ಸೇರಿದ್ರು. ಗೊ... ಆವತ್ತು ಆದಿವಾಸಿಗಳ್ ಹೆಂಗ್ ಸಿಟ್ಟಿಂದ ತಮ್ ವಿರೋ... ಮಾಧ್ಯಮದ ಮುಂದೆ ಇಟ್ಟಿದ್ರು ಅಂತೀ" ಸರಸ್ವತಿ ... ಮಾತು ಮುಗಿಯುವಷ್ಟರಲ್ಲಿ ಭಗವಾನ್ ಹಿಂದಿರುಗಿ... ಅವನು ಎದ್ದುಹೋದ ಕಾರಣ ತಿಳಿದ ನಾವು ಅ... ಮುಖವನ್ನೇ ನೋಡುತ್ತಿದ್ದೆವು. ಅಲ್ಲಿ ಯಾವ ಗಾಬರಿಯಾ... ಹೆದರಿಕೆಯಾಗಲಿ ಕಾಣುತ್ತಿರಲಿಲ್ಲ, ಬದಲಾಗಿ ಸ್ನಿಗ್ಧ ... ಇಣುಕುತ್ತಿತ್ತು.

"ನಿಮ್ಗೆ ಬೇಕಾದ್ ಮಾಹಿತಿ ಸಿಕ್ತಾ" ಎಂದ.


"ಕಂಪ್ನಿಯ ಕೆಲವು ಮಾಯಾರೂಪ ತಿಳಿ... ಗ್ರಾಮೀಣ ಅಭಿವೃದ್ಧಿ ಸಂಘದ ಬಗ್ಗೆ ಸರಸ್ವತಿ ಹೇಳ್ತಿ...

"ಹಾಂ. ಅದೊಂದು ಕತೆ. ಗ್ರಾಮೀಣ ಅಭಿ... ಸಂಘ ಅಂತೊಂದು ಮಾಡಿದ್ರು. ಆದ್ರ ಕಡೆಯಿ... ಆಲೂಗಡ್ಡೆ ಟೊಮ್ಯಾಟೋ ಇತ್ಯಾದಿ ಬೀಜ ನಿಮ್ಗೆ ಕೊ... ಅಂದ್ರು. ಶಾಲೆ, ರಸ್ತೆ ಕುಡಿಯೋ ನೀರು, ಆಸ್ಪತ್ರೆ ... ಎಲ್ಲಾ ಸೌಕರ್ಯ ನೀಡಿ ಐದು ವರ್ಷದಲ್ಲೇ ಮಾದರಿ ಗ್ರಾ... ಮಾಡ್ತೀವಿ ಅಂದ್ರು. ಈಗ್ಲೂ ನೀವ್ ಬೇಕಾದ್ರೆ ಹ... ನೋಡಿ... ಅವ್ರ ಮಾದರಿ ಗ್ರಾಮ ಹ್ಯಾಗಿದೆ ಅಂತ. ... ಮಾತ್ ನಂಬಿ ಒಪ್ಕೊಂಡ್ ಹೋದವ್ರು ... ಅನುಭವಿಸ್ತಿದ್ದಾರೆ: ಮೊದಲು ಕಡಿಮೆ ಬೆಲೆಗೆ ಕು... ತಮ್ಮ ಜಮೀನ್ ಮಾರಿಕೊಂಡವ್ರು ಬೀದಿಗೆ ಬಿದ್ದಿದ...

"ನಿಮ್ ಹೋರಾಟಕ್ಕೆ ಯಾವ್ ಪಕ್ಷ ಬೆಂ... ಕೊಡ್ತು?"

"ನಾವು ಯಾವ್ ಪಕ್ಷಕ್ಕೂ ಸೇರಿದವ್ರಲ್ಲ. ರಾಜಕೀ... ಮುಖಂಡ್ರು ಎಲ್ಲ ಪಕ್ಷದಿಂದ್ಲೂ ನಮ್ಮ ಪತ್ರ...


ಆದಿವಾಸಿ ಮಹಿಳೆಯೊಂದಿಗೆ ಸರಸ್ವತಿ, ಸಬಿಹಾ ಭೂಮಿಗೌಡ ಮತ್ತು ಸುನಂ...


ಆದಿವಾಸಿಗಳ ಹಾಡಿಯಲ್ಲಿ ಭಗವಾನ್, ಬಸವ, ಸುಮಿತ, ಸರಸ್ವತಿ ಮತ್ತು ದೇಬರಂಜನ್

ಬಿದ್ರು. ಮೊದಮೊದಲು ಅವ್ರೇ ನಮ್ಗೆ ಗಣಿಗಾರಿಕೆ
ಷ್ಟ ಬಗ್ಗೆ ಅರಿವು ಮೂಡಿಸಿದ್ರು; ಹೋರಾಟದ ಸ್ವರೂಪ
ಕೊಟ್ರು. ಹೋರಾಟದ್ ದಿಕ್ಸ ಮಾತ್ರ ಅವ್ರು ಆ
ಳ್ಗೇ ಬರ್ಲಿಲ್ಲ. ಯಾಕೆ ಬರ್ಲಿಲ್ಲ ಅನ್ನೋದು ಇವತ್ತಿನ್‌ವರೆಗೆ
ಗಂಟಿನ ರೀತಿ ನಂಗೆ ತಿಳ್ದಿಲ್ಲ. ಏನ್ ಅವ್ರು ತಮ್ಮನ್ನ
ನಿಯವ್ರಿಗೆ ಮಾರ್‌ಕೊಂಡ್ರೋ ಏನೋ!

"ಭಗವಾನ್, ಇಷ್ಟೆಲ್ಲ ಹೋರಾಟ ನಡೆದಾಗ ಪೊಲೀಸ್
ಕೂಡಾ ಆಗಿರ್‍ಬೇಕಲ್ಲ ನಿಮ್ ಮೇಲೂ......"

"ಅದ್ಕೇನೂ ಕಡಿಮೆ ಇಲ್ಲ. ಹೋರಾಟ ಶುರುವಾದಾಗ
ಹುಡುಗ. ಚಿಕ್ಕನ್ನ ಅಂತ ಕೇಸ್ ಹಾಕಿರಲಿಲ್ಲ.
ಊರಿನ ಹಲವ್ರ ಮೇಲೆ ಕೇಸ್ ಆಗಿತ್ತು. ಅದ್ರಲ್ಲಿ
ಷನ್‌ನಲ್ಲಿ ಹೊಡೆತ-ಬಡಿತ ತಿಂದು, ಜೈಲಲ್ಲಿ ಇದ್ದು
ದವ್ರು ಬಹಳ ಮಂದಿ. ಹೋರಾಟ ತೀವ್ರ ಆಗುವಾಗ
20-21ರ ವಯಸ್ಸು. ನನ್ನ ಹಿಡ್ಕೊಟ್ಟವ್ರಿಗೆ
ಮಾನ ಅಂತ ಘೋಷಿಸಿಯೂ ಇದ್ರು. ಆದ್ರೆ ನಾನ್
ಲ್ಲ. ನಮ್ಮವ್ರು ನನ್ನ್ ಕೈ ಬಿಡಲಿಲ್ಲ."

"ಇಷ್ಟೆಲ್ಲ ಪ್ರತಿರೋಧ ಇದ್ರೂ ಕಂಪೆನಿ ಹ್ಯಾಗೆ ಬಂತು?
ದಾಗ ಬಂತು?"

"ಅದು ಬಂದು ಐದು ವರ್ಷ ಆಯ್ತು. ಮೊದ್ಲು
ಲೀಸ್ ಸ್ಟೇಷನ್ ಮಾಡಿದ್ರು. ಜನ ಒಪ್ಪದಿದ್ದಾಗ ಮಿಲಿಟ್ರಿ
ದ್ರು. ಎರಡೆರಡು ಬಾರಿ ಗೋಲಿಬಾರ್ ಆಯ್ತು.
ನವರು ಕೆಲವ್ರು ಸತ್ರು. ಅಲ್ಲಿಂದಾಚ್ಗೆ ಜನ ಭಯಬಿದ್ರು.
ಯ ಯುವಕರಿಗೆ ಕೆಲಸ ಕೊಡ್ತೀವಿ ಅಂತ ಆಮಿಷ
ದ್ರು. ಸಂಘಟನೆ ದುರ್ಬಲ ಆಗ್ತಾ ಬಂತು."

"ಎಂಥಾ ಕೆಲ್ಸ? ಎಷ್ಟು ಜನ್ರಿಗೆ ಕೊಟ್ಟಿದ್ದಾರೆ?"

"ಕೆಲವ್ರಿಗೆ ಮಾತ್ರ ಕೆಲ್ಸ ಸಿಕ್ಕಿರೋದು. ಕೊಟ್ಟಿದ್ದೆಲ್ಲ
ಲುಗಾರರ ಕೆಲಸ; ಅದು ಬಿಟ್ರೆ ಪಿಯೂನ್ ಕೆಲ್ಸ.
ಕಾಯಂ ಅಲ್ಲ; ಗುತ್ತಿಗೆ ಮೇಲೆ ನೇಮಕ
ರೋದು. ತಿಂಗಳ್ಗೆ ಮೂರು ಸಾವ್ರ ಕೊಡ್ತಾರೆ. ಅವ್ರನ್ನ
ಥರಾ ಬಳಸ್ಕೋತಾರೆ."

"ಹಂಗಾದ್ರೆ, ಹೋರಾಟದ ಕುರಿತು ಇವತ್ತು ನಿನ್ಗೆ
ಅನ್ಸುತ್ತೆ? ಮುಗೀತು ಅಂತೀಯಾ?"

"ಇಲ್ಲ ಇಲ್ಲ, ಮುಗ್ದಿಲ್ಲ. ಇದೊಂದು ವಿರಾಮ.
ಂದ ದೂರ ಹೋದವ್ರಿಗೆ ಭ್ರಮನಿರಸನ ಆಗ್‌ಬಿಟ್ಟಿದೆ.
ನಿಯವ್ರು ಎರಡು ಹಳ್ಳಿ ಜನ್ರಿಗೆ ಮೊದಲು ಕೊಟ್
ಾರದ ಮೇಲೆ ಮತ್ತೆರಡು ಬಾರಿ ದುಡ್ ಕೊಟ್ರೂ
ಗೆ ಜಮೀನು ವಶಪಡಿಸಿಕೊಳ್ಳೋಕೆ ಇನ್ನೂ
...ಇದೊಂದು ವಿಶ್ರಾಂತಿ ಕಾಲ. ನಾಳೆ ಮತ್ತೆ ನಮ್
ರಾಟ ಗಟ್ಟಿಯಾಗುತ್ತೆ" ಎಂದು ಮಾತು ಮುಗಿಸಿದ.

ಭಾರವಾದ ಮನದಿಂದ ಅಲ್ಲಿಂದ ಹೊರಟಿದ್ದೆವು. ಇದ್ದ
ರು ದಿನಗಳ ಕಾಲ ಹಾಡಿಯ ಉದ್ದಗಲಕ್ಕೂ
ಾಡಿದ್ದೆವು. ಯಾರ ಮನೆಗೇ ಹೋದರೂ ಸರಳ,ಸುಂದರ
. ಕೂರಿಸಿ ಕೈ-ಬಾಯಿ ಸನ್ನೆಯ ಮೂಲಕ ಮಾತಾಡುವ
ಾಸಿ ಹಿರಿಯ ಮಹಿಳೆಯರು. ಎಳೆಯ
ವಿನಜೋಳದ ತೆನೆ ಮುರಿದು ಸುಟ್ಟು ತಂದು, ತಿನ್ನಿ
ಮುಂದೆ ಹಿಡಿಯುವ ಗೃಹಿಣಿಯರು, 'ಮಹುವಾ'
ಯುವನ್ನು ಕುಡಿಯಿರೆಂದು ಒತ್ತಾಯಿಸುವ,
ರಿಸಿದರೆ ಕೈಮುಗಿಯುವ, ಸ್ವೀಕರಿಸಿದರೆ ಸಂಭ್ರಮದಿಂದ
ಮಿಟುಕಿಸಿದೆ ನೋಡುವ ವೃದ್ಧರು, ತಮ್ಮ ಕೇಕೆ,
ಶೀಲತೆಗಳಿಂದ ಉತ್ಸಾಹ ಪುಟಿಸುವ ಎಳೆಯರು,
ಅನುಭವಗಳಿಗೆ ಅನುವು ಮಾಡಿಕೊಟ್ಟು ಪ್ರವಾಸದ
ುವರೆಗೆ ಜೊತೆ ನೀಡಿದ ದೇಬರಂಜನ್ ಮತ್ತು
ಂಗೆ ಹತ್ತಾರು ಸ್ಮೃತಿಗಳನ್ನು ಜೋಳಿಗೆಯಲ್ಲಿ ಭದ್ರವಾಗಿ
ಸಿಕೊಂಡು ಟ್ಯಾಕ್ಸಿ ಏರಿದ್ದೆವು. ಸಾಂಪ್ರದಾಯಿಕ
ಾಸಿಗಳ ಉಡುಗೆಗಳ ನಡುವೆ ನೈಟಿ ಮತ್ತು
ದಾರ್‌ಗಳು, ಹಾದಿಹೋಕರ ನಡುವೆ ಬೈಕು, ರಿಕ್ಷಾ
ಗಳು ಹಾಡಿಯ ಆಧುನಿಕತೆಯೊಂದಿಗೆ ಬೆಸೆಸಿಕೊಂಡ
ಸಾರುತ್ತಿದ್ದವು. ನಮ್ಮನ್ನು ಹೊತ್ತ ವಾಹನ ವೇಗವಾಗಿ
ವಿಲ್ದಾಣದ ಕಡೆಗೆ ಓಡುತ್ತಿತ್ತು, ಸಮಯಕ್ಕೆ ಸರಿಯಾಗಿ
ತಲುಪಿದಾಗ ನೆಮ್ಮದಿಯ ನಿಟ್ಟುಸಿರುಬಿಟ್ಟೆವು.
ನಿಮಿಷಗಳಲ್ಲಿ ಪ್ರಯಾಣಿಕರಿಗೆ ಕರೆ ಬಂದಾಗ
ಲಗೇಜು ಹಿಡಿದು ಸರತಿ ಸಾಲಲ್ಲಿ ನಿಂತು ವಿಮಾನದ
ಸೇರಿದೆವು. ಕಿಟಕಿಯಿಂದ ಮುಳುಗುವ ಸೂರ್ಯನ
ನೋಡುವುದರಲ್ಲಿ ಮುಳುಗಿದ್ದೆ, ಅಷ್ಟರಲ್ಲಿ 'ನಾವು
ಕುಳಿತಿರೋ ಈ ವಿಮಾನವು ಬಾಕ್ಸೈಟ್‌ನಿಂದ...'
ಂದನಷ್ಟು ಸಂಪಂದಾ ಬೆನಪಿಸಿದೊಡನೆ
ಮುಗಿದಂತಾಯ್ತು, ಭಗವಾನ್‌ನಿಂದ ಅವರಿಗೆ ಕೇಳಿದ್ದ
ಪಿಯ ಫ್ಯಾಕ್ಟರಿ ವಿರುದ್ಧದ ಆದಿವಾಸಿಗಳ
ಾಟ ಒಂದೊಂದಾಗಿ ಬಿಚ್ಚಿಕೊಳ್ಳತೊಡಗಿತು. ಕಾಲದ
ಷ್ಟು ವೇಗದ ರಭಸ ಎರಡನ್ನೂ ಇಷ್ಟು
ಳಿಸುವಂತೆ ವಿಮಾನವು ಕೆಲವೇ ಗಂಟೆಗಳಲ್ಲಿ
ಊರಿಗೆ ತಂದು ಇಳಿಸಿದಾಗ, ವಾಸ್ತವ-ಭ್ರಮೆಗಳ
ಜಗತ್ತಲ್ಲಿ ಓಡಾಡಿದ ದುಗುಡ ಸಮ್ಮದಾಗಿತ್ತು.

● ಡಾ. ಸುಚಿತಾ ಭೂಮೀಗೌಡ

ಪ್ರಭುಗಳೇ ಆರೋಪಿಗಳು, ನಾವು ನ್ಯಾಯ ನಿಭಾಯಿಸೋಣ



ಗುಮಾಸ್ತನ ಬ್ಲಾಗ್—22 ● ಕೆ.ಫಣಿರಾಜ್

ನೋಮ್ ಚೋಮ್‌ಸ್ಕಿ ಕಳೆದ ಅರವತ್ತು ವರ್ಷಗಳಿಂದ ಅಮೆರಿಕಾದ ಪ್ರಭುತ್ವ ಮತ್ತು ಅದರ ಹಿಂಬಾಲಕರಾದ ಜಗತ್ತಿನ ಇತರ ದೇಶಗಳ ಪ್ರಭುತ್ವಗಳ ಬುದ್ಧಿಗೆಟ್ಟ ಹಿಂಸೆಯನ್ನು ನಿರೂಪಿಸುತ್ತ ಬಂದಿದ್ದಾರೆ. ಅವರು ಪ್ರಭುತ್ವಗಳ ಕ್ರೌರ್ಯದ ಹಿಂದಿನ ಉದ್ದೇಶ ಮತ್ತು ಆ ಉದ್ದೇಶ ಸಾಧನೆಗಾಗಿ ಅನುಸರಿಸುವ ಅಮಾನುಷ ಮಾರ್ಗಗಳನ್ನು ವಿವರಿಸುವಾಗ ಎಂಥೂ ಬುದ್ಧಿಯ ಸಮತೋಲ ಕಳೆದುಕೊಂಡವರಲ್ಲ, ಉನ್ಮಾದದಿಂದ ಚೀರಿದವರಲ್ಲ. ಪ್ರಭುತ್ವದ ಕ್ರೌರ್ಯದ ವಿಧಿವಿಧಾನಗಳನ್ನು ಸಾಮಾನ್ಯ ಜನರಿಗೆ ಸರಳವಾದ ರೀತಿಯಲ್ಲಿ ವಿವರಿಸುವುದು ಬುದ್ಧಿಜೀವಿಗಳ ಜವಾಬ್ದಾರಿ ಎಂಬ ಗಾಢವಾದ ನಂಬಿಕೆಯಿಂದ ದಣಿವಿಲ್ಲದೇ ತಮ್ಮ ಕೆಲಸ ಮಾಡುತ್ತಿರುವ ಜೀವಂತ ಬುದ್ಧಿಜೀವಿ ಅವರು. ಅಧಿಕಾರಸ್ಥರ ಕ್ರೌರ್ಯವನ್ನು ಅರಿತ ಜನ ಮಾತ್ರವೇ ಆ ಕ್ರೌರ್ಯವನ್ನು ಕೊನೆಗಾಣಿಸಬಲ್ಲರು ಎನ್ನುವ ಗಟ್ಟಿ ವಿಶ್ವಾಸ ಉಳ್ಳ ಚೋಮ್‌ಸ್ಕಿಯಲ್ಲಿ ನಿರಾಶೆ-ಸಿನಿಕ ಭಾವವನ್ನು ನಾವು ಎಂದೂ ಕಾಣೆವು. ಅಂತಹ ಚೋಮ್‌ಸ್ಕಿ ಇತ್ತೀಚೆಗೆ ಕೊಲಂಬಿಯಾದ ಕವಿ ಜವಿಯೆರ್ ನರಂಜೋ ಜೊತೆಗೆ ನಡೆಸಿದ ಮಾತುಕತೆಯಲ್ಲಿ 'ಮನುಷ್ಯ ಸಂಕುಲದ ಚರಿತ್ರೆಯಲ್ಲಿ ಪ್ರಥಮ ಬಾರಿಗೆ ನಾವು ನಮ್ಮನ್ನೇ ನಾಶಗೊಳಿಸಿಕೊಳ್ಳುವತ್ತ ಅಪರಿಮಿತ ಉತ್ಸಾಹದಲ್ಲಿ ಓಡುತ್ತಿದ್ದೇವೆ ಅನ್ನೋದು ನಿಚ್ಚಳವಾಗುತ್ತಿದೆ..' ಎಂಬ ಮಾತನಾಡಿದ್ದಾರೆ. ಚೋಮ್‌ಸ್ಕಿಯಂಥ ಸಮಚಿತ್ತದ ಕಾಲಜ್ಞಾನಿಯ ಬಾಯಲ್ಲಿ ಆ ಮಾತು ಕೇಳಿ ನಾನು ನಡುಗಿದೆ. ಚೋಮ್‌ಸ್ಕಿ ನರಂಜೋ ಜೊತೆ ಮಾತನಾಡುತ್ತ ಇದ್ದದ್ದು ಪರಿಸರ ನಾಶ ಹಾಗು ಅಣ್ವಸ್ತ್ರ ಅಭಿಮಾನಗಳ ಕುರಿತು. ಅವರು ಹೇಳುತ್ತಾರೆ: "ಇದೆಲ್ಲ ನಮ್ಮ ಕಣ್ಣೆದುರೇ ನಡೆಯುತ್ತಿದೆ, ನಾವು ಕಾಣುತ್ತಿಲ್ಲ ಎಂಬಂತಿದ್ದೇವೆ. ಈ ವಿನಾಶದ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕೆಂದರೆ ನಾವು ನಮ್ಮ ವರ್ತಮಾನದಿಂದ ಕಳಚಿಕೊಳ್ಳಬೇಕು; ಒಂದೋ, ಮುಂದಿನ ಶತಮಾನದ ಇತಿಹಾಸಕಾರನ-ಮಸಲ ಇತಿಹಾಸಕಾರರು ಆಗ ಇರುತ್ತಾರೆಂದು ಭಾವಿಸಿಕೊಂಡು !-ಕಂಣೋಟದಿಂದ ಇಂದು ನಡೆಯುತ್ತಿರುವುದನ್ನು ನೋಡಬೇಕು. ಇಲ್ಲವೇ, ನಾವು ಪರಗ್ರಹದ ಜೀವಿಗಳು, ಭೂಮಿಯ ಮೇಲೆ ನಡೆಯುತ್ತಿರೋದನ್ನು ದೂರದಿಂದ ವೀಕ್ಷಿಸುತ್ತಿದ್ದೇವೆ ಅನ್ನೋ ತರಹ ನೋಡಬೇಕು. ಹಾಗೇ ನೋಡಿದಾಗ ತೀರ ಸೋಜಿಗದ ಸಂಗತಿಯೊಂದನ್ನು ನಾವು ಕಾಣುತ್ತೇವೆ: ಯಾರು ಅನಾಗರಿಕರು, ಆಧುನಿಕ ಜ್ಞಾನಹೀನರು-ಆದಿವಾಸಿಗಳು ಅಂತ ನಾವು ಕರೆಯುತ್ತೇವೆಯೋ ಅವರು ಮನುಷ್ಯ ಸಂಕುಲದ ವಿನಾಶವನ್ನು ಏನಾಕೇನ ತಡೆಯಲು ಹೋರಾಡುತ್ತಿದ್ದಾರೆ; ನಾಗರಿಕರೂ, ಬುದ್ಧಿ-ಬಲ ಉಳ್ಳವರು, ಅತ್ಯಂತ ಸೂಕ್ಷ್ಮ ತಂತ್ರಜ್ಞಾನ ಉಳ್ಳವರು ಏನಾಕೇನ ವಿನಾಶ ಮಾಡಿಯೇ ಸಿದ್ಧ ಎಂದು ಹೊರಟಿದ್ದಾರೆ... ಭಾರತವನ್ನೇ ನೋಡಿ: ಅಲ್ಲಿನ ಅಧಿಕಾರಸ್ಥರು ಗಣಿ ಸಂಪತ್ತಿಗಾಗಿ ಕಾಡು ಕೆರೆಯಲು ಹೊರಟಿದ್ದರೆ, ಆದಿವಾಸಿಗಳು ಕಾಡಿನ ರಕ್ಷಣೆಗೂ, ತಮ್ಮ ಜೀವಸಂಕುಲ ರಕ್ಷಣೆಗೂ ಭೀಕರ ಹೋರಾಟ ನಡೆಸುತ್ತಿದ್ದಾರೆ... ವೆನೆಜುಯಲದ ಅಧ್ಯಕ್ಷರಾಗಿದ್ದ ಹ್ಯುಗೊ ಚಾವೇಜ್‌ರನ್ನು ಕ್ರೂರಿ ಎಂದೆಲ್ಲಾ ನಮ್ಮ ಮಾಧ್ಯಮಗಳು ಚಿತ್ರಿಸಿದ್ದವಷ್ಟೇ. ಈಗ್ಗೇ ಕೆಲವು ವರ್ಷಗಳ ಕೆಳಗೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡುತ್ತ, ಅಮೆರಿಕ ಅಧ್ಯಕ್ಷ ಜಾರ್ಜ್ ಬುಷನನ್ನು ಪಿಶಾಚಿ ಎಂದರು ಎಂಬುದನ್ನೇ ದೊಡ್ಡ ಸಂಗತಿ ಮಾಡಿದೆವಲ್ಲ, ಅದೇ ಸಭೆಯಲ್ಲಿ ಅವರು ಒಂದು ಮುಖ್ಯ ವಿಷಯದ ಬಗ್ಗೆ ಮಾತನಾಡಿದರು. ನಮಗೆಲ್ಲ ತಿಳಿದಿರುವಂತೆ ವೆನೆಜುಯಲದ ನೈಸರ್ಗಿಕ ಸಂಪತ್ತು ಕಚ್ಚಾ ತೈಲ. ಅದರ ಪೂರಾ ಸಂಪತ್ತು ಗಳಿಕೆ ಕಚ್ಚಾ ತೈಲ ಮಾರಾಟವನ್ನೇ ಅವಲಂಬಿಸಿದೆ. ಅಂಥದ್ದರಲ್ಲಿ ಚಾವೇಜ್ ಹೇಳಿದ್ದು 'ನೋಡಿ ನೈಸರ್ಗಿಕ ತೈಲ ಅಪರಿಮಿತವಾದುದ್ದಲ್ಲ, ಅದನ್ನೇ ನೆಚ್ಚಿಕೊಳ್ಳುವುದು ಸಾಧುವಲ್ಲ, ನಾವು ಬದಲಿ ಇಂಧನ ಉತ್ಪಾದನೆ ಬಗ್ಗೆ ಗಂಭೀರವಾಗಿ ಯೋಚಿಸಬೇಕು.' ನೈಸರ್ಗಿಕ ಕಚ್ಚಾ ತೈಲದ ಮಾರಾಟವೇ ರಾಷ್ಟ್ರೀಯ ವರಮಾನವಾಗಿರುವ ದೇಶದ ಅಧ್ಯಕ್ಷ ಇಂತಹ ಮಾತುಗಳನ್ನಾಡಿದ್ದನ್ನು ಪಶ್ಚಿಮದ ಮಾಧ್ಯಮಗಳು ವರದಿ ಮಾಡಲೇ ಇಲ್ಲ ನೋಡಿ. ಚಾವೇಜ್ ಬುಡಕಟ್ಟು ಸಮುದಾಯದಿಂದ ಬಂದವರಾಗಿ ಹೀಗೆ ಯೋಚಿಸಬಲ್ಲರು ಎಂದು ನಮ್ಮ ತಲೆಹಿಗೆ ಬರುವುದಿಲ್ಲ, ಇಡೀ ಜಗತ್ತಿನಲ್ಲಿ ನೈಸರ್ಗಿಕ ತೈಲದ ಭೋಗವನ್ನು ನಿಯಂತ್ರಿಸುವ ಬಗ್ಗೆ ಯಾವ ನೀತಿ ನಿರೂಪಣೆಯೂ ಇಲ್ಲದ, ಹೆಚ್ಚೆಚ್ಚು ತೈಲ ಭೋಗ ಲಾಲಸೆಯನ್ನು ಹೊಂದಿರುವ, ಸಾಹುಕಾರ ಬಲಾಢ್ಯ ರಾಷ್ಟ್ರ ಅಮೆರಿಕ."


ಚೋಮ್‌ಸ್ಕಿ ಮಾತುಗಳಲ್ಲಿನ ವಿಷಾದ, ಅಮೆರಿಕ ಬರಿ ನೈಸರ್ಗಿಕ ಸಂಪನ್ಮೂಲ ವಿನಾಶದ ಬುದ್ಧಿಹೀನ ಮುಂದಾಳುವಾಗಿರುವುದಕ್ಕೆ ಸೀಮಿತವಾದುದ್ದಲ್ಲ, ಸಮಾನತೆ, ಸ್ವಾತಂತ್ರ್ಯ ಹಾಗು ಸಹೋದರತ್ವ ಭಾವಗಳಿಂದ ಕಟ್ಟಿಕೊಳ್ಳಬೇಕಾದ ತಾಳಿಕೆ-ಬಾಳಿಕೆಯ ಸಮಾಜ ಜೀವನದ ಮೇಲೂ ಅದು ದುಷ್ಪರಿಣಾಮ ಬೀರುತ್ತಿದೆ. ಮನುಷ್ಯ ಸಂಕುಲದ ಸಾಮಾಜಿಕ ಜೀವನದಲ್ಲಿ ಹಿಂದೆಂದೂ ಕಂಡರಿಯದಂಥ, ದುಷ್ಟ ಸಮಾಜದ ಮಾದರಿಯನ್ನು ಅಮೆರಿಕ ಕಟ್ಟಿಕೊಡುತ್ತಿದೆ. ಈ ತಿಂಗಳು ಜಾಹಿರಾದ, ಅಮೆರಿಕೆಯ ನ್ಯಾಷನಲ್ ಸೆಕ್ಯುರಿಟಿ ಏಜೆನ್ಸಿ (NSA)ಯು ಭೂಗೋಳದಾದ್ಯಂತ ಅಂತರ್ಜಾಲ ಸಂಪರ್ಕದಲ್ಲಿ ನಡೆಯುವ ಅತ್ಯಂತ ಖಾಸಗಿ ಸಂವಹನೆಯ ಮೇಲೆ ಕದ್ದು ಕಣ್ಣಿಟ್ಟು, ತನಗೆ ಸಂಶಯಾಸ್ಪದ ಅನಿಸಿದ ಸಂವಹನೆಗಳನ್ನು ಕದ್ದು ಸಂಗ್ರಹಿಸುವ 'ಪ್ರಿಸಂ' ಎಂಬ ಗುಪ್ತ ದಂಧೆ ನಡೆಸುತ್ತಿದೆ ಎನ್ನೋ ಗುಟ್ಟು ರಟ್ಟಾದ ಪ್ರಸಂಗವನ್ನೇ ಗಮನಿಸಿ. ಈ ಗುಟ್ಟುರಟ್ಟು ಮಾಡಿದವನು ಎಡ್ವರ್ಡ್ ಸ್ನೋಡೆನ್. ಅವನಿನ್ನು 29 ರ ಯುವಕ. ಹೈಸ್ಕೂಲ್ ವಿದ್ಯಾಭ್ಯಾಸವನ್ನೂ ಮುಗಿಸಲಾಗದ ಅಲೆಮಾರಿ ಮನದ ಹುಡುಗ. ಅಮೆರಿಕ ಮಾತ್ರವೇ ಪ್ರಪಂಚದಾದ್ಯಂತ ಪ್ರಜಾಪ್ರಭುತ್ವವನ್ನು ಬೇರೂರಿಸಬಲ್ಲಂಥ ದೇಶ ಎಂಬ ಶಾಲೆ ಪಾಠದ ಆದರ್ಶಕ್ಕೆ ಮನಗೊಟ್ಟು, ಇರಾಕ್ ಯುದ್ಧ ಶುರುವಾಗೋ ವೇಳೆ ಮಿಲಿಟರಿ ಸೇರುತ್ತಾನೆ; ತರಬೇತಿಯ ವೇಳೆ ಬಿದ್ದು ಎರಡೂ ಕಾಲಿನ ಮೂಳೆ ಮುರಿದುಕೊಂಡು ಸೇನೆಯಿಂದ ಹೊರಬರುತ್ತಾನೆ. ಅಮೆರಿಕೆಯಲ್ಲಿ ವಿದ್ಯಾಭ್ಯಾಸವೂ, ಬದುಕೂ ಅತಂತ್ರವಾದ ಹುಡುಗರು ಏನು ಮಾಡುತ್ತಾರೋ ಎಡ್ವರ್ಡ್ ಅದನ್ನೇ ಮಾಡಿದ-ಕಂಪ್ಯೂಟರ್ ಡ್ಯಾಟ ಮ್ಯಾನೇಜ್ಮೆಂಟಿನ ಪದವಿ ಪಡೆದ. ಅಮೆರಿಕೆಯ ಅಂತಾರಾಷ್ಟ್ರೀಯ ಬೇಹುಗಾರಿಕೆ ಸಂಸ್ಥೆ CIAಯಲ್ಲಿ ಕೆಲಸಕ್ಕೆ ಸೇರಿದ. ಅವನು ನೌಕರಿ ನಿಮಿತ್ತ ಜಪಾನ್, ಹಾಂಕಾಂಗ್‌ಗಳಲ್ಲಿ ಇದ್ದಾಗ ಬೌದ್ಧ ಧರ್ಮ ಮನಸೆಳೆಯಿತು. ಅದಕ್ಕಾಗಿ ಜಪಾನಿ ಭಾಷೆಯನ್ನೂ ಕಲಿತ, ಅಧಿಕೃತವಾಗಿ ತನ್ನ ಧರ್ಮವನ್ನು ಬೌದ್ಧಧರ್ಮ ಎಂದು ನಮೂದಿಸತೊಡಗಿದ. ಒಂದೆರಡು ವರ್ಷದ ನಂತರ CIA ಬಿಟ್ಟು, NSAಯ ಕೆಲಸಗಳ ಕಂಟ್ರಾಕ್ಟು ವಹಿಸಿಕೊಂಡ ಖಾಸಗಿ ಕಂಪೆನಿ 'ಬೂಜ್ ಅಲೆನ್ ಹ್ಯಾಮಿಲ್‌ಟನ್'ಯಲ್ಲಿ ನೌಕರಿ ಹಿಡಿದ. NSAಯಲ್ಲಿ ಅವನ ಕೆಲಸ ಇದೇ- ಗುಪ್ತವಾಗಿ ಅಂತರ್ಜಾಲದಿಂದ ಮಾಹಿತಿ ಎಳೆಯುವುದು. ಈ ಕೆಲಸ ಮಾಡುತ್ತಾ ಅವನಿಗೆ 'ಇದು ಜನರ ಭದ್ರತೆಯ ನೆಪದಲ್ಲಿ ಜನರ ವಿರುದ್ಧ ನಡೆಯುತ್ತಿರೊ ಕೆಲಸ' ಅನಿಸಿತಂತೆ. 'ವೆರಾಕ್ಸ್'-ಲ್ಯಾಟಿನ್ ಭಾಷೆಯಲ್ಲಿ 'ನಿಜನುಡಿಯುದದನು'- ಎಂಬ ಹೆಸರಿನ ಬ್ರಿಟನ್ನಿನ ಖ್ಯಾತ ಪತ್ರಿಕೆ 'ದಿ ಗಾರ್ಡಿಯನ್'ನ ವರದಿಗಾರ ಗ್ಲೆನ್ ಗ್ರೀನ್ವಾಲ್ಡ್ ಹಾಗು ಅಮೆರಿಕೆಯ 'ವಾಷಿಂಗ್ಟನ್ ಪೋಸ್ಟ್'ನ ಬಾರ್ಟನ್ ಗೆಲ್ಮಾನರಿಗೆ NSAಯ ಗುಪ್ತ ದಂಧೆಯ ಮಾಹಿತಿ ನೀಡಿದ. ಗುಟ್ಟು ರಟ್ಟಾಯಿತು. ಸ್ನೋಡೆನ್ ಅಮೇರಿಕ ತೊರೆದು, ಹಾಂಕಾಂಗಿನಲ್ಲಿ ಅಡಗಿ ಕೂತಿದ್ದಾನೆ; ತೀರಾ ಇತ್ತೀಚಿನ ಮಾಹಿತಿ ಪ್ರಕಾರ ಐಸ್‌ಲ್ಯಾಂಡ್ ದೇಶದಲ್ಲಿ ಆಶ್ರಯ ಪಡೆಯಲು ಪ್ರಯತ್ನಿಸುತ್ತಿದ್ದಾನೆ. ಈ ಪ್ರಕರಣ, ಮತ್ತೊಬ್ಬ ಮಹತ್ವದ 'ವಿಷಲ್ ಬ್ಲೋಯರ್' (ಅಧಿಕಾರಸ್ಥ ಸಂಸ್ಥೆಗಳಿಗೆ ಒಳಗಿನವರಾಗಿದ್ದು, ಅಲ್ಲಿ ನಡೆಯುತ್ತಿರುವ ದುರ್ವ್ಯವಹಾರಗಳನ್ನು ಜಗಜ್ಜಾಹೀರು ಮಾಡುವವರು) ಬ್ರಾಡ್ಲೆ ಮ್ಯಾನಿಂಗ್‌ನ ವಿಚಾರಣೆ ಶುರುವಾಗಿರುವ ಹೊತ್ತಿಗೆ ನಡೆದಿದೆ.





ಬ್ರಾಡ್ಲೆ ಮ್ಯಾನಿಂಗ್‌ಗೆ ಈಗ 23 ವರ್ಷವಷ್ಟೇ. ಅಮೆರಿಕದ ಸೈನಿಕನಾಗಿ ಇರಾಕಿನಲ್ಲಿದ್ದ ಬ್ರಾಡ್ಲೆ, ರಕ್ಷಣಾ ಇಲಾಖೆಯ ಕಂಪ್ಯೂಟರ್ ಜಾಲವನ್ನು ಜಾಲಾಡಿ, ಕಳೆದ 60 ವರ್ಷಗಳಿಂದ ಅಮೆರಿಕಾದ ಪ್ರಭುತ್ವ ಜಗತ್ತಿನಾದ್ಯಂತ ನಡೆಸುತ್ತಿರುವ ಕೊಳಕು ಕಾರ್ಯಾಚರಣೆಗಳ ದಾಖಲೆಗಳನ್ನು ಪಡೆದುಕೊಂಡ. ಅಧಿಕಾರಸ್ಥರ ಕೊಳಕು ಒಳವ್ಯವಹಾರಗಳ ಮಾಹಿತಿಯನ್ನು ಕೊಳ್ಳೆ ಹೊಡೆದು ಸಾರ್ವಜನಿಕರಿಗೆ ಬಹಿರಂಗಗೊಳಿಸುವ ಉದ್ದೇಶಕ್ಕಾಗಿಯೇ, ಜೂಲಿಯಾನ್ ಅಸಾಂಜೆ ಶುರುಮಾಡಿದ ಅಂತರ್ಜಾಲ ತಾಣ 'ವಿಕಿಲೀಕ್ಸ್'ಗೆ ಬ್ರಾಡ್ಲೆ ಈ ಮಹತ್ವದ ಒಳಮಾಹಿತಿಗಳನ್ನು ನೀಡಿದ. 2010ರಲ್ಲಿ 'ವಿಕಿಲೀಕ್ಸ್' (ಭಾರತದ 'ದಿ ಹಿಂದು' ಸೇರಿದಂತೆ) ಪ್ರಪಂಚದ ಖ್ಯಾತ ಪತ್ರಿಕೆಗಳ ಜೊತೆ ಒಪ್ಪಂದ ಮಾಡಿಕೊಂಡು, ಈ ಒಳಮಾಹಿತಿಗಳನ್ನು ಬಹಿರಂಗಗೊಳಿಸಿತು. ಅಮೆರಿಕಾದ ಪ್ರಭುತ್ವ ಸೇಡಿನಿಂದ, ಬ್ರಾಡ್ಲೇಯೇ ಕಳ್ಳಬೆಕ್ಕು ಎಂದು ಕಂಡುಹಿಡಿಯಿತು. ಮೇ 2010 ರಲ್ಲಿ ಬ್ರಾಡ್ಲೆಯನ್ನು ಸೆರೆಹಿಡಿದು, ಒಂದು ಪಂಜರದಲ್ಲಿ ಕೂಡಿ ಹಾಕಿ, ಕುವೈತಿನ ಅರಿಫ್‌ಜಾನ್ ಸೇನಾನೆಲೆಗೆ ತಂದರು. ಅಲ್ಲಿ, ಮರುಭೂಮಿಯ ಬಿರುಬಿಸಿಲಿನಲ್ಲಿ ಪಂಜರವನ್ನಿಟ್ಟು ಬ್ರಾಡ್ಲೆಯನ್ನು ಹಿಂಸಿಸಲಾಯಿತು. ಬ್ರಾಡ್ಲೆಯ ವಕೀಲರು ಪ್ರತಿಭಟಿಸಿದ ನಂತರ, ಅಮೆರಿಕಾದ ಕ್ವಾಂಟಿಕೊ ನೌಕಾನೆಲೆಯಲ್ಲಿ, ಅತ್ಯಂತ ಕ್ರೂರ ವಾತಾವರಣದಲ್ಲಿ ಕೂಡಿಹಾಕಿ ಹಿಂಸಿಸಲಾಯಿತು. ವಿಚಾರಣೆ ಇಲ್ಲದೆ, ಎಲ್ಲಾ ಕಾನೂನುಕಟ್ಟಳೆಗಳಿಗೆ ವಿರುದ್ಧವಾಗಿ ಅಮೆರಿಕೆಯ ಪ್ರಭುತ್ವ ಬ್ರಾಡ್ಲೆಯ ಮೇಲೆ ನಡೆಸುತ್ತಿದ್ದ ಕ್ರೌರ್ಯ, ವಿಶ್ವಸಂಸ್ಥೆಯಲ್ಲಿ ಧ್ವನಿಸಿದ ನಂತರವಷ್ಟೇ, ಆತನನ್ನು ಒಂದು ಮಾನವಂತ ಸೆರೆಗೆ ಕರೆತರಲಾಗಿದೆ. ಅವನ ವಿಚಾರಣೆ, ಗುಪ್ತವಾಗಿ, ಯಾವ ಸಾರ್ವಜನಿಕ ಉತ್ತರದಾಯಿತ್ವವಿಲ್ಲದೆ ಜೂನ್ 3 ನೇ ತಾರೀಕು ಶುರುವಾಗಿದೆ. ಈ ವಿಚಾರಣೆ ಕುರಿತು ಅಸಾಂಜೆ ಹೇಳುತ್ತಾನೆ: "ಹೆಸರಿಗೆ ಅಮೆರಿಕ ಕಾನೂನು ಕಟ್ಟಳೆಯನ್ನು ಎತ್ತಿಹಿಡಿಯೋ ದೇಶ. ಆದರೆ, ಬ್ರಾಡ್ಲೆಗೆ ಇದು ನ್ಯಾಯಹೀನವಾದ ದೇಶ... (ನಾಚ ಸಾಮಾನ್ಯ ಜನ, ವಿನಾಕಾರಣ ಅಪರಾಧಿ ಸ್ಥಾನಕ್ಕೆ ತಳ್ಳಲ್ಪಡುವ ಮುಖವಿಲ್ಲದ) ಅಸಂಗತ ವಿಚಾರಣ ವ್ಯವಸ್ಥೆ ಈಗ ಕಾಫ್ಕನ ಕಥಾಲೋಕವನ್ನೂ ಮೀರಿ, ದೈನಂದಿನ ನಿಜ ಬದುಕಿಗೆ ನುಗ್ಗಿ, ನಮ್ಮ ಪ್ರತಿಭಾವಂತ ಯುವಕರ ಜೀವಹೀರಿ ಹಿಪ್ಪೆ ಮಾಡುತ್ತಿದೆ... ಕಂಡವರನ್ನು ಕೊಂದು ಓಡಿಹೋಗುವ ಸೈನ್ಯ ಗುಪ್ತವಾಗಿ ಜನರ ವಿರುದ್ಧ ಪಿತೂರಿ ಮಾಡುವ ಪ್ರಭುತ್ವಗಳೇ ಈಗ ಆರೋಪಿಗಳು; ನಾವು ನ್ಯಾಯ ನಿಭಾಯಿಸುವ ಜವಾಬ್ದಾರಿಯಿಂದ ನುಣುಚಿಕೊಳ್ಳಕೂಡದು.' ಈ ಮಾತು ನಮ್ಮ ಹತ್ತಿರವೇ ಎಲ್ಲೋ ಕೇಳುತ್ತದೆಯಲ್ಲವಾ! ●

ಬೆಂಗಳೂರು : ಬಿಜೆಪಿ ನಾಯಕ ಗಂಗಭೈರಯ್ಯನೂ ಅವರ ಮಗನ ಪ್ರೇಮ ಪರಾರಿಯೂ...!



ಮಾಗಡಿ ರಸ್ತೆ ದಾಸರಹಳ್ಳಿಯ ಇಬ್ಬರು ಯುವತಿಯರು ಇದ್ದಕ್ಕಿದ್ದಂತೆ ನಾಪತ್ತೆಯಾಗಿ ಅಷ್ಟೇ ನಿಗೂಢವಾಗಿ ವಾಪಸ್ಸಾದ ಘಟನೆ ದಿನಕ್ಕೊಂದು ತಿರುವು ಪಡೆಯುತ್ತಿದೆ. ಕಾಮಾಕ್ಷಿಪಾಳ್ಯದ ಪೊಲೀಸರಿಗಂತೂ ಮುಗಿಬಿದ್ದ ಟಿವಿಯವರಿಗೆ ಸಮಜಾಯಿಸಿ ಕೊಟ್ಟೂ ಕೊಟ್ಟು ತಲೆ ಶೂಲೆ ಬಂದಿರಬೇಕು.

ಇದ್ದಕ್ಕಿದ್ದಂತೆ ಯುವತಿಯೊಬ್ಬಳು ಕಾಣೆಯಾದಳೆಂದರೆ ಜನ ಆಕೆಯ ಅಕ್ಕಪಕ್ಕದ ಮನೆಯ ಹುಡುಗನ್ಯಾರೆಂದು ತಲೆಕೆಡಿಸಿಕೊಳ್ಳುವುದೇನೋ ಸಹಜ. ಆದರೆ ದಾಸರಹಳ್ಳಿಯ ಜನ ಮಾತ್ರ ರಾಜ್‌ಕುಮಾರ್ ವಾರ್ಡಿನ ಬಿಜೆಪಿ ಕೌನ್ಸಿಲರ್ ಗಂಗಭೈರಯ್ಯನವರ ಏಕಮಾತ್ರ ಪುತ್ರ ಸಂತಾನನಾದ ಉಮೇಶ್‌ನನ್ನು ಹುಡುಕಾಡುತ್ತಿದ್ದಾರೆ!

ಸದ್ಯ ಬೆಂಗಳೂರು ನಗರ ಬಿಜೆಪಿಯ ಪ್ರಧಾನ ಕಾರ್ಯದರ್ಶಿಯಾದ ಗಂಗಭೈರಯ್ಯ ಈ ಹಿಂದೆ ರಾಜಾಜಿನಗರ ಮಂಡಳ ಬಿಜೆಪಿಗೂ ಅಧ್ಯಕ್ಷನಾಗಿದ್ದ. ರಾಜಾಜಿನಗರದಿಂದ ಹಿಡಿದು ಮಾಗಡಿ ರಸ್ತೆ, ಗೋವಿಂದರಾಜನಗರ, ವಿಜಯನಗರ, ಪಕ್ಕದ ಮಹಾಲಕ್ಷ್ಮಿ ಲೇಔಟ್ ಮುಂತಾದ ಕ್ಷೇತ್ರಗಳಿಗೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಲು ಇನ್ನಿಲ್ಲದ ಪೈಪೋಟಿಗಿಳಿದಿದ್ದ. ಪಾಲಿಕೆಗೆ ಚುನಾವಣೆಯಾಗಿ, ಬಿಜೆಪಿಗೆ ಬಹುಮತ ಬಂದಾಗ ತಾನೇ ಮೇಯರಾಗುತ್ತೇನೆಂದು ಹಠಕ್ಕೆ ಬಿದ್ದಿದ್ದ. ಜನತಾದಳದ ಹುಚ್ಚಪ್ಪ ಮೇಯರಾಗಿದ್ದಾಗ ಸತತ ನಾಲ್ಕು ವರ್ಷಗಳ ಕಾಲ ವಿರೋಧ ಪಕ್ಷದ ನಾಯಕನಾಗಿ ತನ್ಮೂಲಕ ಕೋಟ್ಯಾಧಿಪತಿಯಾದ ಗಂಗಭೈರಯ್ಯ ತನ್ನ ಕುಲಪುತ್ರ ಉಮೇಶ ರೇಪ್ ಕೇಸಿನಡಿ ಜೈಲು ಪಾಲಾಗುವುದನ್ನು ಬಚಾವು ಮಾಡಲು ಐದು ಲಕ್ಷ ರೂಪಾಯಿಗಳ ಪರಿಹಾರ ಕೊಡಬೇಕಾಯಿತೆಂಬುದನ್ನು ನಂಬಲಾಗುತ್ತಿಲ್ಲ.

ಪ್ರಕರಣದ ಹಕೀಕತ್ತು ಕೂಡ ಅಷ್ಟೇ ನಿಗೂಢ. ಮೊನ್ನೆ ಅಂದರೆ 2013ರ ಮೇ 20ರಂದು ತುಮಕೂರು ರಸ್ತೆ ಅಡಕಮಾರನಹಳ್ಳಿ ನಿವಾಸಿ ರಾಗೇಶ್ವರಿ (ಹೆಸರು ಬದಲಿಸಿದೆ) ಎಂಬಾಕೆ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಧಾವಿಸಿದ್ದೇ ತನ್ನ ಮಗಳು 17 ವರ್ಷದ ಹೇಮಲತಾ (ಹೆಸರು ಬದಲಿಸಿದೆ) ಮತ್ತು ತನ್ನ ನಾದಿನಿಯ ಮಗಳು 17 ವರ್ಷದ ಇಂದ್ರಕಲಾ (ಹೆಸರು ಬದಲಿಸಿದೆ) ಇದ್ದಕ್ಕಿದ್ದಂತೆ ನಾಪತ್ತೆಯಾಗಿದ್ದಾರೆಂದೂ ಅವರ ನಾಪತ್ತೆಗೆ ಇಂತಿಂಥವರೇ ಕಾರಣರೆಂದೂ ದೂರು ಕೊಡುತ್ತಾಳೆ. ಎಷ್ಟೆಂದರೂ ಬಿಜೆಪಿ ಆಳ್ವಿಕೆಯಿದ್ದಾಗ ನೇಮಕಗೊಂಡ ಪೊಲೀಸರಲ್ಲವೆ?

ಬಿಜೆಪಿ ನಾಯಕನೊಬ್ಬನ ಮಗನೇ ತನ್ನ ಮತ್ತು ನಾದಿನಿಯ ಹೆಣ್ಣು ಮಕ್ಕಳಿಬ್ಬರನ್ನೂ ಹಾರಿಸಿಕೊಂಡು ಹೋದನೆಂದರೆ ಪೊಲೀಸರಾದರೂ ಏಕಾಏಕಿ ಎಫ್‌ಐಆರ್ ದಾಖಲಿಸಲು ಸಾಧ್ಯವೆ?.

ಎರಡು ದಿನಗಳ ಕಾಲ ಸತಾಯಿಸಿ ಇನ್ನೇನು ಮೇಲಧಿಕಾರಿಗಳಿಗೆ ದೂರು ಸಲ್ಲಿಸುತ್ತೇನೆಂದು ಆ ತಾಯಿ ಕೂಗಾಡಿದ ನಂತರವೇ ಕಾಮಾಕ್ಷಿಪಾಳ್ಯದ ಸಬ್‌ಇನ್ಸ್‌ಪೆಕ್ಟರ್ ಲಕ್ಷ್ಮಣ್ ಮೇ 22ರ ಮಧ್ಯಾಹ್ನದ ಹೊತ್ತಿಗೆ ನಾಪತ್ತೆ ಎಫ್‌ಐಆರ್ ದಾಖಲಿಸಿದ್ದಾರೆ. ಹುಡುಗಿಯರಾದರೂ ಯಾರೆಂದು ಕೆದಕ ಹೊರಟರೆ ಅದೂ ಕೂಡ ರಾಜ್‌ಕುಮಾರ್ ವಾರ್ಡಿನ ಕೌನ್ಸಿಲರ್ ಗಂಗಭೈರಯ್ಯನವರ ಮನೆ ದಿಕ್ಕನ್ನೇ ತೋರಿಸುತ್ತಿತ್ತು. ಕಾಣೆಯಾದ ಇಂದ್ರಕಲಾ ಬೇರೆ ಯಾರೂ ಅಲ್ಲ ಗಂಗಭೈರಯ್ಯನವರ ಮನೆ ಕೆಲಸದ ಹುಡುಗಿ!

ಮಾಗಡಿ ರೋಡ್ ದಾಸರಹಳ್ಳಿಯ 7ನೇ ಮುಖ್ಯರಸ್ತೆ 10ನೇ 'ಬಿ' ಕ್ರಾಸಿನಲ್ಲಿ ಗಂಗಭೈರಯ್ಯನವರ ಮನೆಯಿದೆ. ಆ ಮನೆಯಲ್ಲಿ ಕಳೆದ ಐದಾರು ವರ್ಷದಿಂದ ಮನೆಗೆಲಸಕ್ಕಿದ್ದವಳು ಇಂದ್ರಕಲಾ. ಆಕೆಯ ತಾಯಿ ಗಜಲಕ್ಷ್ಮಿ ಕೂಡ ಗಂಗಭೈರಯ್ಯನವರ ಮನೆ ಕೆಲಸ ಮಾಡುತ್ತಾಳೆ. ಇಂದ್ರಕಲಾ ಬಳಸುತ್ತಿದ್ದ ಮೊಬೈಲಿನ ಕಾಲ್ ರೆಕಾರ್ಡ್‌ನ್ನು ತೆಗೆದರೆ ಗಂಗಭೈರಯ್ಯನವರ ಏಕಮಾತ್ರ ಪುತ್ರ ಉಮೇಶನ ಮೊಬೈಲಿನಿಂದ ದಿನವೊಂದಕ್ಕೆ ಸರಾಸರಿ 15 ರಿಂದ 20 ಕರೆಗಳಿದ್ದವು. ಅದೇ ಹೊತ್ತಿಗೆ ಮಗ ಉಮೇಶ್ ಕೂಡ ನಾಪತ್ತೆಯಾಗಿದ್ದ!

ಅಲ್ಲಿಗೆ ನಾಪತ್ತೆಯಾದ ಇಂದ್ರಕಲಾ ಮತ್ತು ಗಂಗಭೈರಯ್ಯನವರ ಮಗ ಉಮೇಶ್ ಮಧ್ಯೆ ಇನ್ನೇಂಥದೋ ಹಕೀಕತ್ತಿದೆ ಎಂಬುದು ಕಾಮಾಕ್ಷಿಪಾಳ್ಯದ ಪೊಲೀಸರಿಗೆ ಮನದಟ್ಟಾಗಿತ್ತು. ಉಮೇಶನ ಜಾತಕ ತಡಕಿದರೆ ಆತ ಬಿಜೆಪಿ ಕೌನ್ಸಿಲರ್ ಗಂಗಭೈರಯ್ಯನವರ ಏಕಮಾತ್ರ ಪುತ್ರನೆಂಬುದರ ಹೊರತಾಗಿ ಬೇರೇನೂ ಇರಲಿಲ್ಲ. ನಾಪತ್ತೆಯಾದ ಇಂದ್ರಕಲಾಳ ವಯಸ್ಸು ಹದಿನೇಳಾದರೆ ಈತನ ವಯಸ್ಸು 38. ಅಂದರೆ ಇಬ್ಬರ ಮಧ್ಯೆ 20 ವರ್ಷಗಳ ಅಂತರವಿತ್ತು. ಹತ್ತು ವರ್ಷದ ಹಿಂದೆಯೇ ಲಿಂಗಾಯತರ ಹುಡುಗಿಯೊಬ್ಬಳನ್ನು ಪ್ರೀತಿಸಿ ಮದುವೆಯಾಗಿದ್ದ. ಹುಟ್ಟಿದ ಹೆಣ್ಣು ಮಗುವೊಂದು ಅಷ್ಟೇ ನಿಗೂಢವಾಗಿ ತೀರಿಕೊಂಡಿತ್ತು. ಆ ನಂತರ ಹುಟ್ಟಿದ ಗಂಡು ಮಗು ಮಾತ್ರ ಆರೋಗ್ಯವಾಗಿತ್ತು.

ಅದೇನು ರಾದ್ಧಾಂತವೋ ಗೊತ್ತಿಲ್ಲ. ಇಲ್ಲಿಗೆ ಎರಡು ವರ್ಷದ ಹಿಂದೆ ಇದ್ದಕ್ಕಿದ್ದಂತೆ ತಮ್ಮ ಮಗನನ್ನು ಮನೆಯಿಂದ ಹೊರದಬ್ಬಿದ ಗಂಗಭೈರಯ್ಯ ಆತನಿಗೆಂದು ಬಸವೇಶ್ವರನಗರದಲ್ಲಿ 10 ಲಕ್ಷ ಕೊಟ್ಟು ಮನೆಯೊಂದನ್ನು ಭೋಗ್ಯಕ್ಕೆ ಹಾಕಿಕೊಟ್ಟರು. ಅದೇ ಹೊತ್ತಿಗೆ ಮನೆಕೆಲಸದ ಹುಡುಗಿ ಇಂದ್ರಕಲಾಳ ವರ್ತನೆಯೂ ಸಾಕಷ್ಟು ಬದಲಾಗಿತ್ತು.

ಮಗಳನ್ನು ಈಗಾಗಲೇ ಮದುವೆ ಮಾಡಿಕೊಟ್ಟಿದ್ದ ಗಂಗಭೈರಯ್ಯನವರಿಗೆ ತಮ್ಮ ಏಕಮಾತ್ರ ಪುತ್ರನನ್ನು ಭೋಗ್ಯದ ಮನೆಗಟ್ಟಿ ಇಳಿವಯಸ್ಸಿನಲ್ಲಿ ತಾನು ಮತ್ತು ಪತ್ನಿ ಗೌರಮ್ಮ ಮಾತ್ರವೇ ಏಕಾಂಗಿಗಳಾಗಿ ವಾಸಿಸಲು ಬೇರೆ ಯಾವುದೇ ಕಾರಣಗಳಿರಲಿಲ್ಲ, ಆ ಒಂದು ರಾದ್ಧಾಂತದ ಹೊರತಾಗಿ...?

ಅಲ್ಲಿಗೆ ಜನ ಆಡಿಕೊಳ್ಳುತ್ತಿದ್ದ ಗುಸುಪಿಸು, ದಾಸರಹಳ್ಳಿಯಲ್ಲಿ ತೇಲಾಡತೊಡಗಿದ್ದ ವದಂತಿಗಳಿಗೆಲ್ಲ ಮಗ ಉಮೇಶನೇ ಕಾರಣವೆಂಬುದಂತೂ ಸಾಬೀತಾಗಿತ್ತು. ಯಾವತ್ತು ಹುಡುಗಿಯರಿಬ್ಬರು ನಾಪತ್ತೆಯಾದರೋ ಜನರ ಅನುಮಾನ ನಿಜವಾಯಿತು. ಕಾಮಾಕ್ಷಿಪಾಳ್ಯದ ಪೊಲೀಸರು ಬಂದಿದ್ದೇ ಗಂಗಭೈರಯ್ಯನವರನ್ನು ವಿಚಾರಿಸಿದರೆ ಇಂದ್ರಕಲಾಳ ಮೊಬೈಲಿಗೆ ಫೋನ್ ಮಾಡುತ್ತಿದ್ದದ್ದು ಮಗ ಉಮೇಶನಲ್ಲ, ಅದು ನಾನು ಎಂದು ಗಂಗಭೈರಯ್ಯನವರ ಪತ್ನಿ ಗೌರಮ್ಮ ಆಣೆಯಿಡತೊಡಗಿದ್ದರು. ಯಾವತ್ತು ಪೊಲೀಸರಿಗೆ ದೂರು ನೀಡಿದ್ದಾರೆಂದು ಗೊತ್ತಾಯಿತೊ ಮೇ 24 ರ ಹೊತ್ತಿಗೆ ಹುಡುಗಿಯರಿಬ್ಬರೂ ಏಕಾಏಕಿ ಪ್ರತ್ಯಕ್ಷರಾಗಿದ್ದರು. ವಿಚಾರಣೆಗೆ ಕರೆಸಿಕೊಂಡ ಪೊಲೀಸರು ಹುಡುಗಿಯರಿಬ್ಬರನ್ನೂ ವೈದ್ಯಕೀಯ ಪರೀಕ್ಷೆಗೊಳಪಡಿಸಿದರೆ ಅದು ಬೇರೆಯದೇ 'ಸತ್ಯ' ಬಿಚ್ಚಿಟ್ಟಿತ್ತು.

ಇಂದ್ರಕಲಾಳ ಜೊತೆ ಹೋಗಿದ್ದ ಸಂಬಂಧಿ ಹೇಮಲತಾ ತಮ್ಮನ್ನು ಇಂಡಿಕಾ ಕಾರೊಂದರಲ್ಲಿ ಉಮೇಶನೇ ಶಿವಮೊಗ್ಗಕ್ಕೆ ಕರೆದೊಯ್ದನೆಂದೂ, ಅಲ್ಲಿಂದ ರಾಯಚೂರಿಗೊಯ್ದು ಅಲ್ಲಿ ಲಾಡ್ಜ್ ಒಂದರಲ್ಲಿ ಇರಿಸಿದ್ದನೆಂದೂ, ಈ ಮಧ್ಯೆ ಮಳೆಯಿಂದಾಗಿ ದಾಸರಹಳ್ಳಿಯಲ್ಲಿ ಮನೆಗಳು ಮುಳುಗಿದ್ದು ಗೊತ್ತಾಗಿ ತಮ್ಮನ್ನು ಅಲ್ಲೇ ಬಿಟ್ಟು ಬಂದನೆಂದೂ ಬಾಯಿಬಿಟ್ಟಳು. ಆದರೆ ಪೊಲೀಸರು ಮಾತ್ರ ಪ್ರಕರಣದ ತನಿಖೆಯನ್ನೇ ಕೈಬಿಟ್ಟು ಇದ್ದಕ್ಕಿದ್ದಂತೆ ಮುಗುಮ್ಮಾಗಿ ಬಿಟ್ಟ...

ದಾಸರಹಳ್ಳಿಯ ಪ್ರಮುಖ ರಾಜಕಾರಣಿಯೊಬ್ಬ... ಹೇಳುವಂತೆ ತನ್ನ ಮಗನನ್ನು ಬಚಾವು ಮಾಡ... ಗಂಗಭೈರಯ್ಯ ಮನೆಗೆಲಸದ ಹುಡುಗಿಯ ತಾಯಿಗೆ ಐ... ಲಕ್ಷದ ಪರಿಹಾರ ಕೊಟ್ಟಿದ್ದಾರಂತೆ. ಹಾಗೆ ಬಿಜೆಪಿ ಸರ್ಕಾ... ಮಂತ್ರಿಯಾಗಿದ್ದ ಶಾಸಕರೊಬ್ಬರಿಂದ ಒತ್ತಡವನ್ನೂ ತಂದರು... ಹಾಲಿ ಶಾಸಕರೊಬ್ಬರು ಕೂಡ ಜಾತಿ ಪ್ರೀತಿಗೆ ಬಿ... ಪೊಲೀಸರ ಮೇಲೆ ಒತ್ತಡ ಹಾಕಿದ್ದಾರಂತೆ.

ಹುಡುಗಿಯರಿಬ್ಬರ ನಾಪತ್ತೆ ಪ್ರಕರಣಕ್ಕೆ ಸಂಬಂಧಪಟ್ಟ... ಕಾಮಾಕ್ಷಿಪಾಳ್ಯ ಪೊಲೀಸರು ಹಾಕಿದ್ದ ಎಫ್‌ಐಆರ್‌ಗೆ ... 'ಬಿ' ರಿಪೋರ್ಟಾಗಿರಬೇಕು. ಗಂಗಭೈರಯ್ಯನವರ ಮ... ಕೆಲಸದ ಹುಡುಗಿ ಇಂದ್ರಕಲಾ ಯಾವ ಹೇಮಲತಾ ಎಂ... ಹುಡುಗಿಯ ಜೊತೆ ನಾಪತ್ತೆಯಾಗಿದ್ದಳೋ ಆಕೆ... ಮನೆಯಿದ್ದದ್ದು ಗಂಗಭೈರಯ್ಯನವರ ಮನೆಯಿದ್ದ ರಸ್ತೆಯ... ವರಸೆಯಲ್ಲಿ ಅಕ್ಕ ತಂಗಿಯರಾಗಬೇಕಿದ್ದ ಅಪ್ರಾಪ್ತ ವಯಸ್ಸಿ... ಇಬ್ಬರು ಯುವತಿಯರು ಒಂದು ವಾರಕಾಲ ನಾಪತ್ತೆಯಾ... ಅಷ್ಟೇ ನಿಗೂಢವಾಗಿ ಮತ್ತೆ ಪ್ರತ್ಯಕ್ಷರಾದ ಪ್ರಕರಣದ... ಗಂಗಭೈರಯ್ಯನವರ ಮಗ ಉಮೇಶನ ಪಾತ್ರವಿಲ್ಲ ಎಂ... ಇಟ್ಟುಕೊಳ್ಳೋಣ.

ಹಾಗಾದರೆ ಅವರ ಜೊತೆಗಿದ್ದ ಗಂಡಸ್ಯಾರು? ಒಂ... ವಾರ ಕಾಲ ಆ ಅಪ್ರಾಪ್ತೆಯರಿಬ್ಬರು ಎಲ್ಲಿದ್ದರು? ... ಅವರ ನಾಪತ್ತೆ ವಿರುದ್ಧ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯ... ದೂರು ದಾಖಲಾಯಿತು? ಹುಡುಗಿಯರಿಬ್ಬರ ವೈದ್ಯಕೀಯ... ಪರೀಕ್ಷೆ ಬಿಚ್ಚಿಡುವ ಸತ್ಯವೇನು? ಏಕೆ ಪೊಲೀಸ್ ತನಿ... ಅರ್ಧಕ್ಕೇ ನಿಂತು ಹೋಯಿತು? ದೂರು ಕೊ... ಯುವತಿಯ ತಾಯಿ ಇದ್ದಕ್ಕಿದ್ದಂತೆ ಬಾಯಿ ಮುಚ್ಚಿಕೊಂ... ದ್ದೇಕೆ?

ಸದ್ಯ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ದಾಖಲಾ... ಯುವತಿಯ ನಿಗೂಢ ನಾಪತ್ತೆ ಮತ್ತು ಕಾಲಾಂತರದ ಪ... ಪ್ರಕರಣದ ಎಫ್‌ಐಆರ್ ಹೊರತಾಗಿ ಪ್ರಶ್ನೆಗಳೆಲ್ಲವ... ಪ್ರಶ್ನೆಗಳಾಗೇ ಉಳಿದಿವೆ.

ಬಿಜೆಪಿ ಕೌನ್ಸಿಲರ್ ಗಂಗಭೈರಯ್ಯನವರಾದರೂ ತಮ... ಮಗನಿಗಂಟಿದ ಆರೋಪದ ಸತ್ಯಾಸತ್ಯತೆಯನ್ನು ಏಕೆ ಬಾಯಿ... ಬಿಡುತ್ತಿಲ್ಲ?

● ರಾ. ಸೋಮನಾಥ...

ನಿರ್ಗತಿಕಳ ಮಾನಕ್ಕೆ ಐದು ಲಕ್ಷದ ಬೆಲೆಯೇ?

ಅಂಥಾದ್ದೇನೂ ಆಗಿಲ್ಲದಿದ್ದರೆ ಮತ್ತೆ ಪ್ರತ್ಯಕ್ಷಳಾದ ಮೇಲೆ ಇಂದ್ರಕಲಾ ಹಿಂದಿನಂತೆಯೇ ಗಂಗಭೈರಯ್ಯನವರ ಮನೆಗೆಲಸದಲ್ಲೇ ಮುಂದುವರಿಯಬೇಕಿತ್ತಲ್ಲವೇ?

ವಿಪರ್ಯಾಸವೆಂದರೆ, ವಾರದ ಕಾಲ ನಾಪತ್ತೆಯಾದ ಇಂದ್ರಕಲಾ ವಾಪಸ್ಸಾದ ನಂತರ ಗಂಗಭೈರಯ್ಯನವರ ಮನೆಯತ್ತ ತಲೆ ಹಾಕಿಲ್ಲ. ಆಕೆಯ ತಾಯಿ ಗಜಲಕ್ಷ್ಮಿಯಾದರೂ ಮಾಮೂಲಿನಂತೆ ಕೆಲಸಕ್ಕೆ ಬರಬೇಕಿತ್ತಲ್ಲವೇ? ತಾಯಿ ಮಗಳಿಬ್ಬರೂ ಏಕಾಏಕಿ ಗಂಗಭೈರಯ್ಯನವರ ಮನೆಗೆಲಸ ತೊರೆದು ತಮ್ಮ ಸ್ವಂತ ಊರು ಅಡಕಮಾರನಹಳ್ಳಿ ಸೇರಿಕೊಳ್ಳುತ್ತಾರೆಂದರೆ ಹೇಳಿಕೊಳ್ಳಲಾಗದ ಇನ್ನೇಂಥದೋ 'ಮರ್ಮ' ಇರಲೇಬೇಕು.

ಬಹುಶಃ ಇದೇ ಕಾರಣಕ್ಕೆ ಗಂಗಭೈರಯ್ಯ ತಮ್ಮ ಮಗನನ್ನು ಮನೆಯಿಂದ ಹೊರಗಟ್ಟಿದ್ದರೆ? ಇದ್ದ ಮನೆ ಬಿಟ್ಟು 10 ಲಕ್ಷದ ಭೋಗ್ಯದ ಮನೆಯಲ್ಲಿ ವಾ ಮಾಡಲು ಮಗ ಉಮೇಶನಿಗೆ ಇನ್ನಾವ ಕಾರಣವಿತ್ತು?

ಅಪ್ರಾಪ್ತ, ನಿರ್ಗತಿಕ ಯುವತಿಯೊಬ್ಬಳ ಮಾನಕ್ಕೆ ಕೇವಲ ಐದು ಲಕ್ಷ ಬೆಲೆಯೇ? ಅಥವಾ ಬಿಜೆಪಿ ನಾಯಕನ ತಾಕತ್ತಿಗೆ ಅಂಜಿದ ತಾಯಿ ಮಗಳು ಆತನ ಮಗನ 'ಅನ್ಯಾಯ'ವನ್ನು ನುಂಗಿಕೊಂಡರೆ? ಹೆಂಡತಿಯಿದ್ದೂ ಮುಗ್ಧೆಯೊಬ್ಬಳ ಬಾಳಿಗೆ ಬೆಂಕಿಯಿಟ್ಟವರಿಗೆ ಯಾವ ಶಿಕ್ಷೆಯೂ ಇಲ್ಲವೆ?

ನಂಬೂದರಿಗಳಲ್ಲಿ ಆದ ಸುಧಾರಣೆ...

ಬಂದಾಯುವೆನ... 4 ಮಹಿಳೆಯ ಕ...


● ಗೌರಿ ಲಂಕೇಶ್

ಇಪ್ಪತ್ತನೆ ಶತಮಾನದಲ್ಲಿ ಕೇರಳ ರಾಜ್ಯದಲ್ಲಿ ಒಟ್ಟು ಮೂರು ಸ್ಮಾರ್ಥವಿಚಾರಣೆಗಳು ನಡೆದವು. ಮೊದಲನೆಯದು ನಡೆದದ್ದು 1903ರಲ್ಲಿ, ಆಗ ಗೋಪಾಲ ಮೇನನ್ ಎಂಬುವವರು ತ್ರಿಸ್ಸೂರಿನ ನ್ಯಾಯಾಲಯದಲ್ಲಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರು ಮೀನಾಕ್ಷಿ ಅಮ್ಮಾ ಎಂಬ ನಾಯರ್ ಮಹಿಳೆಯನ್ನು ಮದುವೆಯಾಗಿದ್ದರು. ಅದೇ ಸಂದರ್ಭದಲ್ಲಿ ಓರ್ವ ನಂಬೂದರಿ ವಿಧವೆಯ ವಿರುದ್ಧ ಅಕ್ರಮ ಸಂಬಂಧದ ಆರೋಪವನ್ನು ಮಾಡಲಾಗಿತ್ತು, ವಿಚಾರಣೆಯಲ್ಲಿ ಗೋಪಾಲ ಮೇನನ್ ಕೂಡ ಆಕೆಯೊಂದಿಗೆ ಸಂಬಂಧ ಹೊಂದಿದ್ದು ದೃಢಪಟ್ಟು ಅವರ ವಿರುದ್ಧ ಸಾಮಾಜಿಕ ಬಹಿಷ್ಕಾರವನ್ನು ಹಾಕಲಾಗಿತ್ತು. ಆಗ ಮೇನನ್ ಅವರು ತಮ್ಮ ವೃತ್ತಿ ಮತ್ತು ಸಂಸಾರವನ್ನಲ್ಲದೆ, ಕೇರಳ ರಾಜ್ಯವನ್ನೇ ತೊರೆದು ಶ್ರೀಲಂಕಾಗೆ ವಲಸೆ ಹೋದರು. ಅಲ್ಲಿ ಅವರು ಸತ್ಯಭಾಮ ಎಂಬಾಕೆಯನ್ನು ಮದುವೆಯಾಗಿ ಇನ್ನೊಂದು ಸಂಸಾರವನ್ನು ಪ್ರಾರಂಭಿಸಿದರು.

ಶ್ರೀಲಂಕಾದಲ್ಲಿ ಮೇನನ್ ಮತ್ತು ಸತ್ಯಭಾಮ ದಂಪತಿಗಳಿಗೆ ಇಬ್ಬರು ಪುತ್ರರು ಜನಿಸಿದ ನಂತರ ಮೇನನ್ ತೀರಿಕೊಂಡರು. ಆಗ ಆ ತಾಯಿ ತನ್ನ ಇಬ್ಬರು ಮಕ್ಕಳೊಂದಿಗೆ ತಮಿಳುನಾಡಿಗೆ ಬಂದು ಜೀವನ ಸಾಗಿಸಲಾರಂಭಿಸಿದಳು. ಆಕೆಯ ಒಬ್ಬ ಪುತ್ರ ಬೆಳೆದು ದೊಡ್ಡವನಾದಾಗ ತಮಿಳುನಾಡಿನಲ್ಲಿ ಖ್ಯಾತ ಸಿನಿಮಾ ನಟನಾದನಲ್ಲದೆ ಪ್ರಭಾವಿ ರಾಜಕಾರಣಿಯೂ ಆಗಿ ಮುಖ್ಯಮಂತ್ರಿ ಸ್ಥಾನವನ್ನೂ ಅಲಂಕರಿಸಿದ್ದರು. ಹಲವರ ಪ್ರಕಾರ ಆತ ಬೇರೆ ಯಾರೂ ಅಲ್ಲ,

ಎಂ.ಜಿ.ರಾಮಚಂದ್ರನ್!

1905ರಲ್ಲಿ ಕೊಚ್ಚಿ ರಾಜ್ಯವನ್ನೇ ಅಲುಗಾಡಿಸಿದ ಸ್ಮಾರ್ಥವಿಚಾರಣೆ ಪ್ರಕರಣವು ಮತ್ತೆ ಹದಿಮೂರು ವರ್ಷಗಳ ನಂತರ 1918ರಲ್ಲಿ ಭುಗಿಲೆದ್ದಿತು. ಆಗಲೂ ಮತ್ತೋರ್ವ ನಂಬೂದರಿ ಮಹಿಳೆಯನ್ನು ಇಂತಹದೇ ನೈತಿಕ ವಿಚಾರಣೆಗೆ ಗುರಿಪಡಿಸಲಾಯಿತು. ಕಾಕತಾಳೀಯವೆಂಬಂತೆ ಈ ಮಹಿಳೆಯ ಹೆಸರೂ ಸಾವಿತ್ರಿಯೇ ಆಗಿತ್ತು. ಆ ಪ್ರಕರಣದಲ್ಲೂ ಅಕ್ರಮ ಲೈಂಗಿಕ ಸಂಬಂಧ ಹೊಂದಿದ್ದಕ್ಕೆ ನಂಬೂದರಿ ಮಹಿಳೆ ಸೇರಿದಂತೆ ಒಟ್ಟು 12 ಜನರನ್ನು 'ಭ್ರಷ್ಟ'ರನ್ನಾಗಿಸಿ ಅವರ ವಿರುದ್ಧ ಸಾಮಾಜಿಕ ಬಹಿಷ್ಕಾರವನ್ನು ಹೇರಲಾಗಿತ್ತು. ಈ ಪ್ರಕರಣದ ಸಾವಿತ್ರಿ ಆನಂತರ ಮುಸಲ್ಮಾನ್ ಓರ್ವನನ್ನು ಮದುವೆಯಾಗಿ ನೆಮ್ಮದಿಯ ಸಂಸಾರವನ್ನು ನಡೆಸಿದರು.



ಆದರೆ 1918ರ ಹೊತ್ತಿಗೆ ಬ್ರಿಟಿಷರ ಆಡಳಿತದಡಿ ನ್ಯಾಯಾಲಯಗಳು ಅಸ್ತಿತ್ವಕ್ಕೆ ಬಂದಿದ್ದು ಇಂತಹ ಬಹಿಷ್ಕಾರಕ್ಕೆ ಗುರಿಯಾಗಿದ್ದ ಪುರುಷರೊಬ್ಬರು ಈ ಪದ್ಧತಿಯ ವಿರುದ್ಧ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ಸ್ವೀಕರಿಸಿದ ಆಗಿನ ಮದ್ರಾಸ್ ಹೈಕೋರ್ಟ್ ಸಾಂಪ್ರದಾಯಿಕ ಸ್ಮಾರ್ಥ ವಿಚಾರಣೆಯಲ್ಲಿ ಪುರುಷರಿಗೆ ಪಾಟಿ ಸವಾಲು ಹಾಕಲು ಅವಕಾಶ ನೀಡಿಲ್ಲವಾದ್ದರಿಂದ ನ್ಯಾಯಾಧೀಶ ಜಥವೇದನ್ ಅವರು ನೀಡಿದ್ದ ತೀರ್ಪಿಗೆ ಯಾವುದೇ ಮನ್ನಣೆ ಇಲ್ಲ ಎಂದಿತು. ಆದರೇನಂತೆ, ಆಗ ಬಲಿಷ್ಠ ನಂಬೂದರಿ ಸಮಾಜದ ನಿಯಮಗಳಿಗೇ ತೂಕ ಇತ್ತೇ ಹೊರತು ನ್ಯಾಯಾಲಯದ ಮಾತಿಗಲ್ಲ, ಆದ್ದರಿಂದ ನ್ಯಾಯಾಲಯ ಕೊಟ್ಟ ತೀರ್ಪಿನಿಂದ ಯಾರಿಗೂ ಚಿಕ್ಕಾಸು ಪ್ರಯೋಜನವೂ ಆಗಲಿಲ್ಲ.

ಆದರೆ ಇಂತಹ ಪ್ರಕರಣಗಳು ಮರುಕಳಿಸಬಾರದೆಂದರೆ ನಂಬೂದರಿ ಸಮುದಾಯದ ಸಾಂಪ್ರದಾಯಕ ಪದ್ಧತಿಗಳಲ್ಲಿ ಬದಲಾವಣೆಗಳನ್ನು ತರಬೇಕೆಂಬ ಕೂಗು ಕೇಳಿಬರಲಾರಂಭಿಸಿತು. ಹಲವು ಪ್ರಗತಿಪರ ನಂಬೂದರಿ ಯುವಕರು 'ನಂಬೂದರಿ ಯೋಗಕ್ಷೇಮ ಮಹಾಸಭಾ' ಎಂಬ ಒಕ್ಕೂಟ ವ... ಕಟ್ಟಿಕೊಂಡು ಬದಲಾವಣೆಗಳಿಗೆ ಹೋರಾ... ಲಾರಂಭಿಸಿದರು. ಅವರ ಪ್ರಮುಖ ಬೇಡಿಕೆಗಳು ಮೊದ... ಮಗ ಮಾತ್ರ ಮದುವೆ ಆಗತಕ್ಕದ್ದು ಮತ್ತು ನಾಯ... ಮಹಿಳೆಯರೊಂದಿಗೆ ಇದ್ದ 'ಕೂಡಿಕೆ' ಪದ್ಧತಿಯ ರದ್ದು... ಇದಕ್ಕೆ ಸರಿಯಾಗಿ ನಾಯರ್ ಸಮುದಾಯ ದಲ್ಲೂ 'ಕೂಡಿ... ಸಂಬಂಧದ ವಿರುದ್ಧ ಪ್ರತಿಭಟನೆಗಳು ಪ್ರಾರಂಭವಾದವು...

ಸಹಜವಾಗಿಯೇ ಆರಂಭದಲ್ಲಿ ಬದಲಾವಣೆಗಳಿ... ಸಂಪ್ರದಾಯಸ್ಥರಿಂದ ವಿರೋಧವಿತ್ತು. ಆದರೆ ಮಹಿಳೆಯರಿ... ಮತ್ತು ಇತರೆ ಸಮುದಾಯಗಳಿಗೆ ಅನ್ಯಾಯ ಎಸಗುತ್ತಿ... ಪದ್ಧತಿಗಳನ್ನು ಕಾಲಕ್ರಮೇಣ ವಿಧಿ ಇಲ್ಲದೆ ಕೈಬಿಡಲಾಯಿತು... ಅದೇ ಹೊತ್ತಿಗೆ ಸರ್ಕಾರ ಭೂಮಿತಿ ಕಾಯಿದೆಯನ್ನು... ಜಾರಿಗೆ ತಂದಿದ್ದರಿಂದ ಭೂಮಾಲೀಕರಾಗಿ ಇತ... ಸಮುದಾಯಗಳನ್ನು ಶೋಷಿಸುತ್ತಿದ್ದ ನಂಬೂದರಿಗಳು ತ... ಭೂಮಿಗಳೊಂದಿಗೆ ಸಾಮಾಜಿಕ ಶಕ್ತಿಯನ್ನು... ಕಳೆದುಕೊಂಡರು...

(ಮುಗಿಯಿತು)

ಬೆಂಕಿ ರಾಮಣ್ಣನ ವರಸೆಯೇ ಬದಲಾಗಿದೆಯಂತಲ್ಲಾ



ಬೆಂಗಳೂರಿನಲ್ಲಿ ನಿಗಮ, ಮಂಡಳಿ ಮತ್ತು ಅಕಾಡೆಮಿ ...ಗಳು ಕಾಣೆ ಸದ್ದು ಮಾಡತೊಡಗಿವೆಯಂತಲ್ಲಾ. ಬಂಡಾ... ...ವ ಹೋರಾಟದಿಂದಲೇ ಬಂದು, ವಿಧಾನಸೌಧದ ...ರನೇ ಮಹಡಿಯಲ್ಲಿ ಕುಳಿತು, ಕಾಂಟೆಸ್ಸಾ ಗೂಟದ ...ನಲ್ಲೇ ಓಡಾಡುತ್ತ ದಂಬಾಯವನ್ನು ಮೊಳಗಿಸಿದ ಬೆಂಕಿ ...ಮಣ್ಣನವರು ಬೂದಿ ಮೈಯನ್ನು ತೊಳೆದುಕೊಂಡು, ...ಧೋಳನ್ನ ಮೆತ್ತಿಕೊಂಡು, ಗಣಿ ಕಳ್ಳರ ಚಾನಲ್ ಒಳಗೆ ...ತು ಆಡಿದ ಮಾತುಗಳನ್ನೆ ಮರೆತು "ನಿಜವಾದ ...ಖ್ಯಮಂತ್ರಿ ಎಂದರೆ ಸಿದ್ದರಾಮಯ್ಯ" ಎಂದಿರುವುದು ... ಅಭಿಮಾನಿಗಳನ್ನು ದಂಗು ಬಡಿಸಿದೆಯಂತಲ್ಲಾ.

...ಕೆಂದರೆ ಇದೇ ಬೆಂಕಿ ರಾಮಣ್ಣ ಗಣಿಕಳ್ಳರ ಟಿ.ವಿ. ...ಲ್‌ನಲ್ಲಿ ಕುಳಿತು "ಜಾತಿ ನಾಯಕ ಅನ್ನಿಸಿಕೊಂಡು ...ಕಾರ ಪಡೆಯಬೇಕಾದ ಅನಿವಾರ್ಯತೆ ಸಿದ್ದರಾಮಯ್ಯ ... ನಾಯಕನಿಗೆ ಸಲ್ಲದು. ಅದು ಸರಿಯಾದ ಮಾರ್ಗವೂ ... ಅವರು ವಿರೋಧ ಪಕ್ಷದ ನಾಯಕನ ಕೆಲಸವನ್ನು ...ಯಾಗಿ ಮಾಡಲಿಲ್ಲ. ಆ ಕೆಲಸವನ್ನು ಕುಮಾರಸ್ವಾಮಿ ...ತ ಸಮರ್ಥವಾಗಿ ಮಾಡಿದರು. ಈ ಕಾರಣಕ್ಕೆ ಅವರು ...ವಂದನಾರ್ಹರು" ಎಂದು ಹೇಳಿದ್ದರಂತಲ್ಲಾ.

...ರಾಮುಲು ಮತ್ತು ಕುಮಾರಣ್ಣನ ಟೀಮು ...ಮಾಡುವಂತೆ ಮಾತನಾಡಿದ್ದ ಬೆಂಕಿ ರಾಮಣ್ಣನ ಎರಡೆಳೆ ...ಗೆಗೆ ಕಾರಣವೇನೆಂದು ಸಿದ್ದು ಅಭಿಮಾನಿಗಳು ...ನಂತೆ ತಲೆ ಗುದ್ದಿಕೊಂಡು ಯೋಚಿಸಿದರಂತಲ್ಲಾ. ... ಅವರಿಗೆ ಹೊಳೆದ ಕಾರಣಗಳೆಂದರೆ "ಮುಂದೆ ...ಯುವಂತಹ ಚುನಾವಣೆಯಲ್ಲಿ ಏನಾದರೂ ವಿಪ್ಲವ ...ವಿಸಿ, ಅರವತ್ತು ಜೆ.ಡಿ.ಎಸ್, ನಲವತ್ತು ಬಿ.ಆರೆಸ್ಸು ... ಬಂದರೆ ಯಾವ ಕುರ್ಚಿಯಾದರೂ ಅನಾಯಾಸವಾಗಿ ...ತ್ತ ಬರಬಹುದೆಂದು ಬೆಂಕಿ ರಾಮಣ್ಣ ನಾಲಗೆ ...ದ್ದ. ಆದರೆ ಅವರ ಕನಸೇ ನುಚ್ಚುನೂರಾಗಿ ...ರಾಮಯ್ಯನೇ ವಕ್ಕರಿಸಿ ಬಿಡಬೇಕೆ! ಆದರೇನು? ...ಚಿಸುವ ಅಗತ್ಯವಿಲ್ಲ. ಎರಡೆಳೆ ನಾಲಗೆ ಮತ್ತು ...ಬಾಷೆ ಇರುವವರೆಗೆ ಆತಂಕ ಪಡಬೇಕಾಗಿಲ್ಲ. ...ದ ಸಮಯಕ್ಕೆ ತಾರಾಮಣಿ ತನ್ನ ಕುರ್ಚಿಯಿಂದ ... ತಳಿಸಿಕೊಂಡಾಗಿದೆ. ಇದೇ ಸೂಕ್ತ ಸಮಯವೆಂದರಿತ ... ರಾಮಣ್ಣ ಮುಖ್ಯಮಂತ್ರಿ ಚಂದ್ರು ಎಂಬ ಬಫೂನ್ ...ಕೆ ಹೋಗಿ, "ನಿಜ ಮುಖ್ಯಮಂತ್ರಿ ಎಂದರೆ ...ರಾಮಣ್ಣ" ಎಂದರಂತಲ್ಲಾ ಥೂತ್ತೇರಿ!!

* * * *

...ಅನ್ನು ಸಾಂಸ್ಕೃತಿಕ ಸಂಸ್ಥೆಗಳು ಸರ್ಕಾರದ ಹಿಡಿತದಿಂದ ...ಸಿಕೊಂಡು ಮುಕ್ತವಾಗಿ ಮುಕ್ಕಬೇಕೆಂಬ ಹೊಸ ...ಯನ್ನೇ ಆರಂಭಿಸಿರುವ ರಬಗೂರು ಮಾರಚಂದ್ರಪ್ಪನ ...ಳನಾಲಹರಿಗೆ ಕ್ಯಾತೆ ಚಿಕ್ಕಣ್ಣನವರು ದನಿಗೂಡಿಸಿದ್ದಾರಂತಲ್ಲಾ.

ಚೊಕ್ಕವಾಗಿ ಕೆಲಸ ನಿರ್ವಹಿಸಿದರೂ ಚಿಕ್ಕಣ್ಣ ವಕ್ರವಾಗಿ ಯೋಚಿಸುವುದೇಕೆ ಎಂಬುದೇ ಅರ್ಥವಾಗುತ್ತಿಲ್ಲವಲ್ಲಾ. "ಆಯ್ತು ಸ್ವಾಮಿ, ಸದ್ಯ ಸಾಂಸ್ಕೃತಿಕ ಸಂಸ್ಥೆಗಳು ನೇರ್ಸರ ಕವಿ ದೊಡ್ಡರಂಗನಂತೆ ಚಿಂತಿಸಲು ಶುರು ಮಾಡಿ ಹಲವು ವರ್ಷಗಳೇ ಆದವು. ಅವುಗಳ ಕಾರ್ಯವೈಖರಿ ಬಗ್ಗೆ ತಮಗೆ ಈಗ ಮಾತ್ರ ಜ್ಞಾನೋದಯವಾದದ್ದೇಕೆ? ಈ ಹಿಂದಿನ ಸರಕಾರ ಮತೀಯ ಜ್ವರಪೀಡಿತ ಸರಕಾರವಾಗಿತ್ತು. ಅದಕ್ಕಾಗಿ ಮತಿಭ್ರಮಣೆ ಕೂಡ ಉಂಟಾಗಿತ್ತು. ಆ ಕಾರಣಕ್ಕೆ ತನ್ನ ಅಜೆಂಡಾಗಳ ಅನುಷ್ಠಾನದವರು ಮತ್ತು ಆಲೋಚಕರು, ಹಿಂಬಾಲಕರು, ಹಿತೈಷಿಗಳನ್ನೆಲ್ಲ ಹುಡುಕಿ ಹೆಕ್ಕಿ ತೆಗೆದು ನಾಮನಿರ್ದೇಶನ ಮಾಡಿಬಿಟ್ಟದೆ. ಇವರಿಗಾಗಿ ಒಂದು ಅವಧಿಯನ್ನು ಕೂಡ ವಿಧಿಸಿತ್ತು. ಆದರೀಗ ಒಂದು ಜಾತ್ಯತೀತ ಮನಸ್ಸಿನ ಸರಕಾರ ಅಸ್ತಿತ್ವಕ್ಕೆ ಬಂದಿರುವಾಗ ಸೂಕ್ಷ್ಮಮನಸ್ಸಿನ ಸಾಂಸ್ಕೃತಿಕ ವ್ಯಕ್ತಿಗಳು ರಾಜೀನಾಮೆ ಬಿಸಾಡಿ ಹೋಗಲಿಲ್ಲವೇಕೆ? ಹೋಗದಿದ್ದರೆ ಗದುಮಬೇಕಾದದ್ದು ಹೊಸ ಸರಕಾರದ ಬಾಗಿಲಲ್ಲಿ ನಿಂತ ಹೊಸ ಫಲಾನುಭವಿಗಳ ಕೆಲಸ. ಅದೀಗ ನಡೆಯುತ್ತಿದೆ. ಸದರಿ ಕ್ಯಾತೆ ಚಿಕ್ಕಣ್ಣನವರು ಕನ್ನಡ ಸಂಸ್ಕೃತಿ ಇಲಾಖೆಯ ಸಹ ನಿರ್ದೇಶಕರಾಗಿದ್ದವರು. ಸರಕಾರಿ ಕೆಲಸವನ್ನು ದೇವರ ಪೂಜೆಯಂತೆ ಮಾಡಿ ಒಗ್ಗಿಕೊಂಡಿದ್ದವರು. ಆ ಕಾರಣಕ್ಕೆ ನಿವೃತ್ತರಾದ ಕೂಡಲೇ ಕನಕ ಅಧ್ಯಯನ ಪೀಠದ ಕಲಾ ಆಡಿನೇಟರ್ ಆಗಿಬಿಟ್ಟರು. ಅಂದರೆ ಈ ಕಾರಿನಿಂದ ಆ ಕಾರಿಗೆ ಜಿಗಿದರು ಅಷ್ಟೆ. ಆದರೆ ಸಿದ್ದರಾಮಯ್ಯನ ಸರಕಾರಕ್ಕೆ ಒಳ್ಳೆ ಹೆಸರು ತರಲೆಂದು ಕೆಲವು ಯೋಗ್ಯ ವ್ಯಕ್ತಿಗಳು ನಾಮ ನಿರ್ದೇಶನಕ್ಕೆ ಹಾತೊರೆಯುತ್ತಿರುವಾಗ ಹಳೆ ನಾಮನಿರ್ದೇಶಕರ ಕಾಲು ಮುರಿಯುವುದು ತರವಲ್ಲ ಎಂಬ ಅಭಿಪ್ರಾಯವನ್ನು ಕನಕಪೀಠದ ಕಾರಿನಿಂದಿಳಿದು ಹೇಳಬಲ್ಲಿರಾ" ಎಂದು ಹೊಸ ಕುರ್ಚಿ ಕನಸುಗಾರರು ಕೇಳುತ್ತಿದ್ದಾರಂತಲ್ಲಾ, ಥೂತ್ತೇರಿ!!

* * * *

ಸಾಮಾನ್ಯವಾಗಿ ಪಿಂಜರಾಪೋಲು ಸಾಹಿತಿಗಳು, ಕಲಾವಿದರು, ಇದ್ದ ಜಾಗದಲ್ಲೇ ಏನೂ ಮಾಡಲಾಗದಿದ್ದವರೆಲ್ಲಾ ಸರಕಾರದ ಸಾಂಸ್ಕೃತಿಕ ಸಂಸ್ಥೆಗಳು ಮತ್ತು ಅಕಾಡೆಮಿಗಳ ಕುರ್ಚಿ ಹುಡುಕಿಕೊಂಡು ವಿಧಾನಸೌಧದ ಸುತ್ತ ತಿರುಗುತ್ತವೆ. ಈಗಾಗಲೇ ಇಂತಹ ಸ್ಥಾನಗಳಿಗೆ ಯೋಗ್ಯರು ನೇಮಕಗೊಂಡು ಸದರಿ ಕುರ್ಚಿಗಳಿಗೆ ಗೌರವ ತಂದುಹೋಗಿದ್ದಾರೆ. ಇನ್ನುಳಿದವರು ಅಗೌರವ ಅಂಟಿಸಿ ಹೋಗಿದ್ದಾರೆ. ಚೆಡ್ಡಿಗಳ ಯುಗದಲ್ಲಂತೂ ಈ ಕುರ್ಚಿಗಳ ಸಮೀಪ ಸುಳಿಯುವವರೆಲ್ಲ ಹೈನಾಗಳಂತೆ ಕಾಣುತ್ತಿದ್ದರು. ಹೈನಾಗಳು ಸಾಮಾನ್ಯವಾಗಿ ಜಿಂಕೆ, ಕಡವೆ, ಹೇಸರಗತ್ತೆಯನ್ನು ಬೆನ್ನಟ್ಟಿ ಹೋಗಿ ಕೊಂದು ತಿನ್ನುವುದಿಲ್ಲ, ಶೌರ್ಯ ಸಾಹಸಗಳಿಂದ ಬೇಟೆಯಾಡಿ, ತಿನ್ನುವ ಚಿರತೆ, ಸಿಂಹ, ಹುಲಿಗಳು ಹಿಡಿದು ತಿಂದ ಉಚ್ಛಿಷ್ಟಗಳನ್ನೆ ಇಡಿಯಾಗಿ ಭಕ್ಷಿಸುತ್ತವೆ. ಹೈನಾಗಳು ಆಕಸ್ಮಾತ್ ಬೇಟೆಯಾಡಿದರೆ, ಪ್ರಾಣಿಯಿನ್ನೂ ಸಾಯದಿದ್ದರೂ ತಿನ್ನತೊಡಗುತ್ತವೆ. ಇಂತ ಹೈನಾ ಜಾತಿಯನ್ನು ಕರ್ನಾಟಕದ ರಾಜಕಾರಣ ಕಂಡಾಯಿತು. ರಾಜಕಾರಣಕ್ಕಿಂತಲೂ ನಿಗಮ, ಮಂಡಳಿ, ಸಾಂಸ್ಕೃತಿಕ ಸಂಸ್ಥೆಗಳೇ ಪುಷ್ಕಳ ಜಾಗಗಳೆಂದು ತಿಳಿದಿರುವ ಹೈನಾಗಳನ್ನು ದೂರ ಓಡಿಸುವುದು ಸದ್ಯದ ತುರ್ತು ಕೆಲಸವಾಗಿದೆ. ಹೀಗಿರುವಾಗ ಹೈನಾಗಳೇ ಮುಂದುವರಿಯಬೇಕೆಂಬುದು ಯಾವ ನ್ಯಾಯ.

ಯಾವುದೇ ಸರಕಾರ ಬಂದರೂ ನಾಮ ನಿರ್ದೇಶನಕ್ಕೆ ಯೋಗ್ಯರು ಮನೆಯಲ್ಲಿರಬೇಕು. ಅಂಥವರ ಯೋಗ್ಯತಾ ಪಟ್ಟಿ ಸರಕಾರದ ಮುಂದಿರಬೇಕು. ಸರಕಾರ ಸದರಿ ಯೋಗ್ಯರನ್ನು ಆಯ್ಕೆ ಮಾಡಿದ ಆಜ್ಞೆ, ಸರಕಾರದ ಕರ್ಮಾಚಾರಿಯ ಮುಖಾಂತರ ತಲುಪಬೇಕು. ನಂತರ ಆ ಸ್ಥಾನವನ್ನಲಂಕರಿಸಬೇಕು. ಆದರಿಂದ ಆ ಸ್ಥಾನಕ್ಕೆ ಒಂದು ಗೌರವ ಪ್ರಾಪ್ತಿಯಾಗಬೇಕು. ಸರಕಾರದ ಸವಲತ್ತಿನಿಂದ ಮಾತ್ರ ತನ್ನ ಕರ್ತವ್ಯ ನಿರ್ವಹಿಸಿ, ಕಾಲಾವಧಿಯನ್ನು ಪೂರ್ಣಗೊಳಿಸಿ, ಅವಧಿ ಮುಗಿದ ಪತ್ರವನ್ನು ಸರಕಾರಕ್ಕೆ ಮುಟ್ಟಿಸಿ ಮನೆಗೆ ಬರಬೇಕು. ಇಂತಹ ಕಾಲವೊಂದಿತ್ತು, ಆದರೆ ಈಗ ಎಲ್ಲರೂ ತನಿಖೆ ಎದುರಿಸುವ ಸ್ಥಿತಿ ಮುಟ್ಟಿ ಮನೆಗೆ ಬರುತ್ತಿದ್ದಾರಂತಲ್ಲಾ, ಥೂತ್ತೇರಿ!!

ಥುತ್ತೇರಿ

▶ ಯಾಹೂ

* * * *

ನಿಗಮ, ಮಂಡಳಿ ಮತ್ತು ಸಾಂಸ್ಕೃತಿಕ ವಿಭಾಗದ ಕುರ್ಚಿ ಕತೆಯಂತಿರಲಿ ಇನ್ನೂ ಅವಧಿ ಮುಗಿಸಿ ಖಾಲಿಯಾಗಲಿರುವ ಎಮ್ಮೆಲ್ಸಿ ಕುರ್ಚಿಗಾಗಿ ಎಲ್ಲಾ ಜನಾಂಗದ ಪುಢಾರಿಗಳ ದಂಡೇ ರೆಡಿಯಾಗಿದೆಯಂತಲ್ಲಾ. ಇದೆಲ್ಲಕ್ಕಿಂತಲೂ ಕುತೂಹಲದ ಸಂಗತಿಯೆಂದರೆ ಸನ್ಯಾಸಿಗೆ ಸಂಸಾರದ ಕನಸು ಬಿದ್ದಂತೆ ನಮ್ಮ ಸಾರಾ ಅಬೂಬಕರ್ ಎಮ್ಮೆಲ್ಸಿಯಾಗಬೇಕೆಂಬ ಅಪೇಕ್ಷೆ ವ್ಯಕ್ತಪಡಿಸಿದ್ದಾರಂತಲ್ಲಾ, ಅಲ್ಲಾನ ಕೃಪೆಯಿಂದ ಇಂತಹ ಸುದ್ದಿ ಸುಳ್ಳಾಗಿ ಪರಿವರ್ತನೆಯಾಗಲಿ. ಏಕೆಂದರೆ ಸಾರಾ ಅಬೂಬಕರ್ ಅಪ್ಪಟ ಮಾನವತಾವಾದಿ ಮಹಿಳೆ. ಮಹಿಳಾ ಲೋಕಕ್ಕೆ ಘನತೆ ತಂದುಕೊಟ್ಟವರು. ಅವರ ಪ್ರಾಮಾಣಿಕ ಬರವಣಿಗೆ ಗುರುತಿಸಿದ ಲಂಕೇಶರು "ನೀವು ದಯ ಮಾಡಿ ನಿಮ್ಮ ಅನಿಸಿಕೆಯನ್ನು ಬರಿಯಿರಿ" ಎಂದು ವಿನಂತಿಸಿಕೊಂಡರು. ಅದರ ಫಲವೇ "ಚಂದ್ರಗಿರಿ ತೀರದಲ್ಲಿ". ನಾವು ಗಮನಿಸಿದಂತೆ ಸಾರಾ ಚಂದ್ರಗಿರಿ ತೀರದಲ್ಲೇ ನಿಂತಿದ್ದಾರೆ. ಅದೊಂದೇ ಕೃತಿ ಅವರನ್ನ ಮುಸ್ಲಿಂ ಸಾಹಿತ್ಯಾಗಾಸದಲ್ಲಿ ತಾರೆಯನ್ನಾಗಿಸಿತು. ಇಂತಹ ತಾರೆ ಆ ನಂತರ ಸರಕಾರದಿಂದ, ಖಾಸಗಿ ಸಂಸ್ಥೆಗಳಿಂದ ಸಿಗಬಹುದಾದ ಎಲ್ಲಾ ಪ್ರಶಸ್ತಿಗಳನ್ನು ಬಾಚಿಕೊಂಡರು. ಈಗ ಸಾರಾ ಅವರು ವಿಧಾನಸೌಧದ ಮೂರನೇ ಮಹಡಿ ಕಡೆ ನೋಡುವುದು ಅವರ ಅಭಿಮಾನಿಗಳಾದವರಿಗೆ ಆಘಾತವುಂಟುಮಾಡಿದೆ. ಸಾರಾ ಅವರ ಅಪೇಕ್ಷೆಯನ್ನು ನಾವು ಸಾರಾಸಗಟು ತಿರಸ್ಕರಿಸಲು ಕಾರಣವೆಂದರೆ, ಅವರಿಗೆ ಸಿಕ್ಕಿರುವ ಪ್ರಶಸ್ತಿಗಳ ಘನತೆ-ಗೌರವ ಕಾಪಾಡಿಕೊಳ್ಳುವುದು ಅವರ ಜವಾಬ್ದಾರಿ. ಆದ್ದರಿಂದ ಅವರು ಎಮ್ಮೆಲ್ಸಿ ಭ್ರಮೆಯಿಂದ ಹೊರಬರುವುದು ತುಂಬಾ ಒಳ್ಳೆಯದು.

ಪಟೇಲರ ಕಾಲದಲ್ಲಿ ನಿಗಮ, ಮಂಡಲಿ, ಎಮ್ಮೆಲ್ಸಿ ಆಕಾಂಕ್ಷಿಗಳ ಪಡೆಯೇ ಜಮಾಯಿಸಿಕೊಂಡು ವಿಧಾನಸೌಧಕ್ಕೆ ಹೋಗಿತ್ತು. ಆ ಪೈಕಿ ಒಬ್ಬ ಪಟೇಲರ ಸಂಬಂಧಿ "ಪಟೇಲ್ರೆ, ನಾನು ಜನತಾದಳಕ್ಕೆ ಭಾಳ ದುಡಿದಿದ್ದಿನಿ. ಈಗ ತುಂಬಾ ತೊಂದ್ರ್ಯಾಗದೀನಿ. ನೀವು ದೊಡ್ಡ ಮನಸು ಮಾಡಿ ಎಮ್ಮೆಲ್ಸಿ ಅಥವಾ ಯಾವುದಾರ ನಿಗಮ ಮಂಢ್ಳಿಗೆ ಅಧ್ಯಕ್ಷನ್ನ ಮಾಡಿ" ಎಂದ. ಪಟೇಲರು ಹುಸಿ ನಗುತ್ತಲೇ "ನೀನು ತೊಂದ್ರ್ಯಾಗದಿ ಅಂತ ಯಾವುದಾದ್ರು ನಿಗಮ ಮಂಢ್ಳಿಗೆ ನೇಮಿಸಿದ್ರೆ ಅದರ ಕತಿಯೇನಯ್ಯಾ" ಎಂದರು.

ಥೂತ್ತೇರಿ!!! ●

...ಕಾಮವನ್ನು ಬೆಳೆಸಿದವರು

...ಅಮೆರಿಕದಿಂದ ಬಂದ ಗೆಳೆಯನೊಬ್ಬ ತಾನು ...ವಯಾಗ್ರಾ ತೆಗೆದುಕೊಂಡಾಗಿನ ಲೈಂಗಿಕ ಅನುಭವಗಳನ್ನು ...ತೊಡಗಿದ. 'ಅದೊಂದು ಕೆಟ್ಟ ಪರಿಣಾಮಗಳೇ (side ...ects) ಇಲ್ಲದ, ಸಂತೋಷದಾಯಕ ಮಾತ್ರೆ. ...ರಿಕದಲ್ಲಿ ಈಗ ಏಳು ಡಾಲರ್‌ಗೆ ಒಂದರಂತೆ ಮಾರಾಟ ...ದೆ. ಅದರಿಂದ ಸಿಗುವ ಸಂಭೋಗದ ಆನಂದಕ್ಕೆ ...ಲಿಸಿದರೆ ಅದರ ಬೆಲೆ ಏನೂ ಅಲ್ಲ' ಎಂದು ...ಗಳನ್ನು ಹೇಳತೊಡಗಿದ.

"ಅದನ್ನು ಯಾಕೆ ತಗೊಂಡೆ? ನಿನಗೆ ಲೈಂಗಿಕ ತೊಂದರೆ ...ಯು" ಅಂದೆ.


"ತೊಂದರೆ ಏನಿಲ್ಲ, ಆದರೆ ಈ ಮಾತ್ರೆಯಿಂದ ಹೆಚ್ಚಿನ ... ಸಿಗುವುದಾದರೆ ಯಾಕೆ ಬೇಡ" ಅಂದ.

'ಅಲ್ಲಯ್ಯ ಗೆಳೆಯಾ, ಪ್ರತಿಯೊಬ್ಬ ಗಂಡಸೂ ಮೂರು ...ಗಳಿಗಾಗಿ ತಲತಲಾಂತರದಿಂದ ಪ್ರಯತ್ನಿಸುತ್ತಿದ್ದಾನೆ. ...ವಿ, ಬಕ್ಕ ತಲೆಯಲ್ಲಿ ಹುಲುಸಾಗಿ ಕೂದಲು ಬೆಳೆಸು... ... ಎರಡು, ತನ್ನ ಲೈಂಗಿಕ ಶಕ್ತಿಯನ್ನು ವೃದ್ಧಿಪಡಿಸಿ...ಕೊಳ್ಳುವುದು; ಮೂರು, ತನಗೆ ಮುಪ್ಪು ಬಾರದಂತೆ ...ತೆಗೆದುಕೊಳ್ಳುವುದು. ಇವು ಮೂರೂ ವಿಕೃತವಾದವು. ...ದಲನೆಯದು ಹಾಸ್ಯಾಸ್ಪದ ಆಶೆ; ತಲೆತುಂಬ ಕೂದಲು ...ಬಿಟ್ಟರೆ ತಾನು ಮನ್ಮಥನಂತೆ ಕಾಣುತ್ತೇನೆಂಬ ಭ್ರಮೆ. ...ರಡನೆಯದು ಆತ್ಮವಂಚನೆ; ಯಾಕೆಂದರೆ ಲೈಂಗಿಕತೆಯನ್ನು ...ಕೊಳ್ಳುವುದು ತಿನ್ನುವ ಶಕ್ತಿಯನ್ನು ವೃದ್ಧಿಪಡಿಸಿಕೊಂಡಷ್ಟೇ ...ಜ. ಮೂರನೆಯದು ಪ್ರಕೃತಿಯ ವಿರುದ್ಧ ಕುತಂತ್ರ. ...ಮೂರೂ ಮನುಷ್ಯನನ್ನು ಮಾನಸಿಕ ರೋಗಿಯನ್ನಾಗಿ ...ಲು ಸಾಧ್ಯ, ಲೈಂಗಿಕ ಆನಂದ ಎಷ್ಟೇ ತೀವ್ರ, ...ಂದರ್ಯ ಅನ್ನಿಸಿದರೂ ಮನುಷ್ಯನನ್ನು ವಿಚಿತ್ರ ವ್ಯಸನಕ್ಕೆ ...ಳ್ಳುವುದು...

...ವೆಲ್ಲ ನಿಜವಾದ ಕಾಮ, ಪ್ರೇಮವನ್ನು ಅನುಭವಿಸದೆ ...ರುವ ಆತ್ಮವಂಚನೆ. ಯಾಕೆಂದರೆ ಶ್ರೀಕೃಷ್ಣನ ಬೆರಳನ್ನು ಮುಟ್ಟಿದ ಗೋಪಿಕೆಯರಿಗೆ **orgasm** ಆಗುತ್ತೆಂದು ಓದಿದ್ದೇನೆ; ನಿಜಕ್ಕೂ ನೀನು ಪ್ರೇಮಿಸುವ ವ್ಯಕ್ತಿ ಅಪ್ಪಿಕೊಂಡಾಗ ಸಿಗುವ ಸುಖ ಸಂಭೋಗದಿಂದ ಕೂಡ ದೊರೆಯಲಾರದು. ಇದು ವಾಸ್ತವ. ಕಾಮ ಮನಸ್ಸಿನಲ್ಲಿ, ಇಡೀ ದೇಹದಲ್ಲಿ, ಲೈಂಗಿಕ ಅಂಗಗಳಲ್ಲಿ ಇರುತ್ತದೆ; ನಮ್ಮ ನೆನಪುಗಳಲ್ಲಿ, ಕನಸುಗಳಲ್ಲಿ, ಪ್ರೇಮದ ಕಾತರದಲ್ಲಿ ಇರುತ್ತದೆ. ಅದನ್ನು ಕೃತಕವಾಗಿ ಸೃಷ್ಟಿಸಿಕೊಳ್ಳುವುದು ವೇಶ್ಯೆಯ ಸಂಗ ಮಾಡಿದಂತೆ; ಅದರಿಂದ ಯಾವುದೇ ಸ್ಫೂರ್ತಿ ದೊರೆಯುವುದಿಲ್ಲ, ಸಹಜ ಸಂತೋಷ ದಕ್ಕುವುದಿಲ್ಲ.


'ಇಷ್ಟನ್ನು ತಿಳಿಯಲಾರದವರು ಎಂದೂ ಪ್ರೇಮಿಸದಿರುವವರು, ಕಾಮಿಸದಿರುವವರು. ಇವರ ವಿಕೃತ ಆಶೆಯನ್ನು ನೀಗಿಸುವುದಕ್ಕಾಗಿಯೇ ವಯಾಗ್ರಾದಂಥ ವಂಚನೆಯ ಕೈಗಾರಿಕೆ ಬೆಳೆದಿರುತ್ತವೆ. ಬಕ್ಕತಲೆಯ ತುಂಬ ಕೂದಲು ಬರಿಸುವುದು, ಕಾಮವನ್ನು ಹೆಚ್ಚು ಮಾಡುವುದು, ಯೌವನವನ್ನು ನಿರಂತರ ಗೊಳಿಸುವುದು... ಈ ಭ್ರಮೆಯೇ ಕೈಗಾರಿಕೆಗಳ ಸ್ಫೂರ್ತಿ.

'ಈ ಜೀವನದಲ್ಲಿ ನಿನ್ನ ದೇಹಕ್ಕೆ ಯಾವುದು ವಿಕೃತ ಖುಷಿ ಕೊಡಲು ಯತ್ನಿಸುತ್ತದೋ ಅದೇ ಮನಸ್ಸನ್ನೊಳಗೊಂಡು ಇಡೀ ವ್ಯಕ್ತಿತ್ವಕ್ಕೆ ದುರಂತ ತರುತ್ತದೆ.'





ಡಾ. ನಾಗರಾಜ್ ಹೇಳಿದ್ದು



ನನ್ನ ಶಿಷ್ಯ ಮತ್ತು ಗೆಳೆಯ, ಪ್ರತಿಸ್ಪರ್ಧಿ ಮತ್ತು ಹಿತೈಷಿ ಡಾ. ಡಿ.ಆರ್.ನಾಗರಾಜನ ಪತ್ನಿ ಗಿರಿಜಾ ಅವರು ಮೊನ್ನೆ ಅರಸು, ಶರ್ಮ, ನಟರಾಜ್, ಅನಿತಾ, ನನ್ನನ್ನು ತಮ್ಮ ಮನೆಗೆ ಊಟಕ್ಕೆ ಕರೆದರು. ಗಿರಿಜಾ ಅವರ ಅಭ್ಯಾಸ ಹೇಗೋ ಎಂದು ನನ್ನ ವಿಸ್ಕಿ ನಾನು ತೆಗೆದುಕೊಂಡು ಹೋದೆ. ಎಲ್ಲರೂ ಹರಟೆಕೊಚ್ಚುತ್ತಿದ್ದಾಗ ಗಿರಿಜಾ ತಮ್ಮ ಪತಿ ನಾಗರಾಜ ನಮ್ಮನ್ನೆಲ್ಲ ಅಗಲಿ ಹೋಗುವ ಮುನ್ನ 'ಪತ್ರಿಕೆ'ಯ ಬಗ್ಗೆ ಬರೆದಿದ್ದ ಒಂದು ಚಿಕ್ಕ ಕಾಗದ ಕೊಟ್ಟರು. ಅದನ್ನು ಇಲ್ಲಿ ಅಚ್ಚು ಮಾಡುತ್ತಿದ್ದೇನೆ:


'ಪತ್ರಿಕೆ': ಗಂಧದ ಜೊತೆಗೆ ಗುದ್ದಾಟ

'ಲಂಕೇಶ್ ಪತ್ರಿಕೆ' ನಮ್ಮ ಜೀವನದ ಒಂದು ಅನಿವಾರ್ಯ ಅಂಗ ಎಂಬಂತಾಗಿಬಿಟ್ಟಿದೆ. ಇದೇ ಮಾರ್ಚ್ ಕಡೆಯ ವಾರದಿಂದ ಜೂನ್ ಕಡೆಯವಾರದ ತನಕದ ನನ್ನ ಷಿಕಾಗೋ ವಾಸ್ತವ್ಯದಲ್ಲೂ ಅದು ಮತ್ತೆಮತ್ತೆ ಕಾಡುತ್ತಿದ್ದ ನಂಟನಂತೆ ಇತ್ತು. ಷಿಕಾಗೋದಲ್ಲಿಯೂ 'ಪತ್ರಿಕೆ' ಸಿಗುತ್ತಿತ್ತೆ? ಹೌದು! ಅದರಲ್ಲೂ 'ಪತ್ರಿಕೆ'ಯ ಹಳೆಯ ವರದಿಗಾರ ಗೆಳೆಯ ರೆಡ್ಡಿಯವರ ಮೂಲಕ ಅದು ಸಿಗುತ್ತಿತ್ತು. ಪ್ರತಿ ಶನಿವಾರ ರೆಡ್ಡಿಯವರಿಗೆ, ಅವರು ತರುತ್ತಿದ್ದ 'ಪತ್ರಿಕೆ'ಗಾಗಿ ಆತುರದಿಂದ ಕಾಯುತ್ತಿದ್ದೆ. ರೆಡ್ಡಿ ಇವತ್ತಿಗೂ 'ಪತ್ರಿಕೆ' ರೂಪಿಸಿದ ಮನುಷ್ಯನಾಗಿಯೇ ಉಳಿದಿದ್ದಾರೆ. ಅದೇ ತುಂಟತನ, ಹಾಸ್ಯ, ನೈತಿಕ ಔದಾರ್ಯ. ಸರಿ, ಅವರು ಸಿಕ್ಕ ತಕ್ಷಣ 'ಪತ್ರಿಕೆ'ಯ ಬಗ್ಗೆಯೇ ಚರ್ಚೆ. ಶನಿವಾರ ಶುರುವಾದ ಚರ್ಚೆ, ಅನೇಕ ಸಾರಿ ಭಾನುವಾರವೂ ಮುಂದುವರಿಯುತ್ತಿತ್ತು. ನನಗೆ ಸೋಮವಾರ ಸಂಜೆ 4 ಗಂಟೆಗೆ ಕ್ಲಾಸು, ನನ್ನ ಪಾಠದ ವಿಷಯ ಕೂಡಾ 'ಸಂಸ್ಕೃತಿ ಮತ್ತು ಸಾಮಾಜಿಕ ಅಧಿಕಾರ ಶಕ್ತಿ' ಎಂಬುದೇ. ಹೀಗಾಗಿ 'ಪತ್ರಿಕೆ' ನನ್ನೊಳಗೆ ಉತ್ತೇಜಿಸುತ್ತಿದ್ದ ಸೃಜನಶೀಲತೆಯ ಉಕ್ಕು ಮತ್ತು ಅದರಲ್ಲಿ ಠೇಂಕಾರದಿಂದ ಬರುವ ಸಾಹಿತ್ಯಕ-ಪತ್ರಿಕೋದ್ಯಮ ಹುಟ್ಟಿಸುತ್ತಿದ್ದ ಸಿಟ್ಟು ಒಟ್ಟೊಟ್ಟಿಗೇ ತಾಕಲಾಡುತ್ತಿದ್ದವು. ಹೀಗಾಗಿ, ಅನೇಕ ಸಾರಿ ಕ್ಲಾಸಿಗೆ ಮಾಡಿಕೊಳ್ಳಬೇಕಾದ ಸಿದ್ಧತೆಯೇ ಎಕ್ಕ ಎದ್ದುಹೋಗುತ್ತಿತ್ತು. ಪರದೇಶದ ಏಕಾಂತವಾಸ ತಾಯ್ನೆಲದ ಅನುಭವವನ್ನು ಅಪಾರ ಸ್ಪಷ್ಟತೆಯಿಂದ ನೋಡುವ ಹಾಗೆ ಮಾಡುತ್ತದೆ ಅಥವಾ ಇನ್ನೊಂದು ಅತಿಗೆ ಹೋಗಿ ಎಲ್ಲವನ್ನೂ ಉತ್ಪ್ರೇಕ್ಷಿಸಿಬಿಟ್ಟು ಮನಸ್ಸು ರಾಡಿಯಾಗಿಬಿಡುತ್ತದೆ.

'ಪತ್ರಿಕೆ' ನನ್ನಲ್ಲಿ ಹುಟ್ಟಿಸಿದ ಉತ್ಸಾಹವನ್ನೋ, ಅಸಹನೆಯನ್ನೋ ಧ್ಯಾನಿಸುತ್ತ ಹೈಡ್‌ಪಾರ್ಕಿನಲ್ಲಿ ನಡೆದದ್ದುಂಟು. ಜಗತ್ತಿನ ಅತ್ಯುತ್ತಮ ಪತ್ರಿಕೆಗಳನ್ನು ಷಿಕಾಗೋ ವಿಶ್ವವಿದ್ಯಾಲಯದ ರೇಗನ್‌ಸ್ಟೈನ್ ಗ್ರಂಥಾಲಯದಲ್ಲಿ ಓದುತ್ತಿದ್ದ 'ನ್ಯೂ ಯಾರ್ಕರ್' ಪತ್ರಿಕೆಯಲ್ಲಿ ನೈಪಾಲ್ ಇರಾನ್ ಬಗ್ಗೆ ಬರೆದದ್ದನ್ನು ಓದಿದಾಗ ಅಂಥ ಉಗ್ರ, ವಿಳಲಿಲ್ಲ. ಆದರೆ, 'ಪತ್ರಿಕೆ'ಯಲ್ಲಿ ಬಂದ ಯಾವುದಾದರೊಂದಕ್ಕೆ ತಕ್ಷಣ ಪ್ರತಿಕ್ರಿಯಿಸುತ್ತಿದ್ದ ಇಚ್ಛೆಯು ಹುಟ್ಟಿ, ಎನ್ನಿಸಿತು. ತಕ್ಷಣ ಒಂದು ವಿಶಿಷ್ಟ ಸತ್ಯವೂ ಹೊಳೆಯಿತು....

ಬೇಕಾದ್ದಕ್ಕಿಂತ ಹೆಚ್ಚಿಗೆ ಕೇಳ್ಬೇಕು

ಅಣಕ



• ಎಚ್.ಎಲ್.ಕೇಶವಮೂರ್ತಿ

ಆತನಿಗೆ ಮೂರು ಕತ್ತೆ ವಯಸ್ಸಾಗಿತ್ತು! ಆದರೂ ಬುದ್ಧೀನೆ ಬಲಿತಿರಲಿಲ್ಲ. ಮೊದ್ಲು ಮಣೆ ಆದರೂ ಮುದ್ದು ಮಾಡೋಕೆ ಹೆಂಡತಿ ಅಂತ ಒಬ್ಬಳಿರಬೇಕು ಅನ್ನಿಸೋದು. ಹಾದಿಬೀದೀಲಿ ಕಂಡಕಂಡ ಹೆಂಗುಸರನ್ನೆಲ್ಲ ಹಾದರದ ಕಣ್ಣಿಂದ ನೋಡುವ ಹಾಗೆ ಆಗೋದು. ಅಪ್ಪ ಅನ್ನಿಸಿಕೊಂಡವನಿಗೆ ಇದು ತಿಳೀತು. ಹೆಣ್ಣು ನೋಡುವ ಶಾಸ್ತ್ರ ಮುಗಿಸಬೇಕು ಅಂದುಕೊಂಡ. ಅದಕ್ಕೆ ತಕ್ಕನಾದ ಮದುವೆ ಬ್ರೋಕರೂ ಸಿಕ್ಕಿದ. ಆವನ ಸಂಗಡ ಹೆಣ್ಣು ನೋಡೋಕೆ ಸಿದ್ಧ ಆದ ಮಗ. ದಡ್ಡ ಶಿಖಾಮಣಿ ಆದರೇನು ಗಂಡು ಮಗ ಅಲ್ವಾ. ಹೆಣ್ಣಿನವರು ಕೊಡೋದು ಬಿಡೋದು ಮಾಡ್ಲೇಬೇಕು. ಅದು ಯಾವುದೂ ಬ್ಯಾಡ, ಹುಡುಗಿ ಸಿಕ್ಕಿದರೆ ಸಾಕು ಅಂತ ಮಗರಾಯ ಎಲ್ಲಿ ಒಪ್ಪಿಕೊಂಡು ಬಂದುಬಿಡ್ತಾನೋ; ಬರೋ ಚೂರುಪಾರು ಒಡವೆ ವಸ್ತ್ರಗಳಿಗೂ ಕಲ್ಲು ಹಾಕುತ್ತಾನೋ ಅನ್ನುವ ದಿಗಿಲು ಕಾಡಿತು ಅಪ್ಪನಿಗೆ. ಅದಕ್ಕೇ ಮಗನಿಗೆ ಬುದ್ಧಿ ಮಾತು ಹೇಳಿದ. "ನೋಡು ಮಗ, ನೀನು ಹೆಣ್ಣು ನೋಡೋಕೆ ಹೋಗ್ತಿದೀಯಾ. ನಿನಗೇನು ಬೇಕೋ ಅದನ್ನೆಲ್ಲ ವಸೂಲ್ಮಾಡು. ಒಂದು ನೆನಪಿಟ್ಟುಕೊ. ಯಾವಾಗಲೂ ಬೇಕಾದ್ದಕ್ಕಿಂತ ಹೆಚ್ಚಿಗೇನೆ ಕೇಳ್ಬೇಕು. ಆಗ ನಿನಗೆ ಬೇಕಾದ್ದು ಸಿಗ್ತದೆ. ನಿನಗೆ ಸೈಕಲ್ಲು ಬೇಕು ಅಂತಿಟ್ಟುಕೊ. ಪೆದ್ದುಪೆದ್ದಾಗಿ ಸೈಕಲ್ ಬೇಕು ಅಂತ ಕೇಳಬಾರದು. ಬೈಕೇ ಬೇಕು ಅನ್ನಬೇಕು. ಬೈಕೇ ಬೇಕು ಅನ್ನಿಸಿತು ಅನ್ನು. ಆಗ ಏನು ಬೇಡಿಕೆ ಇಡಬೇಕು ಗೊತ್ತಾ? ಕಾರು ಬೇಕೇ ಬೇಕು ಅನ್ನಬೇಕು" ಹೀಗೆಲ್ಲ ತಿಳಿವಳಿಕೆ ಹೇಳಿದ ಅಪ್ಪ, ಪೆದ್ದ ಮಗನಿಗೆ ಇದರ ಅರ್ಥ ಆಗಿದೆಯೋ ಇಲ್ಲವೋ ಅನ್ನೊ ಅನುಮಾನ ಪರಿಹರಿಸಿಕೊಳ್ಳಲು 'ಸೈಕಲ್ ಬೇಕಾದರೆ ಏನು ಕೇಳಬೇಕು ಮಗ?' ಅಂತ ಕೇಳಿ ನೋಡಿದ. 'ಬೈಕ್ ಬೇಕು ಅನ್ಬೇಕು' ಅಂದ ಮಗರಾಯ. ಇದನ್ನ ಕೇಳಿ ತನ್ನ ಮಾತು ಮಗನ ಮನಸ್ಸಿಗೆ ನಾಟಿದೆ ಅನ್ನೊ ಸಮಾಧಾನವಾಯಿತು. ಬ್ರೋಕರ್ ಜೊತೆ ಮಗನನ್ನ ಕಳುಹಿಸಿಕೊಟ್ಟ.

ಹೆಣ್ಣಿನ ಮನೆಗೆ ಇಬ್ಬರೂ ಹೋದರು. ತಿಂಡಿತೀರ್ಥ ಎಲ್ಲ ಸಾಂಗವಾಗಿ ಆಯಿತು. ಹುಡುಗನಿಗೆ ಹುಡುಗಿ ಹಿಡಿಸಿದಳು. ಕಣ್ಣುಬಾಯಿ ಬಿಟ್ಕೊಂಡು ಆವಳ್ನೆ ನೋಡ್ತ ಕುಂತ. ಜೊತೆಗೆ ಬಂದಿದ್ದ ಬ್ರೋಕರು ಇದನ್ನೆಲ್ಲ ಗಮನಿಸಿದ. 'ಒಪ್ಗೆ ಆಯಿತು ತಾನೆ. ಏನು ಬೇಕೋ ಕೇಳು' ಅಂತ ಹುಡುಗನಿಗೆ ಹೇಳ್ದ. 'ಹೂಂ' ಅನ್ನಬೇಕು. ಅಷ್ಟರಲ್ಲಿ ಅಪ್ಪ ಹೇಳಿದ್ದ 'ಬೇಕಾದ್ದಕ್ಕಿಂತ ಹೆಚ್ಚಿಗೆ ಕೇಳಬೇಕು' ನೆನಪಾಯಿತು. 'ಹುಡುಗಿ ತಾಯಿ ಬೇಕು' ಅಂದ!

ಜಯಲಲಿತಾ ಅವರೂ 'ಬೇಕಾದ್ದಕ್ಕಿಂತ ಹೆಚ್ಚಿಗೇನೆ ಕೇಳ್ಬೇಕು' ಜಾಯಮಾನದವರೇ ಇರಬೇಕು. ಕಾವೇರಿ ನದೀಲಿ ನೀರು ಹರಿಯುವುದು ನಿಂತರೂ ಅವರ ತಕರಾರು ತಪ್ಪಂಗಿಲ್ಲ. ಈಗ ಅರವತ್ತ ಮೂರು ಟಿಎಂಸಿ ಅಡಿ ನೀರು ಬಿಡಲೇಬೇಕು ಅಂತ ವರಾತ ಹಚ್ಚವ್ರೆ. 'ಹೆಂಗವ್ವ ಇಷ್ಟೊಂದಾಯ್ತದೆ. ಜೂನ್ ತಿಂಗಳಲ್ಲಿ ಬಿಡಬೇಕಾದ್ದೇ ಹತ್ತು ಟಿಎಂಸಿ ಅಡಿ ನೀರಲ್ವ' ಅಂದ್ರೆ 'ಕಳೆದ ಸಾಲಿನ ಬಾಕಿ ಐವತ್ತುಮೂರು ಟಿಎಂಸಿಯ ನಿಮ್ಮಾತ ಕೊಡ್ತಾನ' ಅಂತಾರೆ. 'ಅಲ್ಲ ಕಣಮ್ಮ ಕಳೆದ ಸಾಲಿನಲ್ಲಿ ಮಳೆ ಬಿದ್ದದ್ದೇ ಕಡಿಮೆ. ಮಳೆರಾಯ ಹೋದ ಸಲ ಇಷ್ಟು ಕಡಿಮೆ ಮಳೆ ಸುರಿಸಿದ್ದ. ಅದನ್ನ ಈಗ ಸರಿ ತೂಗಿಸಬೇಕು ಅಂತ ಏನಾದ್ರೂ ಹೆಚ್ಚಿಗೆ ಮಳೆ ಸುರಿಸ್ತಾನಾ' ಅಂದ್ರೆ 'ನಿಮ್ ತರ್ಲೆ ತಾಪತ್ರಯ ಕೇಳ್ತಾ ಕೂರಕ್ಕಲ್ಲ ನಾನಿರೋದು. ಬಿಡಬೇಕಾದ ನೀರು ಬಿಡಿ' ಅಂತಾರೆ. 'ಜಲಾಶಯಗಳಲ್ಲಿ ನೀರೇ ಇಲ್ಲ. ಎಲ್ಲಿಂದ ಬಿಡೋದು' ಅಂದ್ರೂ ಕೇಳಂಗಿಲ್ಲ. ಕಾವೇರಿ ಉಸ್ತುವಾರಿ ಸಮಿತಿಗೆ ಹೋಗ್ತಾರೆ. ಅವರೂ 'ನೀವು ಕೇಳ್ತಾ ಇರೋದು ನ್ಯಾಯ ಅಲ್ಲ ತಾಯಿ' ಅಂದ್ರೆ ಸುಪ್ರೀಂಕೋರ್ಟಿಗೆ ಹೋಗ್ತಾರೆ. ಅಲ್ಲೂ ಹಂಗೇ ಅಂದ್ರು ಅನ್ನಿ. 'ಸಮಯಕ್ಕೆ ನೀರು ಬಿಡದೇ ಇರುವುದರಿಂದ ಬೆಳೆ ನಷ್ಟ ಆಗಿದೆ. ವಿದ್ಯುತ್ ಉತ್ಪಾದನೆ ನಿಂತಿದೆ. ನೀರಿಲ್ಲ ಅಂತೀರಿ. ಒಪ್ತೀನಿ. ಹಣ ಇದೆಯಲ್ಲಾ, ಆಗಿರುವ ನಷ್ಟ ತುಂಬಿ ಕೊಡಿ' ಅನ್ನಬಹುದೇನೋ...!

ಅಂಬರೀಸಣ್ಣಾರು ಮನೆ ಮಾಡಿದ್ದು



ಅಂಬರೀಸಣ್ಣ ಮಂಡ್ಯದಲ್ಲಿ ನಿಲ್ತಾರೆ ಅನ್ನೊ ಸುದ್ದಿ ಕೇಳಿ ಅಭಿಮಾನಿಗಳು ಪುಳಕಗೊಂಡರು. ಎದ್ದೆದ್ದು ಕುಣಿದರು. ಜೈಕಾರ ಹಾಕಿದರು. ಮಂಡ್ಯದ ಗಂಡನ್ನ ಗೆಲ್ಸಿ 'ಸೈ' ಅನ್ನಿಸಿಕೊಳ್ಳಬೇಕು ಅಂತ ತುದಿಗಾಲಲ್ಲಿ ನಿಂತಿದ್ರು. ಆದ್ರೆ ಇವರ ಆಸೆಗಳಿಗೆಲ್ಲ ತಣ್ಣೀರು ಎರಚುವಂತಹ ಮ[...] ತಿನ್ನುವ ಕೆಲಸ ಮಾಡಿಬಿಟ್ರು ಅಣ್ಣಾರು. ಟಿವಿ ಮು[...] ನಿಂತು ಸಿನಿಮಾ ಸ್ಟೈಲಿನಲ್ಲಿ 'ಮಂಡ್ಯದಲ್ಲಿ ಮನೆ ಮಾಡ[...] ಆಫೀಸ್ ಮಾಡ್ತೀನಿ' ಅಂದು ತಮ್ಮ ತಲೆ ಮೇಲೆ ತಾ[...] ಚಪ್ಪಡಿಕಲ್ಲು ಎಳ್ಕೊಂಡಿದ್ರು! ಇಂತಹ ಸುದ್ದಿ ಯ[...] ಮಾಯದಲ್ಲಿ ಹರಡುತ್ತೋ ಏನೋ! 'ಓ... ಇವನು ಗೆದ್ದ[...] ಬೆಂಗ್ಳೂರ ಪಾಲಾಯ್ತನೆ. ಹಂಗಂತ ಅವ್ನೇ ಹೇಳವ್ನೆ, ಆ[...] ಕಟ್ಕೊಂಡು ಏನ್ಮಾಡಿಯ' ಅನ್ನುವ ಗುಸುಗುಸು ಆ[...] ಶುರು ಆಯ್ತು, ಮಾಧ್ಯಮದವರನ್ನೆಲ್ಲ ಎಲ್ಲಿ ಬೇಕ[...] ಅಲ್ಲಿ ವೈನ್ ಮಾಡಿದ್ರು. ನಿಜ. 'ಅಂಬರೀಷ್ ಗೆಲು[...] ನಿಶ್ಚಿತ' ಅಂತೆಲ್ಲ ಹೇಳಿಸಿ ಬರೆಸಿ ಮಾಡಿಸುತ್ತಿದ್ದರು. ಅದ[...] ನಿಜ. ಆದರೆ ಏನು ಮಾಡ್ತೀರಿ. ಮಾಧ್ಯಮಗಳಲ್ಲಿ ಬಂದದ[...] ನಿಜ ಅಂತ ಎಲ್ಲರೂ ನಂಬುವುದಿಲ್ಲ. ಅಂಬರೀಸಣ[...] 'ನಾನೆಲ್ಲೂ ಹಾರಿಹೋಗಲ್ಲ, ಮಂಡ್ಯದಲ್ಲೇ ಇರ್ತೀನಿ' ಅ[...] ಸಾರಿಸಾರಿ ಹೇಳಿದ್ರು. ಆದರೂ ಹಾಳಾದ ಜನ ನಂಬ್ತ[...] 'ಇರ್ತೀನಿ ಅಂದುಬಿಟ್ರೆ ಆಗೋತದಾ. ಮನೆ ಅಂತ ಒಂ[...] ಇರಲೇಬೇಕಲ್ಲವಾ. ಅದು ವಾಸದ ಮನೆ ತರ[...] ಇರಬೇಕಲ್ಲವಾ' ಅಂತೆಲ್ಲ ಮಾತು ಕೇಳಿಬರ್ತಿತ್ತು, ಗುಸುಗು[...] ಪಿಸಪಿಸ ಮಾತೇ ಬಿರುಗಾಳಿಯಾಗಿ 'ಅಂಬರೀಸಣ್ಣಾರ ಮ[...] ಮಲಗಿಸೋದು ಗ್ಯಾರಂಟಿ' ಅನ್ನೊ ಸೂಚನೆ ಚೇಲಾ[...] ಮೂಗಿಗೆ ಬಡೀತು. ಇದನ್ನು ತಡೀಬೇಕು ಅಂತಾವ ಒಂ[...] ಬಾಡಿಗೆ ಮನೆ ಹಿಡಿದು 'ಅಂಬರೀಸ್ ಮನೆ' ಮಾಡಿದ[...] ಸುಮಲತಾರನ್ನೂ ಕರ್ಕೊಂಡು ಬಂದ್ರು. ಅಂತೂಇಂತ[...] ಮನೆ ಲುಕ್ ತಂದ್ರು... ಚುನಾವಣೆ ಬಂತ[...] ಹೋಯ್ತು. ಫಲಿತಾಂಶ ಬಂತ[...] ಅಂಬರೀಸಣ್ಣಾರು ಪತ್ನಿಸಮೇತರಾಗಿ ಬೆಂಗಳೂ[...] ಪಾಲಾದರು!


ಇಲ್ಲಿಗೆ ಒಂದು ಒಬ್ಬೆ ಮುಗೀತು.

ಅಂಬರೀಸಣ್ಣಾರು ಮಂತ್ರಿ ಆದರು. ಮಂಡ್ಯ ಮರೆ[...] ಬಿಟ್ಟರು. ಅವರೇನೋ ಮರೆತು ಮರೆಯಾಗಿದ[...] ದಿನಬೆಳಗಾದರೆ ಜನಗಳ ಕಣ್ಣಿಗೆ ಬೀಳ್ತಿದ್ದೋರು [...]

ಕೊರಗರ ಮಾನವೀಯ ಪದ್ಧತಿಯನ್ನು ಹಾಳುಗೆಡವಿದ ವೈದಿಕರು

ಕುಂದಾಪುರ ತಾಲೂಕಿನ ಗಂಗೊಳ್ಳಿಯಲ್ಲಿ ಜೂನ್ 5 ರಂದು ತ್ರಾಸಿ ಹಾಲ್‌ನಲ್ಲಿ ಸ್ವತಃ ಅಲ್ಲಿನ ಗ್ರಾಮ ಪಂಚಾಯತ್ ಅಧ್ಯಕ್ಷೆ ಸಾಕಮ್ಮ ಎಂಬುವವರ ಮದುವೆಯ ಕಾರ್ಯಕ್ರಮವಿತ್ತು. ಅದರ ಪೌರೋಹಿತ್ಯಕ್ಕಾಗಿ ಮದುವೆ ಮಂಟಪಕ್ಕೆ ಬಂದಿದ್ದ ಪುರೋಹಿತರು ಅದು ಕೊರಗ ಜಾತಿಯವರ ಮದುವೆ ಎಂದು ಅರಿತ ತಕ್ಷಣ ಪೌರೋಹಿತ್ಯವನ್ನು ನಿರಾಕರಿಸಿ ಮದುವೆ ಕಾರ್ಯ ನೆರವೇರಿಸದೇ ಹೊರನಡೆದರು. ಈ ಘಟನೆ ನಿಜಕ್ಕೂ ಮಾನವತೆಗೆ ಅತೀ ದೊಡ್ಡ ಅಪಚಾರ. ಮದುವೆಯೆಂದರೆ ಜೀವನವಿಡೀ ನೆನಪುಳಿಯುವ ಸಿಹಿ ಘಟನೆ, ಆದರೆ ಸಾಕಮ್ಮನವರಿಗೆ ಅದು ಜೀವನವಿಡೀ ನೆನಪುಳಿಯುವ ಕಹಿ ಘಟನೆಯಾಯಿತು!

ಅಷ್ಟೇ ಅಲ್ಲ, ಆ ಹಾಲ್‌ನಲ್ಲಿ ಸ್ವಚ್ಛತೆಯ ಕೆಲಸ ಮಾಡುವ ಕೂಲಿಗಳು ಸಹ ಕೊರಗರು ಉಂಡ ಎಲೆಗಳನ್ನು ತೆಗೆಯಲು ನಿರಾಕರಿಸಿದ್ದು ಸಹ ಘೋರ ಅಪಚಾರ. ಪುರೋಹಿತರು ಗಲಾಟೆ ಮಾಡಿ ಮರಳಿಹೋಗಿದ್ದರಿಂದ ಈ ಹಿಂದುಳಿದ ಜಾತಿಯ ಕೂಲಿಗಳಿಗೂ ಕೊರಗರ




ಊಟದ ಎಲೆ ತೆಗೆಯಲು ನಿರಾಕರಿಸುವ ಧೈರ್ಯ ಬಂದಿದ್ದು. ಕೊರಗರು ಪರಿಶಿಷ್ಟ ವರ್ಗದಡಿ ಬರುವುದರಿಂದ ಈ ಘಟನೆ ಸಾರಾಸಗಟಾಗಿ 'ಜಾತಿನಿಂದನೆ' ಪ್ರಕರಣವಾಗಿರುತ್ತದೆ. ಮೇಲಾಗಿ ಮಧುಮಗಳು ಸ್ವತಃ ಗ್ರಾಮ ಪಂಚಾಯತ್ ಅಧ್ಯಕ್ಷೆ. ಓರ್ವ ಪಂಚಾಯತ್ ಅಧ್ಯಕ್ಷರಿಗೇ ಮೇಲ್ವರ್ಗದವರು ಇಷ್ಟು ಧೈರ್ಯದಿಂದ ತುಂಬಿದ ಮದುವೆ ಸಮಾರಂಭದಲ್ಲಿಯೇ ಬಹಿರಂಗವಾಗಿ ಜಾತಿನಿಂದನೆ ಮಾಡಬಹುದೆಂದರೆ ಅವರ್ಯಾರಿಗೂ ಕಾನೂನಿನ ಭಯವೇ ಇಲ್ಲ ಎಂಬುದು ಸಾಬೀತಾಯಿತು. ಈ ಅಪರಾಧ ನಾನ್-ಬೈಲೇಬಲ್ ಅಪರಾಧವಾಗಿದ್ದು ತಕ್ಷಣ ಆ ಪುರೋಹಿತರ ಬಂಧನವಾಗಬೇಕಿತ್ತು. ಆದೇಕೆ ಇನ್ನೂ ಆಗಿಲ್ಲ? ಇಂತಹ ಘಟನೆಗಳಲ್ಲಿ ಕ್ರಮ ಕೈಗೊಳ್ಳಲು ಸಂತ್ರಸ್ತರೇ ಪೊಲೀಸರಿಗೆ ದೂರು ಕೊಡಬೇಕಾದ ಅವಶ್ಯಕತೆಯಿಲ್ಲ. ಪೊಲೀಸರು ಹಾಗೂ ಜಿಲ್ಲಾಡಳಿತ ಈ ಬಗ್ಗೆ ಸ್ವಯಂಪ್ರೇರಿತರಾಗಿ ಕ್ರಮ ಕೈಗೊಳ್ಳಬೇಕಿತ್ತು.

ಕೊರಗರು ಎಲ್ಲಾ ಜಾತಿಯ ಕರಾವಳಿ ತುಳುವರ ಮೂಲ ಪುರುಷರಾಗಿದ್ದುದರಿಂದ, ಕೊರಗರ ಮನ ನೋಯಿಸಿದರೆ ಅದೃಷ್ಟ ದೇವತೆ ಮುನಿಯುತ್ತಾಳೆ ಎಂಬ ನಂಬಿಕೆ ಎಲ್ಲ ತುಳುವರಲ್ಲಿ ಮೊದಲು ಇತ್ತು. ಯಾವುದಾದರೂ ಕುಟುಂಬದಲ್ಲಿ ಹುಟ್ಟಿದ ಮಕ್ಕಳು ಮೇಲಿಂದ ಮೇಲೆ ಸಾಯುತ್ತಿದ್ದರೆ ಹೊಸದಾಗಿ ಹುಟ್ಟಿದ ಮಗುವಿಗೆ 'ಕೊರಗ', 'ಮಾಯಿಲ-ಮುಂಡಾಳ' ಎಂಬ ಕೊರಗ ಅಥವಾ ಇತರ ದಲಿತ ಜಾತಿಯ ಹೆಸರಿಟ್ಟರೆ ದೇವರು ಸಂತೃಪ್ತರಾಗಿ ಮಕ್ಕಳು ಬದುಕುಳಿಯುತ್ತಾರೆ ಎಂಬ ನಂಬಿಕೆ ತುಳುವರಲ್ಲಿ ಬಹಳ ಹಿಂದಿನಿಂದ ಇತ್ತು. ಅಷ್ಟೇ ಅಲ್ಲ, ಕೊರಗತಿಯರು ಬಂದು ಆ ನವಜಾತ ಶಿಶುವಿಗೆ ತಮ್ಮ ಮೊಲೆಹಾಲನ್ನು ಕೊಟ್ಟು, ಮೊದಲಬಾರಿಗೆ ತೊಟ್ಟಿಲಿನಲ್ಲಿ ಹಾಕಿ ತೂಗಬೇಕೆಂಬ ಪರಿಪಾಟವಿತ್ತಂತೆ (ಹಾಗಾಗಿ ಈಗಲೂ ನಮ್ಮ ನಡುವೆ 'ಕೊರಗ ಶೆಟ್ಟಿ', 'ಮಾಯಿಲ ಹೆಗ್ಗಡೆ', 'ಮುಂಡಪ್ಪ ರೈ' ಎಂಬ ಹೆಸರಿನ ಮೇಲ್ಜಾತಿ ಬಂಟರನ್ನು ಕಾಣಬಹುದು). ದೊಡ್ಡ ಮಕ್ಕಳು ಅಸ್ವಸ್ಥರಾದರೆ ಮೇಲ್ಜಾತಿಯ ತುಳುವರು ಕೊರಗರನ್ನು ಮನೆಗೆ ಕರೆಸಿ ಅವರಿಗೆ ಅನ್ನದಾನ ಮಾಡಿ ಅನ್ನದ ಎಲೆಯನ್ನು ಕೊರಗರು ಮಗುವಿನ ತಲೆಯ ಸುತ್ತ ಮೂರು ಬಾರಿ ತಿರುಗಿಸಿ ನಂತರ ಕೊರಗತಿಯು ತನ್ನ ಕೈಯಿಂದಲೇ ಮಗುವಿಗೆ ಒಂದು ತುತ್ತು ಅನ್ನ ತಿನ್ನಿಸುತ್ತಿದ್ದಳು. ನಂತರ ಕೊರಗರೆಲ್ಲ ಆ ಮನೆಯಲ್ಲೇ ಊಟ ಮಾಡುತ್ತಿದ್ದರು. ಅವರಿಗೆ ವಿವಿಧ ದಕ್ಷಿಣೆಯನ್ನೂ ಕೊಡಲಾಗುತಿತ್ತು. ಇಂತಹ ಘನ ನಂಬಿಕೆಯು ಮುಂದೆ ವೈದಿಕರ ಪ್ರಭಾವದಿಂದ ಅನ್ನಕ್ಕೆ ಮಗುವಿನ ಉಗುರು-ಕೂದಲು ಹಾಕುವ ಹೀನ 'ಅಜಲು' ಪದ್ಧತಿಯಾಗಿ ಪರಿವರ್ತನೆಯಾಯಿತು.

ವೈದಿಕ ನಂಬಿಕೆಯಂತೆ ಬ್ರಾಹ್ಮಣರಿಗೆ ಅನ್ನದಾನ ಮಾಡಿದರೆ ದೋಷಗಳು ಪರಿಹಾರವಾಗುತ್ತದಂತೆ. ಆದರೆ ಮೂಲ ತುಳುವರ ನಂಬಿಕೆಯಂತೆ ದಲಿತ ಕೊರಗರಿಗೆ ಅನ್ನದಾನ ಮಾಡಿದರೆ ಎಲ್ಲ ದೋಷಗಳೂ ಪರಿಹಾರವಾಗುತ್ತವಂತೆ. ಹೊಟ್ಟೆ ತುಂಬಿದವರಿಗೇ ಅನ್ನದಾನ ಮಾಡುವುದು ವೈದಿಕ ಪದ್ಧತಿ, ಹಸಿದವನಿಗೆ ಅನ್ನದಾನ ಮಾಡುವುದು ನಮ್ಮ ಶೂದ್ರ-ತುಳುವರ ಪದ್ಧತಿ. ತುಳುವರ ಈ ಅತ್ಯಂತ ಮಾನವೀಯ ಪದ್ಧತಿಯನ್ನು ಈಗೀಗ ಅಮಾನವೀಯ ವೈದಿಕ ಪದ್ಧತಿ ನುಂಗಿಹಾಕುತ್ತಿರುವುದು ನಮ್ಮ ತುಳುನಾಡಿನ ಸಮಾಜ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದಕ್ಕೆ ಸಾಕ್ಷಿ.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು




ಬಿ.ಟಿ.ಇ. ಎಂಬ ಪರಮದರಿದ್ರ ಬೋರ್ಡು?!

ಸಾಮಾನ್ಯವಾಗಿ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಶಿಕ್ಷಣ ಮಂಡಳಿಗಿಂತ ಭಿನ್ನವಾಗಿರುತ್ತಿದ್ದ ತಾಂತ್ರಿಕ ಶಿಕ್ಷಣ ಮಂಡಳಿಗೆ (ಬಿಟಿಇ) ಈಗ ಕಣ್ಣು, ಕಿವಿ ಇದ್ದಂತಿಲ್ಲ. ಕಳೆದ ಎರಡು ವರ್ಷಗಳಿಂದ ಡಿಪ್ಲೊಮಾ ಸೀಟುಗಳನ್ನು ಖಾಸಗಿ ಸಂಸ್ಥೆಗಳಿಗೆ ಕೊಡುತ್ತಿರುವ ಮಂಡಳಿಗೆ, ಖಾಸಗಿ ಕಾಲೇಜುಗಳು ಪಡೆಯುತ್ತಿರುವ ಶುಲ್ಕದ ಮೇಲೆ ಯಾವುದೆ ನಿಯಂತ್ರಣ ಇಲ್ಲ. ಇನ್ನು ಮಂಡಳಿಯು ನಿಗದಿಪಡಿಸಿ[...] ಪರೀಕ್ಷಾ ವೇಳಾಪಟ್ಟಿಯನುಸಾರ 2011-12 ಸಾಲಿನವರೆಗ[...] ಪರೀಕ್ಷೆ ನಡೆದ ಉದಾಹರಣೆಯೇ ಇಲ್ಲ (ಕನಿಷ್ಠ ಮೂ[...] ಬಾರಿ ವೇಳಾಪಟ್ಟಿ ಬದಲಾಗಿಯೇ ಪರೀಕ್ಷೆ ನಡೆಯುತ್ತದ[...] ಹಾಗೆಯೇ ನಾಲ್ಕು ವರ್ಷಗಳಿಂದ ಬಿಟಿಇಗೆ ಅಂತಿ[...] ವರ್ಷ ಡಿಪ್ಲೊಮಾಗೆ ಪ್ರವೇಶ ಪಡೆಯಲು ಇರಬೇಕಾ[...] ಮಾನದಂಡಗಳ ಬಗ್ಗೆ ದೃಢವಾದ ನಿಲು[...] ಇಲ್ಲದಿರುವುದರಿಂದ ವಿದ್ಯಾರ್ಥಿಗಳು ಗೊಂದಲದಲ್ಲಿದ್ದಾ[...]

ಈ ಮಂಡಳಿಯು ಹುಟ್ಟು ಸೋಂಭೇರಿಗಳಿಂ[...] ತುಂಬಿಕೊಂಡಿರುವ ಅಡ್ಡೆಯಂತಾಗಿದೆ ಎಂಬುದಕ್ಕೆ ಜೂ[...] 16 ರಂದು ನಡೆದ ಡಿಪ್ಲೋಮಾ ಸಿ.ಇ.ಟಿ ಪರೀಕ್ಷೆಯೆ[...] ಉತ್ತಮ ಉದಾಹರಣೆ.. ಈ ಪರೀಕ್ಷೆಯ ಹೊಣೆಯನ[...] ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೊತ್ತಿತ್ತು. ಪರೀಕ್ಷೆ[...] ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ[...] ಹಾಕಬೇಕೆಂದು ಆದೇಶ ಹೊರಡಿಸಿತ್ತು. ಕಂಪ್ಯೂಟರ[...] ಹಾಗೂ ಆನ್‌ಲೈನ್ ಬಗ್ಗೆ ತಿಳಿವಳಿ[...] ಇಲ್ಲದ ವಿದ್ಯಾರ್ಥಿಗಳ[...] ಪರದಾಡುವಂತಾಯಿತು. ಮೊದ[...] ಪರೀಕ್ಷಾ ಶುಲ್ಕವನ್ನು ಬ್ಯಾಂಕ್‌ನಲ್ಲಿ ಕ[...] ಬಂದು ರೋಸಿಹೋಗಿ[...] ವಿದ್ಯಾರ್ಥಿಗಳು, ಸೈಬ[...] ಆಪರೇಟರ್‌ಗಳ ಮೊರೆ ಹೋ[...] ಫೋಟೋ, ಸಿಗ್ನೇಚ[...] ಡೌನ್‌ಲೋಡ್, ಸ್ಕ್ಯಾನಿಂಗ್ ಎಂದು ಇನ್ನಷ್ಟು ಹಣ ಸೈಬರ್[...] ಸುರಿಯಬೇಕಾಯಿತು. ಇನ್ನು ಪ್ರವೇಶ ಪತ್ರ ಬಂದಾ[...] ಅದರ ಕಲರ್ ಅಥವಾ ಸಾಧಾರಣ ಪ್ರಿಂಟ್ ಪಡೆಯಬೇ[...] ಎಂಬುದರ ಬಗ್ಗೆ ಮಾಹಿತಿ ಇಲ್ಲದೆ ವಿದ್ಯಾರ್ಥಿಗಳು ಮ[...] ಗೊಂದಲಕ್ಕೊಳಗಾದರು (ಹಣ ಇದ್ದ ಅನುಕೂಲಸ್ಥ[...] ಕಲರ್ ಪ್ರಿಂಟ್, ಇಲ್ಲದವರು ಸಾಧಾರಣ ಪ್ರಿಂಟ್ ಪಡೆದರು[...] ಪ್ರವೇಶಪತ್ರ ಹಾಗೂ ಅರ್ಜಿಗಳ ಜೊತೆ ಬರಬೇಕಿ[...] ಇಂಜಿನಿಯರಿಂಗ್ ಕಾಲೇಜುಗಳು, ಖಾಲಿಯಿರುವ ಸೀಟು[...] ಮಾಹಿತಿಯೇ ದೊರಕಿಲ್ಲ.

ಈ ಎಲ್ಲ ಗೊಂದಲಗಳ ಮಧ್ಯೆ ಪರೀಕ್ಷೆ ಕೊಠಡಿ[...] ವಿದ್ಯಾರ್ಥಿಗಳು ಹೋದಾಗ ಇನ್ನೂ ಹೆಚ್ಚಿನ ಅಚ್ಚರಿಗ[...] ಕಾದಿದ್ದವು. ಒಂಭತ್ತು ಗಂಟೆಗೆ ನಡೆಯಬೇಕಿದ್ದ ಪರಿ[...] 9.30ಕ್ಕೆ ನಡೆಯಿತು. ಮೊದಲ ಬಾರಿ ಪರಿ[...] ಬರೆಯುತ್ತಿರುವವರಿಗೆ ಓ.ಎಮ್.ಆರ್. ಎನ್ನು[...] ಪ್ರಾಯೋಗಿಕವಾಗಿ ಅಭ್ಯಸಿಸದ ಉತ್ತರ ಪತ್ರಿಕೆ ಬಂ[...]



ರಾಗಳು. ಅವರಿಗೆ ಫಜೀತಿಗಿಟ್ಟುಕೊಂಡಿತು. ಹೊರಕ್ಕೆ ಹಾಕಿದ್ರೆ ಸಾಕು. 'ಎಲ್ಲವನ್ನ ನಿಂ ಅಂಬರೀಸ', 'ಇಲ್ಲೇ ನೆ ಅಂತಿದ್ರೆ ಅವ್ವಾ' ಅನ್ನೊ ಚುಚ್ಚುವ ಮಾತುಗಳನ್ನ ಬೇಕಾಯಿತು. ಮೊದಮೊದಲು 'ಇವತ್ತು ಬತ್ತಾರೆ, ಬತ್ತಾರೆ, ಒತ್ತಾರಿಕೆ ಬತ್ತಾರೆ' ಅಂತ ಸಬೂಬು ಹೇಳಿ ಸುಸ್ತಾದರು. ಎಷ್ಟು ದಿವಸ ಅಂತ ಇಂತಹ ಹೇಳೋಕೆ ಆಗುತ್ತೆ ಹೇಳಿ. ಚೇಲಾಗಳೆಲ್ಲ ಒಂದು ಸೇರಿಕೊಂಡು 'ಡಿಸ್ಟ್ರಿಕ್ಟ್ ಮಂತ್ರಿ ಅಂದ್ಮೇಲೆ ವಾರಕ್ಕೆ ನೈದು ದಿನಕ್ಕೆ ಒಂದು ಸಾರಿ ಇಲ್ಲಿಗೆ ಬರಬಾರ್ದಾ. ಬತ್ತಾನೇ ಇಲ್ವಲ್ಲ, ಜನಾದ ಜನ ಎಲ್ಲ ಉಗೀತಾ ವೆ. ಏನು ಮಾಡೋದು' ಅಂತೆಲ್ಲ ಚರ್ಚಿಸಿದರು. ನೆಗೆ ಬೆಂಗಳೂರಿಗೇ ಹೋಗಿ ಅಂಬರೀಸಣ್ಣಾರ ಕಂಡು ಜಾನ ಅಂತ ತೀರ್ಮಾನಿಸಿದರು. ಹಂಗೇ ಹೋದರಂತೆ. ಬರೀಸು ಫಿಲಂ ಸ್ಟಾರು. ಈಗ ಮಂತ್ರಿ ಬೇರೆ ಆಗವ್ರೆ. ನ್ಮೇಲೆ ಕೈಗೆ ಕಾಲಿಗೆ ಸಿಗೋ ಇಸಮ್ ಅಲ್ಲ, ಚೇಲಾಗಳು ಯ್ತಾ ಕುಂತ್ರವೆ... ಕೊನೆಗೂ ಅಂಬರೀಸಣ್ಣಾರ ದರ್ಶನ ಆಯಿತು. ಇವರನ್ನೆಲ್ಲ ಕಂಡವರೆ 'ಏನುರ್ಲಾ ಬಡ್ಡೆತ್ತವ ೀಗೆಂಟ ಬಂದಿದ್ದೀರಿ' ಅಂಬರೀಸು ಮಾಮೂಲಿ ಟೀಲಿ ಅಂದರು. ಇವರು ಅಂಜ್ತಾ ಅಳುಕ್ತಾ ಮಂಡ್ಯದಲ್ಲಿ ರ ಇರುವಿಕೆಯ ಅವಶ್ಯಕತೆಯನ್ನ ಅಂಜುತ್ತಾ ಅಳುಕುತ್ತಾ ಳಿದ್ರು. ಅವರು ಎಲ್ಲವನ್ನೂ ಕೇಳಿಸಿಕೊಂಡರು. ಎಲ್ಲಾ ದ ಮೇಲೆ ಇವರು ತಲೆ ಕೆರೆದುಕೊಳ್ತಾ 'ಮಂಡ್ಯದಲ್ಲೇ ಿ ಆದಲ್ಲಣ್ಣ' ಅಂದರು.

'ಹೂಂ ಆದೆ ಏನೀಗ?' ಅಂದ್ರು ಅಂಬರೀಸು.

'ಜನ ಎಲ್ಲ ಆಡ್ಕಂತಾರೆ ಕಣಣ್ಣ.'

'ಯಾರ್ಲಾ ಮನೆ ಮಾಡಿ ಅಂದಿದ್ದೋರು?'

'ಯಾರೂ ಇಲ್ಲ ಕಣಣ್ಣ, ಜನಕೆ ತೋರಿಸಬೇಕಾಗಿತ್ತು ...'

'ಮಾಡಿದ್ರಿ. ಅಲ್ವಾ?'

'ಹೂ ಕಣಣ್ಣ.'

'ನೀವು ತಾನೆ ಮಾಡಿದ್ದು?'

'ಹೂಂ ಕಣಣ್ಣ.'

'ಹೋಗಿ ನೀವೇ ಅಲ್ಲಿದ್ದು ಸಾಯೋಗಿ' ಅಂದ್ರು ಬರೀಸು!

* * * *

ಅಂಬರೀಷ್ ಸಂಸದರಾಗಿದ್ದ ಸಂದರ್ಭ.

ದೂರಸಂಪರ್ಕ ಇಲಾಖೆಯ ಯಾವುದೋ ಒಂದು ಸಮಿತಿ. ಅದಕ್ಕೆ ಸಂಸದರೇ ಅಧ್ಯಕ್ಷರು. ಇದು ಪ್ರೊಟೋಕಾಲು ಪ್ರಶ್ನೆ ಅಂತೆ.

ಆ ಸಮಿತಿ ಸಭೆ ನಡೆಸಬೇಕಿತ್ತು, ಇಲಾಖೆಯ ಉನ್ನತ ಅಧಿಕಾರಿ ಅಂಬರೀಷ್ ಕಾಣಲು ಅವರ ಮನೆಗೆ ಹೋದರಂತೆ. ಯಾರನ್ನಾದರೂ ನೋಡಲು ಹೋಗಬೇಕಿದ್ದರೆ ಅವರ ದಿನಚರಿ ತಿಳಿದು ಹೋಗಬೇಕು. ಇವರು ಹಾಗೆ ಮಾಡಿರಲಿಲ್ಲ. ಹೊತ್ತು ಮೀರಿಹೋದರೆ ಸಂಸದರು ಕಾರ್ಯನಿಮಿತ್ತ ಹೊರಗೆ ಹೋಗಬಹುದು ಎಂದು ಭಾವಿಸಿಕೊಂಡ ಅಧಿಕಾರಿ ಬೆಳಗಿನ ಒಂಭತ್ತು ಗಂಟೆಗೆಲ್ಲ ಅಲ್ಲಿದ್ದರಂತೆ. ಬಾಗಿಲು ಕಾಯುತ್ತಿದ್ದವನು 'ಸಾಹೇಬರು ಮಲಗಿದಾರೆ' ಅಂದನಂತೆ. ಹೋಗಿ ನಂತರ ಬರೋಣ ಅನ್ನುವಂತಿಲ್ಲ, ಅವರು ಎಲ್ಲಾದರೂ ಹೊರಟು ಹೋದರೆ ವೃಥಾ ದಣಿವು. ಅಲ್ಲೇ ಕಾಯುತ್ತಾ ಕುಳಿತರಂತೆ. ಗಂಟೆ ಹತ್ತಾಯಿತು. ಹನ್ನೊಂದೂ ಆಯಿತು. ಇನ್ನೂ ಸಾಹೇಬರು ಮಲಗೇ ಇದ್ದರಂತೆ. ಅಧಿಕಾರಿ ಕಾಯ್ದು ಕಾಯ್ದು ಸುಸ್ತಾದರಂತೆ. ಕೊನೆಗೂ ಸಾಹೇಬರು ಎದ್ದಿದ್ದಾರೆ ಎಂಬ ಸುದ್ದಿ ಹನ್ನೆರಡು ಗಂಟೆಯ ಸುಮಾರಿಗೆ ಬಂತಂತೆ. ಇವರು ಒಳಕ್ಕೆ ಹೋದರಂತೆ. ಸಾಹೇಬರು ಪೇಪರ್ ಓದುತ್ತಾ ಕುಳಿತಿದ್ದರಂತೆ. ಇವರು 'ನಮಸ್ಕಾರ ಸಾರ್' ಅಂದರಂತೆ. ಅವರು 'ಹಾಂ' ಅಂತ ಕತ್ತು ಒಗೆಯುತ್ತಾ ಪೇಪರ್‌ನಲ್ಲೇ ಮಗ್ನರಾದರಂತೆ. ಇವರು ತಾವು ಬಂದ ವಿಷಯ ಪ್ರಸ್ತಾಪಿಸಿದರಂತೆ. ಅವರು ಪೇಪರಿನಿಂದ ತಲೆ ಎತ್ತಲೇ ಇಲ್ಲವಂತೆ.

'ಸಾರ್ ಅವತ್ತು ತಾವು ಬರಬೇಕು ಸಾರ್.'

'ನಾನು ಬರಲೇಬೇಕಾ?'

'ಹೌದು ಸಾರ್. ತಾವೇ ಅಧ್ಯಕ್ಷರು.'

'ಅವತ್ತು ದೇಶದಲ್ಲೇ ಇದ್ದರೆ ಬರ್ತೀನಿ' ಅಂದರಂತೆ ಅವರು!

ಇಂತಹ ಹತ್ತಾರು ಸಂಗತಿಗಳು ಆತ್ಮೀಯ ವಲಯಗಳಲ್ಲಿ ಹರಿದಾಡುತ್ತಿವೆ.

●

ದುರಾಶೆ ರಾಜೀನಾಮೆ



ಕೊನೆಗೂ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷೆ ಸ್ಥಾನಕ್ಕೆ ತಾರಾ ಅನುರಾಧ ರಾಜೀನಾಮೆ ನೀಡಿದ್ದಾರೆ. ತಮಾಷೆಯೆಂದರೆ "ನಿಮ್ಮನ್ನು ಅಕಾಡೆಮಿಯ ಅಧ್ಯಕ್ಷೆ ಸ್ಥಾನದಿಂದ ಪದಮುಕ್ತ ಮಾಡಿದ್ದೇವೆ" ಎಂಬ ರಾಜ್ಯ ಸರ್ಕಾರದ ಪತ್ರ ತಾರಾ ಅವರ ಕೈ ಸೇರಿದ ನಂತರವೇ ಅವರು ಓಡೋಡಿ ಹೋಗಿ ತಮ್ಮ ರಾಜೀನಾಮೆ ನೀಡಿದ್ದಾರೆ.

ಕೊನೆಯ ಕ್ಷಣದವರೆಗೂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ತಾರಾ ಮೀನಮೇಷ ಎಣಿಸುತ್ತಿದ್ದರು. ಅಕಾಡೆಮಿ ಸ್ಥಾನಕ್ಕೆ ರಾಜೀನಾಮೆ ನೀಡುವ ಅಗತ್ಯವಿಲ್ಲ ಎಂದು ಅವರ ಕೆಲವು ಹಿತೈಷಿಗಳು ಹೇಳಿದ್ದನ್ನೇ ನಂಬಿದ್ದ ತಾರಾ ಹೇಗಾದರೂ ಮಾಡಿ ಆ ಸ್ಥಾನದಲ್ಲಿ ಮುಂದುವರೆಯಲು ಪ್ರಯತ್ನಿಸುತ್ತಿದ್ದರು.

ಆದರೆ ಈ ಸಂಬಂಧವಾಗಿ ತಾರಾ ಹೇಳುವುದೆ ಬೇರೆ. "ನಾನು ಮೂರು ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿಯಾಗಿ ರಾಜೀನಾಮೆ ಪತ್ರವನ್ನು ನೀಡಲು ಪ್ರಯತ್ನಿಸಿದ್ದೆ. ಆದರೆ ಅವರೇ 'ಸದ್ಯಕ್ಕೆ ಬೇಡಮ್ಮ' ಎಂದು ನನ್ನನ್ನು ವಾಪಸ್ ಕಳುಹಿಸಿದ್ದರು" ಎಂಬುದು ತಾರಾ ಅವರ ಹೇಳಿಕೆ. ಹೊಸ ಸರ್ಕಾರ ಸಾಮಾನ್ಯವಾಗಿ ಅಕಾಡೆಮಿ ಮತ್ತು ನಿಗಮಗಳಿಗೆ ಹೊಸ ನೇಮಕಗಳನ್ನು ಮಾಡುತ್ತದೆ. ಅದರಲ್ಲೂ ಒಂದು ರಾಜಕೀಯ ಪಕ್ಷದ ಸಕ್ರಿಯ ಸದಸ್ಯರಾಗಿರುವ ತಾರಾ ತರಹದ ವ್ಯಕ್ತಿಗಳು ತಮ್ಮದಲ್ಲದ ಬೇರೆ ಪಕ್ಷ ಅಧಿಕಾರಕ್ಕೆ ಬಂದಕೂಡಲೆ ತಮ್ಮ ಜಾಗವನ್ನು ಖಾಲಿಮಾಡುತ್ತಾರೆ. ಆದರೆ ತಾರಾ ಹಾಗೆ ಮಾಡಲಿಲ್ಲ, ಬದಲಾಗಿ ಚೆಡ್ಡಿಗಳ ಪಕ್ಷವಾದ ಬಿಜೆಪಿಯ ಅಭ್ಯರ್ಥಿಗಳ ಪರವಾಗಿ ಚುನಾವಣೆಯಲ್ಲಿ ಪ್ರಚಾರ ಮಾಡಿದ, ಬಿಜೆಪಿಯಿಂದ ವಿಧಾನ ಪರಿಷತ್ತಿಗೆ ನಾಮಕರಣಗೊಂಡಿರುವ ತನ್ನನ್ನು ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ಆಕಾಡಮಿಯ ಅಧ್ಯಕ್ಷೆ ಸ್ಥಾನದಲ್ಲಿ ಮುಂದುವರೆಯಲು ಸೂಚಿಸುತ್ತದೆ ಎಂದು ಭಾವಿಸಿದ್ದು ಆಕೆಯ ದುರಾಸೆಯನ್ನು ತೋರುತ್ತದೆಯೋ ಅಥವಾ ರಾಜಕೀಯ ಅಜ್ಞಾನವನ್ನೋ ಎಂದು ಜನರೇ ನಿರ್ಧರಿಸಬೇಕು.

ಈಗ ತಾರಾ ತೆರವು ಮಾಡಿರುವ ಸ್ಥಾನವನ್ನು ತಮ್ಮದಾಗಿಸಿಕೊಳ್ಳಲು ಜಯಮಾಲಾ, ಭಾವನಾ, ಕೆ.ಸಿ.ಎನ್.ಚಂದ್ರು, ನಂಜುಂಡೇಗೌಡ, ರಾಜೇಂದ್ರ ಸಿಂಗ್ ಬಾಬು, ಸಾ.ರಾ.ಗೋವಿಂದು ಮತ್ತು ವೀರೇಶ್ ಚಿತ್ರಮಂದಿರದ ಮಾಲೀಕ ಚಂದ್ರಶೇಖರ್ ಬಿರುಸಿನ ಲಾಬಿಯನ್ನು ಆರಂಭಿಸಿದ್ದಾರೆ. ಬಹುಶಃ ಈ ತಿಂಗಳ ಕೊನೆಯಲ್ಲಿ ಅಥವಾ ಜುಲೈ ಮೊದಲ ವಾರದಲ್ಲಿ ಅಕಾಡೆಮಿಗೆ ಹೊಸ ಅಧ್ಯಕ್ಷರು ಬರಲಿದ್ದಾರೆ. ಈ ಎಲ್ಲ ಹೆಸರುಗಳ ಹೊರತಾಗಿ ಕೊನೆಕ್ಷಣದಲ್ಲಿ ಗಿರೀಶ್ ಕಾಸರವಳ್ಳಿ, ಗಿರೀಶ್ ಕಾರ್ನಾಡ್ ಅಥವಾ ಎಂ.ಎಸ್ ಸತ್ಯು ಅವರಂತಹ ದೊಡ್ಡ ವ್ಯಕ್ತಿಗಳು ಅಧ್ಯಕ್ಷರಾಗಿ ಆಯ್ಕೆಯಾದರೂ ಆಶ್ಚರ್ಯಪಡಬೇಕಾಗಿಲ್ಲ, ಅಂತೂ ಮುಂದಿನ ಎರಡು ಮೂರು ವಾರಗಳ ಕಾಲ ಗಾಂಧಿನಗರದ ಜನ ಚಿತ್ರಗಳ ಬಗ್ಗೆ ಜನ ಮಾತನಾಡುವುದನ್ನು ಬಿಟ್ಟು ಅಕಾಡೆಮಿ ಅಧ್ಯಕ್ಷ ಸ್ಥಾನದ ಬಗ್ಗೆ ಹೆಚ್ಚು ಮಾತನಾಡಲಿದ್ದಾರೆ ಎಂಬುದರಲ್ಲಿ ಡೌಂಟೇ ಇಲ್ಲ. ಈ ಮಾಯಾಲೋಕದ ಜನರಲ್ಲಿ ಅಕಾಡಮಿ ಅಧ್ಯಕ್ಷ ಸ್ಥಾನಕ್ಕೆ ಯಾರು ಯೋಗ್ಯರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಯ್ಕೆ ಮಾಡುತ್ತಾರೆ ಎಂಬ ಕುತೂಹಲ, ಸಸ್ಪೆನ್ಸ್ ಈಗಾಗಲೇ ಎಲ್ಲೆಡೆ ಇದೆ.

● ಶೆಣೈ


ಪತ್ರಿಕೆಯ ಸೀರಿಯಲ್ ನಂಬರ್ ನಮೂದಿಸಲು ಎಮ್.ಆರ್. ಉತ್ತರ ಪತ್ರಿಕೆಯಲ್ಲಿ ಕಾಲಂ ಇರಲಿಲ್ಲ! ದಲ್ಲಕಿಂತ ದೊಡ್ಡ ಅಚ್ಚರಿಯೆಂದರೆ ಕಳೆದ ವರ್ಷ ದ್ರಣವಾದ ಪ್ರಶ್ನೆಪತ್ರಿಕೆಯೇ 2012-13 ಸಾಲಿನಲ್ಲೂ ದರಾವರ್ತನೆಯಾಗುತ್ತದೆ!! (ಪಾಪ ಮಂಡಳಿಯವರಿಗೆ ದೇ ಒಂದು ಪ್ರಶ್ನೆಯನ್ನೂ ಹೊಸದಾಗಿ ಮುದ್ರಿಸಲು ಯವಿರಲಿಲ್ಲ ಅನಿಸುತ್ತದೆ.)

ಹೀಗೆ ವಿದ್ಯಾರ್ಥಿಗಳಲ್ಲಿ ಗೊಂದಲ, ಆತಂಕಗಳನ್ನು ಟ್ಟುಹಾಕುತ್ತಾ ಹೋಗಿದೆ ಬಿಟಿಇ. ಈ ಎಲ್ಲ ವಣಿಗೆಗಳನ್ನು ಗಮನಿಸಿದ ಉನ್ನತ ಶಿಕ್ಷಣ ಸಚಿವ .ಪಿ.ದೇಶಪಾಂಡೆ ಅವರು ಮರುಪರೀಕ್ಷೆ ಮಾಡುವುದಾಗಿ ? ಕೈ ತೊಳೆದುಕೊಂಡಿದ್ದಾರೆ. ಅಂತೂ, ಕರ್ನಾಟಕ ಕ್ಷಾ ಪ್ರಾಧಿಕಾರ ಮಾಡಿದ ತಪ್ಪಿಗೆ ವಿದ್ಯಾರ್ಥಿಗಳು ತೆತ್ತುವಂತಾಗಿದೆ.

- ಸರೋವರ್ ಬೆಂಕೀಕೆರೆ, ಈ ಮೇಲ್ ಮೂಲಕ

ಮೋದಿಯೇ ಯಾಕೆ?

'ಮೋದಿಯೇ ಯಾಕೆ?' ಈ ಪ್ರಶ್ನೆ ನನ್ನದಲ್ಲ, ನನ್ನಂತೆ ೋಚಿಸುವ ಹಲವರದ್ದು! ಇದಕ್ಕೆ ಉತ್ತರ ತೀರಾ ಸವೇನಲ್ಲ.



ದೇಶವೊಂದು ಯಾವುದೇ ತಳಮಳಗಳಿಲ್ಲದೆ ಗಿರುವಂತೆ ಕಂಡು ಬಂದಾಗಲೆಲ್ಲ ಇಂತಹ ಉಗ್ರ ಕರುಗಳು ತಲೆ ಎತ್ತುವುದನ್ನು ಇತಿಹಾಸದ ಪುಟಗಳಲ್ಲಿ ನೋಡಬಹುದಾಗಿದೆ. ಕಳೆದೆರಡು ದಶಕಗಳ ಭಾರತದ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ... ಒಂದು ... ಈ ನಾಡು ಜನಪರ ... ಬರಡಾಗಿರುವುದು ಮತ್ತು ದೇಶದ ಎಲ್ಲ ... ಸಾಧ್ಯವಾದ ಮಟ್ಟಿಗೆ ಒಟ್ಟಾಗಿ ಕರೆದೊಯ್ಯ ... ಬಾರದೇ ಇರುವುದು. ಒಂದು ... ಯಾವುದೇ ಜನಪರ ಚಳವಳಿಗಳಿರದೇ ... ಕಂಡುಬಂದಾಗ ಆ ದೇಶದ

ಯುವಕರಲ್ಲಿ ಹತಾಶೆ-ಅಸಹಾಯಕತೆ ಸೃಷ್ಟಿಯಾಗುತ್ತದೆ. ನಾಯಕನಿರದ-ಚಳವಳಿಗಳಿರದ ಬರಡು ನಾಡು ಸರ್ವಾಧಿಕಾರಿಯೊಬ್ಬನಿಗೆ ಕಾಯ ತೊಡಗುತ್ತದೆ ಮತ್ತು ಕೋಮುವಾದದ ಬೆಳೆ ತೆಗೆಯಲು ಹದಗೊಳ್ಳುತ್ತಾ ಹೋಗುತ್ತದೆ. ಇಂಡಿಯಾದ ಸದ್ಯದ ಸ್ಥಿತಿ ಇದೇ ತೆರನಾಗಿದೆ.

ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ-ಸಾಮಾಜಿಕ ಇಕ್ಕಟ್ಟುಗಳು- ದಲಿತ, ಹಿಂದುಳಿದ ವರ್ಗಗಳ ಮೇಲಿನ ನಿರಂತರ ದಬ್ಬಾಳಿಕೆಗಳು ಜನರನ್ನು ಹತಾಶೆಯ ಅಂಚಿಗೆ ತಳ್ಳಿವೆ. ಇಂತಹ ಸಂದರ್ಭದಲ್ಲಿ ಅಧಿಕಾರ ಹಿಡಿದ ಕಾಂಗ್ರೆಸ್ ಸಹ ಸಮರ್ಥ ನಾಯಕನೊಬ್ಬನನ್ನು ನೀಡುವಲ್ಲಿ ವಿಫಲವಾಗಿದೆ. ಮನಸ್ಸು ಮಾಡಿದ್ದರೆ ಅದು ಮನಮೋಹನ್ ಸಿಂಗರನ್ನು ಜನಪರ ನಾಯಕನನ್ನಾಗಿ ಬಿಂಬಿಸುವ ಅವಕಾಶ ಅದಕ್ಕಿತ್ತು, ಅವರ ಆರ್ಥಿಕ ವಿಚಾರಗಳ ಬಗ್ಗೆ ಯಾರಿಗೇನೇ ಭಿನ್ನಾಭಿಪ್ರಾಯಗಳಿದ್ದರೂ ಅವರನ್ನು ಜನ ಒಪ್ಪಿಕೊಳ್ಳುವಂತೆ ಮಾಡಬಹುದಿತ್ತು. ಆದರೆ ಗಾಂಧಿ ಕುಟುಂಬದ ಪಾದತಲದಲ್ಲಿ ಬಿದ್ದಿರುವ ಕಾಂಗ್ರೆಸ್ ಇಂತಹದೊಂದು ಅವಕಾಶವನ್ನು ಕಳೆದು ಕೊಂಡಿತು.

ಇದನ್ನು ಹೊರತಾಗಿ ಇಡೀ ಇಂಡಿಯಾದ ಮಟ್ಟಿಗೆ ಜನನಾಯಕರಾಗಬಲ್ಲ ಸಾಮರ್ಥ್ಯ ಹೊಂದಿದ ನಾಯಕನೊಬ್ಬ ಕಾಂಗ್ರೆಸ್‌ಅನ್ನು ಒಳಗೊಂಡಂತೆ ಇನ್ನಾವ ಪಕ್ಷಗಳಲ್ಲೂ ಸೃಷ್ಟಿಯಾಗಲೇ ಇಲ್ಲ.

ಇದೇ ಸಮಯಕ್ಕೆ ಸರಿಯಾಗಿ ಗೋಧ್ರಾ ಪ್ರಕರಣ ಮೋದಿಗೆ ನೆಗೆಟಿವ್ ಆದ ಪ್ರಚಾರ ತಂದುಕೊಟ್ಟಿತು. ಸೆಕ್ಯುಲರ್ ಶಕ್ತಿಗಳು ನೀಡಿದ ಪ್ರಚಾರವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡ ಪರಿವಾರಿಗಳು ಮೋದಿಯನ್ನು ಸಮಗ್ರ ಭಾರತದ ನಾಯಕನೆಂಬಂತೆ ಚಿತ್ರಿಸತೊಡಗಿದರು. ಸಂಘಪರಿವಾರದ ಇಂತಹ ಪ್ರಚಾರದಿಂದ ಮೋದಿಯನ್ನು ತಮ್ಮ ನಾಯಕನೆಂದು ಎಲ್ಲ ವರ್ಗಗಳ ಜನ ಒಪ್ಪಿಕೊಳ್ಳುವಂತಹ ವಾತಾವರಣ ನಿರ್ಮಾಣಗೊಂಡಿದೆ.

ಹೀಗಾಗಿ ಇವತ್ತು ಎಲ್ಲೆಡೆ ಮೋದಿ ಮೇನಿಯಾ ಶುರುವಾಗಿದೆ. ಬಂಡವಾಳಶಾಹಿಗಳ ಹಿಡಿತದಲ್ಲಿರುವ ಮೇಲ್ವರ್ಗದ ಮಾಧ್ಯಮಗಳು ಇದಕ್ಕೆ ಇಂಬು ಕೊಡುತ್ತಿವೆ.

- ಕು.ಸ.ಮಧುಸೂದನ್, ಈ ಮೇಲ್ ಮೂಲಕ

"ಹೆಚ್ಚಿನ ಪುರೋಹಿತರು/ ಅರ್ಚಕರು/ಪೂಜಾರಿಗಳೆಲ್ಲ ಪಕ್ಕಾ ನಾಸ್ತಿಕರು. ಅದಕ್ಕಾಗಿಯೇ ಅವರೆಲ್ಲಾ ಭಕ್ತರನ್ನು ಮಾತ್ರವಲ್ಲ ದೇವರನ್ನೂ ಮೋಸ ಮಾಡಲು ಸಾಧ್ಯವೆಂದು ಭಾವಿಸುತ್ತಾರೆ" ಎಂದು ಪ್ರವೀಣ್ ಎಸ್. ಶೆಟ್ಟಿಯವರು ತಮ್ಮ ಪತ್ರಿಕೆಯಲ್ಲೇ ಬರೆದಿದ್ದು ನನೆಪಿನಲ್ಲಿದೆ.

ಜೂನ್ 26, 2013ರ ಸಂಚಿಕೆಯಲ್ಲಿ 'ಮೇಲುಕೋಟೆ ನಾರಾಯಣನಿಗೇ ನಾಮ ತೀಡಿದ ಅರ್ಚಕ' ಎಂಬ ಲೇಖನವನ್ನು ಓದಿದಾಗ ಪ್ರವೀಣ್ ಎಸ್ ಶೆಟ್ಟಿಯವರ ಮಾತು ನಿಜವೆನಿಸಿತು. ಹೌದು ಅರ್ಚಕರೆಲ್ಲಾ ನಾಸ್ತಿಕರು, ಆದುದರಿಂದಲೇ ಕೊಂಚವೂ ಪಾಪದ ಭೀತಿಯಿಲ್ಲದೇ ಅವರೆಲ್ಲ ದೇವಸ್ಥಾನದ ಹಣ ಮತ್ತು ಆಭರಣಗಳನ್ನು ಕದ್ದು ಮಹಾ ದೈವದ್ರೋಹ ಮಾಡುವುದು!

- ವೀರಪ್ಪ. ಡಿ.ಎನ್, ಮಡಿಕೇರಿ

ಜೂನ್ 26, 2013ರ ಸಂಚಿಕೆಯ ಮುಖಪುಟದಲ್ಲಿದ್ದ 'ಹಿಟ್ಲರ್ ಬಂದ' ಎಂಬ ಶೀರ್ಷಿಕೆಯು ವಂಡರ್‌ಫುಲ್ ಆಗಿತ್ತು, ಸತ್ಯವನ್ನು ಢಂಟಾಘೋಷವಾಗಿ ಹೇಳಲು ಅಸಾಧಾರಣ ಛಾತಿ ಬೇಕು. ಪತ್ರಿಕೆಯ ಛಾತಿಗೆ ಸಾಟಿಯೇ ಇಲ್ಲ.

ನನ್ನ ಪ್ರಕಾರ ಮೋದಿಯನ್ನು ಬೆಂಬಲಿಸುವುದೆಂದರೆ ಮಾನವೀಯತೆಗೆ ಸಮಾಧಿ ಕಟ್ಟುವುದು ಎಂದರ್ಥ. ಭಾರತ ಹಿಟ್ಲರ್‌ನ ಜರ್ಮನಿ ಆಗಲು ಈ ದೇಶದ ಸೌಹಾರ್ದದ ಮನಸ್ಸುಗಳು ಹೇಗೆ ಬಿಟ್ಟಾವು? ನಮ್ಮ ಸಂವಿಧಾನವೇ ಗೆಲ್ಲುತ್ತೆ.


- ರವಿಕುಮಾರ್, ಹಾಸನ

ಸಿನಿಮಾದಲ್ಲಿ ವೇದಾಂತ ಹೇಳುವ ನಟಿ ಶೃತಿಯ ಸೆಕೆಂಡ್ ಮ್ಯಾರೇಜ್ ಬಗ್ಗೆ ಬರೆದದ್ದಲ್ಲದೆ ಲಫಂಗ ಚಂದ್ರಚೂಡನ ಬಣ್ಣವನ್ನು (ಜೂನ್ 19, 2013 ಸಂಚಿಕೆ) ಬಯಲು ಮಾಡಿದ್ದಕ್ಕೆ ಥ್ಯಾಂಕ್ಸ್. ಮಹಿಳೆಯರಿಗೆ ಮಾದರಿ ಆಗಬೇಕಿದ್ದ ಶೃತಿ ಈ ರೀತಿ ದಾರಿ ತಪ್ಪಿದ್ದೇಕೆ?

- ಬಿ.ಬಿ.ರಾಜ, ಹಂಪಸ್ವೈನ, ಎಚ್.ಬಿ.ಹಳ್ಳಿ



ಕಲ್ಲುಳಿ ವಿಠಲ್ ಹೆಗ್ಗಡೆ ಅವರು ಅಡಿಕೆ ಕುರಿತು ಬರೆದಿರುವ ವಿಶೇಷ ಲೇಖನದ ಬಗ್ಗೆ ನನ್ನ ಹಲವು ಅನಿಸಿಕೆಗಳು. ರಾಜ್ಯ ಸರ್ಕಾರ ಗುಟ್ಕಾವನ್ನು ನಿಷೇಧಿಸಿದೆಯೇ ಹೊರತು ಅಡಿಕೆಯನ್ನಲ್ಲ. 15ನೇ ವರ್ಷ ವಯಸ್ಸಿಗೆ ಆಸುಪಾಸಿರುವ ಮಕ್ಕಳು ಗುಟ್ಕಾ ತಿನ್ನುವುದು



ಅಪಾಯಕಾರಿಯಾಗಿತ್ತು, ಲೇಖನದಲ್ಲಿ ಗುಟ್ಕಾ ನಿಷೇಧದ ಹಿಂದೆ ಸಿಗರೇಟ್ ಲಾಬಿ ಇದೆ ಎಂದು ಬರೆಯಲಾಗಿದೆ. ಅದು ತಪ್ಪು ಕಲ್ಪನೆ. ಯಾಕೆಂದರೆ ಗುಟ್ಕಾ ತಿನ್ನುವುದನ್ನು ನಿರ್ಬಂಧಿಸಿದರೆ ಅವರೆಲ್ಲರೂ ಸಿಗರೇಟ್ ಸೇದಲು ಪ್ರಾರಂಭಿಸುವುದಿಲ್ಲ.

ನನ್ನ ನಿಕಟ ಸಂಬಂಧಿಗಳಲ್ಲಿ ಈಗಾಗಲೇ ಗುಟ್ಕಾ ತಿಂದು ಕ್ಯಾನ್ಸರ್, ಟಿಬಿಗೆ ಬಲಿಯಾದವರು ಇದ್ದಾರೆ. ನಮ್ಮಂತಹ ಪಾಲಕರು ಬೀದಿಗಿಳಿದು ತಂಬಾಕಿನ ಪದಾರ್ಥವನ್ನು ನಿಷೇಧಿಸಬೇಕೆಂದು ಹೋರಾಟ ಮಾಡುವುದು ಅನಿವಾರ್ಯವಾಗಿದೆ. ಆದರೆ ವಿರೋಧದ ಹೆಸರಿನಲ್ಲಿ ವಿರೋಧ ಪಕ್ಷದವರು ಸ್ಟಂಟ್ ಮಾಡುತ್ತಿದ್ದಾರೆ.

- ಅಬ್ದುಲ್ ವಹೀದ್, ಜೇವರ್ಗಿ

ಪತ್ರಿಕೆಯ ಜೂನ್ 19, 2013ರ ಸಂಚಿಕೆಯಲ್ಲಿ 'ಸಾಲದ ಸುಳಿಯಲ್ಲಿ' ಎಂಬ ಲೇಖನದಲ್ಲಿ ... ಅವರು ನವೆಂಬರ್ 5 ಶಿಕ್ಷಕರ ದಿನಾಚರಣೆ ಎಂದು ತಪ್ಪಾಗಿ ಬರೆದಿದ್ದಾರೆ. ವಾಸ್ತವವಾಗಿ ಶಿಕ್ಷಕರ ದಿನಾಚರಣೆಯು ಸೆಪ್ಟೆಂಬರ್ 5ರಂದು ಆಚರಿಸಲಾಗುತ್ತದೆ.


- ... ಎಸ್‌ಎಂಎಸ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಕಳು... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರಿಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01, Friday R B P LANKESH, Kannada Weekly Price Rs. 14/-



ಅರ್ಜುನ್ ಸರ್ಜಾ ಆಯ್ಕೆ ಮೆಚ್ಚುವಂಥದ್ದು



ಕಳೆದ ವರ್ಷವಷ್ಟೆ 'ಪ್ರಸಾದ್' ಎಂಬ ಚಿತ್ರಕ್ಕೆ ರಾಜ್ಯ ಸರ್ಕಾರದಿಂದ ಅತ್ಯುತ್ತಮ ನಟ ಪ್ರಶಸ್ತಿಯನ್ನು ಪಡೆದ ಅರ್ಜುನ್ ಸರ್ಜಾ ಇದರಿಂದ ಪ್ರೇರಿತರಾಗಿಯೋ ಏನೋ ಈಗ ಮೊಟ್ಟಮೊದಲ ಬಾರಿಗೆ ಕನ್ನಡ ಚಿತ್ರವೊಂದನ್ನು ನಿರ್ಮಿಸಿ-ನಿರ್ದೇಶಿಸಲು ಹೊರಟಿದ್ದಾರೆ.

ಅರ್ಜುನ್ ಸರ್ಜಾ ಕನ್ನಡದವರಾದರೂ ಅವರು ಕನ್ನಡ ಸಿನಿಮಾಗಳಲ್ಲಿ ಹೆಚ್ಚಾಗಿ ನಟಿಸುತ್ತಿಲ್ಲ, ಕನ್ನಡ ಸಿನಿಮಾಗಳನ್ನು ನಿರ್ಮಿಸುತ್ತಿಲ್ಲ ಮತ್ತು ನಿರ್ದೇಶಿಸುತ್ತಿಲ್ಲ ಎಂಬ ಹಲವು ಆರೋಪಗಳು ಅವರ ಮೇಲಿತ್ತು, ಆ ಎಲ್ಲ ಆರೋಪಗಳನ್ನು ನಿವಾರಿಸಲು ಅರ್ಜುನ್ ಸರ್ಜಾ ಅವರು ಈಗ 'ಅಭಿಮನ್ಯು' ಎಂಬ ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ.

ಸರ್ಜಾ ಅವರು ಈಗಾಗಲೇ ತಮಿಳಿನಲ್ಲಿ ಸುಮಾರು ಒಂಭತ್ತು ಚಿತ್ರಗಳನ್ನು ನಿರ್ದೇಶಿಸಿ, ಹಲವಾರು ಚಿತ್ರಗಳನ್ನು ನಿರ್ಮಿಸಿ ದೊಡ್ಡ ಹೆಸರು ಮಾಡಿದ್ದಾರೆ. ಜೊತೆಗೆ ತೆಲುಗು ಮತ್ತು ಮಲೆಯಾಳಂ ಚಿತ್ರಗಳಲ್ಲೂ ನಟಿಸಿದ್ದಾರೆ. ಈ ಕಾರಣಕ್ಕೇ ಇರಬಹುದು ಅವರು ಈಗ 'ಅಭಿಮನ್ಯು' ಚಿತ್ರವನ್ನು ಏಕಕಾಲದಲ್ಲಿ ಕನ್ನಡ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಮಾಡುತ್ತಿದ್ದಾರೆ.

ಅಷ್ಟೇ ಅಲ್ಲ, ಈ ಚಿತ್ರದ ಮುಖಾಂತರ ಅವರು ಕನ್ನಡದ ಇಬ್ಬರು ಪ್ರತಿಭಾವಂತ ತಂತ್ರಜ್ಞರನ್ನು ತಮಿಳು ಮತ್ತು ತೆಲುಗು ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದಾರೆ. ಅವರುಗಳೆಂದರೆ ಸಂಗೀತ ನಿರ್ದೇಶಕ ಹರಿಕೃಷ್ಣ ಮತ್ತು ಛಾಯಾಗ್ರಾಹಕ ವೇಣು.

ಇದು ಪಕ್ಕಾ ಕಮರ್ಷಿಯಲ್ ಚಿತ್ರವಾದರೂ ಅದರ ಕಥಾವಸ್ತುವನ್ನು ಅರ್ಜುನ್ ಸರ್ಜಾ ಆಯ್ಕೆ ಮಾಡಿಕೊಂಡ ರೀತಿ ಮೆಚ್ಚುವಂಥದ್ದು. ಮಾಜಿ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ ಅವರು ಬರೆದಿರುವ ಪುಸ್ತಕವೊಂದರಲ್ಲಿ ಪುಟ್ಟ ಬಾಲಕಿಯೊಬ್ಬಳು "ನಾನು ಮುಂದುವರಿದ ಭಾರತ ದೇಶದಲ್ಲಿ ವಿದ್ಯಾಭ್ಯಾಸ ಮಾಡಿ ಬದುಕಬೇಕೆಂದಿದ್ದೇನೆ" ಎಂದು ಹೇಳಿದ್ದ ವಾಕ್ಯವೇ ಇವರಿಗೆ ಈ ಚಿತ್ರದ ಕಥೆಯನ್ನು ಸಿದ್ಧಪಡಿಸಲು ಪ್ರೇರಣೆ ನೀಡಿದೆಯಂತೆ.

ಕಥೆಯೇ ಇಲ್ಲವೆಂದು ಕೊರಗುವ ಕನ್ನಡ ಸಿನಿಮಾ ನಿರ್ದೇಶಕರು ಅರ್ಜುನ್ ಸರ್ಜಾ ಅವರಿಂದ ಕಥೆಯನ್ನು ನೋಡುವ ಅಥವಾ ಹುಡುಕುವ ರೀತಿಯನ್ನು ಕಲಿಯಲಿ.

ಅದೇನೇ ಇರಲಿ, ತಮಿಳು ಚಿತ್ರೋದ್ಯಮಕ್ಕೆ ಹೋಗಿ ಎರಡು ದಶಕ ಹೆಚ್ಚುಕಾಲ ಅಲ್ಲಿ ವಿಜೃಂಭಿಸಿದ ಅರ್ಜುನ್ ಸರ್ಜಾ ತಡವಾಗಿಯಾದ ದೊಡ್ಡ ಮನಸ್ಸು ಮಾಡಿ ಕನ್ನಡ ಚಿತ್ರವೊಂದನ್ನು ನಿರ್ಮಿಸಿ- ನಿರ್ದೇಶಿಸ ಹೊರಟಿರುವುದು ಗಾಂಧಿನಗರದ ಮಟ್ಟಿಗೆ ಸಿಹಿ ಸುದ್ದಿ.

● ಶೆ

ಲಾಭ ಮಾಡಿಕೊಳ್ಳಲು!

'ನಮ್ಮೂರಲ್ಲೊಬ್ಬ ರಾಜ' ಎಂಬ ಚಿತ್ರದ ಬಗ್ಗೆ ಇನ್ನಷ್ಟು ಮಾಹಿತಿ ತಿಳಿದು ಬಂದಿದೆ. ದಿಗಂತ್ ಮತ್ತು ರಚಿತಾ ಜೋಡಿಯಾಗಿ ನಟಿಸಲಿರುವ ಈ ಚಿತ್ರವನ್ನು ದಿನಕರ್ ತೂಗುದೀಪ ನಿರ್ದೇಶಿಸುತ್ತಿರುವುದು ನಿಮಗೆ ಗೊತ್ತಿದೆ. ಎರಡು ವರ್ಷಗಳ ಹಿಂದೆ 'ಸಾರಥಿ'ಯಂತಹ ಹಿಟ್ ಚಿತ್ರವನ್ನು ನೀಡಿದ ನಂತರ ದಿನಕರ್ ಈಗ ಮತ್ತೆ ನಿರ್ದೇಶನಕ್ಕೆ ಕೈ ಹಾಕಿದ್ದಾರೆ. ಇದೀಗ ಬಂದ ಸುದ್ದಿಯಂತೆ ಅವರ ಸಹೋದರ ದರ್ಶನ್ ಈ ಚಿತ್ರದಲ್ಲಿ ಅತಿಥಿನಟನಾಗಿ ಕಾಣಿಸಿಕೊಳ್ಳಲು ಒಪ್ಪಿದ್ದಾರಂತೆ.

ಇನ್ನೊಂದು ವಿಶೇಷವೆಂದರೆ 'ಬುಲ್‌ಬುಲ್' ಚಿತ್ರವನ್ನು ನಿರ್ಮಿಸಿದ ಮಾದರಿಯಲ್ಲೇ ಈ ಚಿತ್ರವನ್ನೂ ನಿರ್ಮಿಸಲಾಗುತ್ತಿದೆ. ಅಂದರೆ ಚಿತ್ರದ ಕಥೆಗಾರ ಚಿಂತನ್, ಹಂಚಿಕೆದಾರ ಮಲ್ಲಿಕಾರ್ಜುನ್, ಕ್ಯಾಷಿಯರ್ ಶ್ರೀನಿವಾಸ್ ಮತ್ತು ನಿರ್ದೇಶಕ ದಿನಕರ್ ಈ ನಾಲ್ಕು ಜನ ಜೊತೆಗೂಡಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರಂತೆ. ಅಂದರೆ ತಮ್ಮ ಜೊತೆಜೊತೆಗೆ ತಮ್ಮನ್ನು ನಂಬಿರುವವರೂ ಒಂದಿಷ್ಟು ಲಾಭ ಮಾಡಿಕೊಳ್ಳಲಿ ಎಂಬ ದರ್ಶನ್ ಅವರ ಉದಾರತೆ ಈ ಚಿತ್ರದಲ್ಲೂ ಮುಂದುವರಿಯುತ್ತಿದೆ.



ನಯನಾ ಕೃಷ್ಣ ನಿರ್ಮಾಪಕಿ?

ನಯನಾ ಕೃಷ್ಣ ಎಂಬ ನಟಿಯ ಹೆಸರು ನೆನಪಿದೆಯಾ? 'ಕೊಟ್ಲಲ್ಲಪ್ಪಾ ಕೈ' ಎಂ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ ನಯನಾ ಆನಂತರ ಆ ಚಿತ್ರದ ನಿರ್ದೇಶಕ ಋಷಿ ಜೊ ಜಗಳ ಮಾಡಿಕೊಂಡು ಆತನಿಗೆ ಚಪ್ಪಲಿ ಮೋಕ್ಷ ನೀಡಿ ಸುದ್ದಿ ಮಾಡಿದ್ದಳು. ವಿವಾದದಿಂದಾಗಿ ಆಕೆಗೆ ಒಂದೆರಡು ಟಿವಿ ಚಾನೆಲ್‌ಗಳಿಂದ ಚರ್ಚೆಗೆ ಕರೆ ಬಂದಿತ್ತೇ ಹೊರತು ಯಾವ ಹೊಸ ಅವಕಾಶಗಳೂ ಸಿಕ್ಕಿರಲಿಲ್ಲ.

ಈಗ ನೋಡಿದರೆ ನಯನಾ ಕೃಷ್ಣ ಧೈರ್ಯ ಮಾಡಿ ತಾನೇ ಚಿತ್ರವೊಂದನ್ನು ನಿರ್ಮಿಸಲು ಹೊರಟಿದ್ದಾಳೆ. ಹಣವಂತನೊಬ್ಬ ಆಕೆಗೆ ಪಾಲುದಾರನಾಗಿ ಸಿಕ್ಕಿರುವ ಸುದ್ದಿಯೂ ತಿಳಿದುಬಂದಿದೆ. ಈ ತಿಂಗಳ ಕೊನೆಯಲ್ಲಿ ನಯನಾ ಕೃಷ್ಣರ ಚೊಚ್ಚಲ ನಿರ್ಮಾಣದ ಚಿತ್ರ ಸೆಟ್ಟೇರಲಿದೆಯಂತೆ.

ಈಗ ನಮ್ಮ ಪ್ರಶ್ನೆ ಇಷ್ಟೆ: ಗಂಡುಬೀರಿಯಂತಿರುವ ನಯನಾ ಅಂದು ನಿರ್ದೇಶಕನ ವಿರುದ್ಧವೇ ತಿರುಗಿ ಬಿದ್ದಾಗ ಆಕೆಯ ಧೈರ್ಯವನ್ನು ಕೊಂಡಾಡಿದ್ದ ಕೆಲವು ಕಲಾವಿದರು ಈಗ ಆಕೆಯ ಚಿತ್ರದಲ್ಲಿ ನಟಿಸಲು ಮುಂದೆ ಬರುತ್ತಾರೆಯೇ?



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Phone
Fax : 26604536